
# ಕೊಡಗು ಸಂಗಾತಿ


ಮಾರ್ಚ್ 16 ರಿಂದ 31, 2001 ಪಾಕ್ಷಿಕ ಪತ್ರಿಕೆ (ಸುಗ್ಗಿ 2-17)

ನಂ. ೩೫, ಸವಿತಾ ನಿಲಯ, ೧ನೇ ಕ್ರಾಸ್, ೪ನೇ ಬ್ಲಾಕ್, ಜಯಲಕ್ಷ್ಮಿಪುರಂ, ಮೈಸೂರು - ೫೭೦ ೦೧೨

ಸಂಪಾದಕಿ : ಪಟ್ಟಡ ಶೀಲಾಮಣಿ Registered : 10-01-96 TCI Kar. 09592 ಕನ್ನಡ ಮತ್ತು ಅರೆಭಾಷೆಯಲ್ಲಿ ಪ್ರಕಟಿತ


Reg. No. KA/SK/MYS-88 ಸಂಪುಟ : 5 ಸಂಚಿಕೆ : 6 ಪುಟಗಳು : 24 ಬೆಲೆ ರೂ. : 6-00


ಮಂಡ್ಯದ ನಾಗಮಂಗಲ ತಾಲ್ಲೂಕಿನಲ್ಲಿರುವ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ.

ನಾಡಿನ ಸರ್ವಜನತೆಗೆ ಯುಗಾದಿಯ ಶುಭಾಶಯಗಳು

## ಜೀವಾವಧಿ ಸದಸ್ಯತನ ಕೊಟ್ಟೊಳೊ



ವೀರರಾಜಪೇಟೆ ತಾಲ್ಲೂಕು ಕೆದಮುಳ್ಳೂರು ಗ್ರಾಮದ ಶ್ರೀ ಪೊಕ್ಕುಳಂಡ್ರ ಸುಬ್ಬಯ್ಯ ದಂಪತಿಗ ಇವು ಪತ್ರಿಕೆಯ ಅಭಿವೃದ್ಧಿ ಬಯಸಿ ಜೀವಾವಧಿ ಸದಸ್ಯತನ ಕೊಟ್ಟೊಳೊ. ಮದುವೆ ಆಗಿ 46 ಸಂವತ್ಸರಗಳ್ನ ಕಳ್ದ ಇವುಕೆ ಕುಲದೇವ್ರು ವೆಂಕಟ ರಮಣನ ಕೃಪಾಕಟಾಕ್ಷ ಸದಾ ಇರಲಿತ್ತೇಳಿ ಸಂಗಾತಿ ಶುಭ ಹಾರೈಸಿದೆ. ಹಂಗೆನೆ ಇವರ ಪೂರ್ಣ ಪರಿಚಯನ ಸಂಗಾತಿ ಸಂಪುಟ 4, ಸಂಚಿಕೆ 7ರ್ಲಿ ನೀಡ್ಯಳೊ.

– ಸಂಪಾದಕಿ

## ಕೊಡಗು ಸಂಗಾತಿಯ ಸಂಚಾಲಕ, ಪ್ರತಿನಿಧಿ, ವರದಿ, ಕಲೆಕ್ಷನ್ ಜಾಹೀರಾತು ಇತ್ಯಾದಿಗಾಗಿ ಶ್ರೀ ಪಟ್ಟೆಮನೆ ಶೇಷಪ್ಪನವರು ಆಯ್ಕೆ.



ಕೊಡಗು ಸಂಗಾತಿ ಪತ್ರಿಕೆಯ ಸಂಚಾಲಕ, ಪ್ರತಿನಿಧಿಯಾಗಿ ಶ್ರೀ ಪಟ್ಟೆಮನೆ ಶೇಷಪ್ಪ ಇವರನ್ನು ಅವರ ವಿನಂತಿ ಮೇರೆ ಆಯ್ಕೆ ಮಾಡಲಾಗಿದೆ. ಇವರು ಸುಂಟಿಕೊಪ್ಪ, ಉಲುಗುಲಿ, ಚೆಟ್ಟಳ್ಳಿ, ಮತ್ತಿಕಾಡು, 7ನೇ ಹೊಸಕೋಟೆ, ಕಂಬಿಬಾಣೆ, ನಾರ್ಗಾಣೆ, ನಾಗೂರು, ನಾಕೂರು ಶಿರಂಗಾಲ, ಗದ್ದೆಹಳ್ಳ, ಕಾನ್‌ಬೈಲ್, ಹೇರೂರು, ಗರಗಂದೂರು, ಮಾದಾಪುರ, ಹಾಲೇರಿ, ಕೆದಕಲ್ ಇತ್ಯಾದಿಯಾಗಿ ಸುಂಟಿಕೊಪ್ಪ ನಾಡಿಗೆ ಸಂಬಂಧ ಪಟ್ಟಂತೆ ಕಾರ್ಯನಿರ್ವಹಿಸಲು ಅನುವು ನೀಡಲಾಗಿದೆ. ಸಹೃದಯ ಓದುಗರು ಶ್ರೀಯುತರಿಗೆ ಸಹಕರಿಸುವಂತೆ ಕೋರಿಕೆ.

ನಿರ್ಮಲಾ ಎಂಟರ್‌ಪ್ರೈಸಸ್, ಸುಂಟಿಕೊಪ್ಪ ಬಸ್ ಸ್ಟ್ಯಾಂಡ್ ☎ : 62669 ಸುಂಟಿಕೊಪ್ಪ – ಸಂಪಾದಕಿ


ಹಾರ್ದಿಕ ಶುಭಾಶಯಗಳೊಂದಿಗೆ : **ಎನ್. ಜೆ. ಪ್ರಿಂಟರ್ಸ್**

ಕ್ಲಬ್ ರಸ್ತೆ, ಸರ್ಕಾರಿ ಬಸ್ ನಿಲ್ದಾಣದ ಎದುರು, ಸೋಮವಾರಪೇಟೆ

ಹಾಗೂ ಕುಶಾಲನಗರದಲ್ಲಿ ತಮ್ಮ ಸೇವೆಗೆ ಸದಾ ಸಿದ್ಧ

**ಚಂದ್ರು ಪ್ರಿಂಟ್ ಟೆಕ್**

ಕಾವೇರಿ ಕಾಂಪ್ಲೆಕ್ಸ್, ಕೊನಿಕಾ ಕಲರ್ ಲ್ಯಾಬ್ ಹಿಂಭಾಗ, ಮಡಿಕೇರಿ ರಸ್ತೆ, ಕುಶಾಲನಗರ - 571 234


ನಮ್ಮಲ್ಲಿ ಮದುವೆ ಮತ್ತೆ ಇನ್ನಿತರ ಸಭೆ ಸಮಾರಂಭಗಳಗೆ ಬೇಕಾಗುವ ಆಹ್ವಾನ ಪತ್ರಿಕೆ, ಬಿಲ್ ಪುಸ್ತಕಗಳ ಪ್ರಿಟಿಂಗ್, ಡಿ.ಟಿ.ಪಿ., ಸ್ಕ್ರೀನ್ ಪ್ರಿಂಟಿಂಗ್, ಫೋಟೋ ಸ್ಕ್ಯಾನಿಂಗ್, ರಬ್ಬರ್ ಸ್ಟಾಂಪು, ಬುಕ್ ಬೈಡಿಂಗ್ ಮತ್ತೆ ಜೆರಾಕ್ಸ್ ಕೆಲಸಗಳ್ನ ಬಾರೀ ಲಾಯ್ಕಾಗಿ ಸಕಾಲದಲ್ಲಿ ಮಾಡಿ ಕೊಟ್ಟವೆ.

ಮಾಲೀಕರು :
ನಂಗಾರು ಸಿ. ಚಂದ್ರಕುಮಾರ್

"ನಿಮ್ಮ ತೃಪ್ತಿಯೇ ನಮ್ಮ ಧ್ಯೇಯ" ☎ : 08276-71040 (S) 87544 (R)

*ಎಲ್ಲಾ ತರಹದ ಮುದ್ರಣಕ್ಕೆ ಒಮ್ಮೆ ಭೇಟಿ ಕೊಟ್ಟ್, ನೋಡಿ ಹೆಂಗುಟ್ಟುತ ಗೊತ್ತಾದೆ ಆಗ*


## ಕೇಂದ್ರ ಜವಳಿ ನಿಗಮದ ನಿರ್ದೇಶಕರಾಗಿ ತಳೂರ್ ಕಿಶೋರ್‌ಕುಮಾರ್



ಕೇಂದ್ರೀಯ ಕೈ ಮಗ್ಗ ಮತ್ತು ಜವಳಿ ನಿಗಮದ ನಾಮಕರಣ ನಿರ್ದೇಶಕರಾಗಿ ಬೆಟ್ಟಗೇರಿಯ ಟಿ. ಎ. ಕಿಶೋರ್‌ಕುಮಾರ್ ಅವರನ್ನು ನೇಮಕ ಮಾಡಲಾಗಿದೆ.

ಕೇಂದ್ರ ಸರಕಾರದಿಂದ ಹೊರಡಿಸಲಾಗಿರುವ ಅಧಿಕೃತ ಸುತ್ತೋಲೆಯನ್ನು ಈ ನಿಗಮಕ್ಕೆ ಒಟ್ಟು 29 ಮಂದಿಯನ್ನು ನೇಮಿಸಿದ್ದು, ಆ ಪೈಕಿ 20 ಮಂದಿ ಕೇಂದ್ರ ಮತ್ತು ರಾಜ್ಯದ ಬೇರೆ ಬೇರೆ ಅಧಿಕಾರಿಗಳು, ಕಾರ್ಯದರ್ಶಿಗಳಿದ್ದಾರೆ.

ಉಳಿದಂತೆ ಸಾರ್ವಜನಿಕ ಕ್ಷೇತ್ರದಿಂದ 9 ಮಂದಿ ನಿರ್ದೇಶಕರುಗಳಿದ್ದು, ಈ ಪೈಕಿ ಕರ್ನಾಟಕದ ಏಕೈಕ ಸದಸ್ಯರಾಗಿ ತಳೂರು ಎ. ಕಿಶೋರ್‌ಕುಮಾರ್ ಅವರನ್ನು ನೇಮಕ ಗೊಳಿಸಲಾಗಿದೆ. ಇವರ ಅಧಿಕಾರದ ಅವಧಿಯು ಮುಂದಿನ ಐದು ವರ್ಷಗಳವರೆಗೆ ಇರುವುದಾಗಿದೆ.

ಮಡಿಕೇರಿ ತಾಲ್ಲೂಕು ಬಿಜೆಪಿ ಪ್ರಧಾನ ಕಾರ್ಯದರ್ಶಿಯಾಗಿರುವ ಕಿಶೋರ್‌ಕುಮಾರ್ ಅವರು ಎಂ. ಎ. ಪದವೀಧರರಾಗಿದ್ದು, ಬೆಟ್ಟಗೇರಿ ಉದಯ ಪ್ರೌಢಶಾಲೆ, ವಿಎಸ್ಸೆಸ್ಸೆಎನ್ ಬ್ಯಾಂಕ್‌ಗಳ ಅಧ್ಯಕ್ಷರಾಗಿ, ನಿರ್ದೇಶಕರಾಗಿ ಸೇವೆ ಸಲ್ಲಿಸುವದರೊಂದಿಗೆ ಪಕ್ಷದ ಸಕ್ರೀಯ ಕಾರ್ಯಕರ್ತರಾಗಿದ್ದಾರೆ. ಇವರು ಇನ್ನುಹೆಚ್ಚಿನ ಉನ್ನತಿಗೇರಲೆಂಬುದಾಗಿ ಸಂಗಾತಿ ಬಯಸುತ್ತದೆ.

– ಸಂಪಾದಕಿ

# 2001, ಮಾರ್ಚ್ 16 ರಿಂದ 31 ರ ತನಕ

## ಒಳನೋಟ



| ಕನ್ನಡ ವಿಭಾಗ | ಲೇಖಕರು | ಪುಟಗಳು |
|---|---|---|
| ಕೊಡಗಿನಲ್ಲಿ ತುಂಬಿ ಬೆಳೆಯುವುದಕ್ಕಾಗಿ ಅರಣ್ಯಗಳ ನಾಶ | - ಸಂಪಾದಕೀಯ | 02 |
| ಹೆರವನಾಡು ಮತ್ತು ಅವಂದೂರು ಗ್ರಾಮಸ್ಥರಿಂದ ಶ್ರಮದಾನ ಪಾಳು ದೇಗುಲ ಜೀರ್ಣೋದ್ಧಾರಕ್ಕೆ ಸಂಕಲ್ಪ | - ಸಂಗಾತಿ | 02 |
| ಸಂಪಾದಕರಿಗೆ ಪತ್ರ, | - ಪ್ರೊ\|\| ಪೂಜಾರಿ ಮೊಣ್ಣಪ್ಪ | 03 |
| ಅಯ್ಯಂಗೇರಿಯಲ್ಲಿ ಇತ್ತೀಚೆಗೆ ವೈಶಿಷ್ಟ್ಯಪೂರ್ಣವಾಗಿ ಜರುಗಿದ ಶ್ರೀ ಚಿನ್ನತಪ್ಪ ದೇವರ ಉತ್ಸವ. | - ಕುಯ್ಯಮುಡಿ ಸುನಿಲ್. | 04 |
| ಸಮರಭೂಮಿಯಲ್ಲಿ ಸಮಾರೋಪ ಭಾಷಣ ಸುಳ್ಯ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮಾಡಿದ ಶ್ರೀ ದೇವಿಪ್ರಸಾದ್‌ರ ಸಮಾರೋಪ ಭಾಷಣ | - ಶ್ರೀ ನಂಜೇಗೌಡನ ಯಸ್. ದೇವಿಪ್ರಸಾದ್, | 06 |
| ಕವನ : ನನ್ನ ಪ್ರಿಯೆ | - ಪೇರಿಯನ ವಿವೇಕ್ | 08 |
| ಕೆಂಚನೂ..... | - ಬಿ. ಆರ್. ಜೋಯಪ್ಪ | 09 |
| ನಿಮಗಿದು ಗೊತ್ತೆ? | - ಕಡ್ಯದ ಧನು | 11 |
| ಹಿತ್ತಲ ಮದ್ದು | - ಹೊಸೂರು ತುಳಸಿಮಾಲ | 11 |
| ಆದಿಚುಂಚನಗಿರಿ | - ಬೈತಡ್ಕ ಜಾನಕಿ | 12 |
| ಸಂಗಾತಿ ಪದಬಂಧ — ೩ | - ಬೈತಡ್ಕ ಶ್ರೀಧರ | 13 |
| ಅರೆಭಾಷೆಯ ಸರಳ ವಾಕ್ಯಗಳು | - ಬೈತಡ್ಕ ಜಾನಕಿ | 14 |
| ಕವನ : ಕೊಡಗಿನ ಬೆಡಗು | - ಅಣ್ಣೆಚೀರಾ ಭಾರತಿ ಸೋಮಣ್ಣ | 14 |
| ಕವನ : ನೀ ನನ್ನ ಮರೆಯುವ ಮುನ್ನ | - ಕಿರಣ್ | 18 |
| ಕವನ : ಇಲಿಗಳ ಬೇಟೆ | - ವಾಣಿಕುಮಾರ್ | 19 |
| **ಅರೆಭಾಷಿಕ ವಿಭಾಗ** | | |
| ವಾಂಟೆಡ್ ಮಿಸ್ಟರ್ ರಾಜು - ಧಾರಾವಾಹಿ - 29 | - ಶಂಕರನ ಬಸಪ್ಪ | 15 |
| ಅರೆಭಾಷೆಲಿ ಮಾದರಿ ಲಗ್ನ ಪತ್ರಿಕೆ | - ಸಂಗಾತಿ | 18 |
| ಮನಸ್ಸ್ - 6 | - ಪಟ್ಟಡ ಪ್ರಭಾಕರ | 18 |
| ಪತ್ರವಿಭಾಗ | - ಸಂಗಾತಿ ವರದಿ | 19 |
| ಸಂಗಾತಿ ಪದಬಂಧ — ೨. ರ ಉತ್ತರ 'ಸಿಂಚನ' | - ಅಚ್ಚಲ್ಪಾಡಿ ಕವಿತ ಬೋಜಪ್ಪ | 20 |





| | |
|---|---|
| ಚಂದಾ ಕಳುಹಿಸುವ ಮತ್ತು ಜಾಹೀರಾತು ಪ್ರಸಾರ ಕಛೇರಿ | **ಕೊಡಗು ಸಂಗಾತಿ**, 35,"ಸವಿತಾ ನಿಲಯ", 1ನೇ ಕ್ರಾಸ್, 4ನೇ ಬ್ಲಾಕ್, ಜಯಲಕ್ಷ್ಮಿಪುರಂ, ಮೈಸೂರು - 12. ಫೋನ್ : **95821/516771** |
| ಮಡಿಕೇರಿಯಲ್ಲಿ ಸಂಗಾತಿ ಕಛೇರಿ | ಬೈತಡ್ಕ ಜಾನಕಿ ಬೆಳ್ಯಪ್ಪ,,ನಂ. 21-16 ಎಲ್. ಐ. ಸಿ. ಹತ್ತಿರ, ರೇಸ್ ಕೋರ್ಸ್ ರಸ್ತೆ, ಮಡಿಕೇರಿ, ಫೋನ್ : **08272/28047** |
| ಚಿಪ್ಪೆ, ಹಸೆಮಣೆ/ಶುಭಾಶಯ ಕಾರ್ಡ್ಸ್ ಕ್ಯಾಸೆಟ್/ಕೀ ಚೈನ್ ಲಭ್ಯ | ಕುಂಭಗೌಡನ ಪ್ರವೀಣ್‌ಕುಮಾರ್, ವೆಜಿಟೆಬಲ್ ಶಾಪ್, ಪಾಂಡನ ಕಾಂಪೌಂಡ್, ಅಪ್ಪಯ್ಯಗೌಡ ರಸ್ತೆ, ಮಡಿಕೇರಿ, |
| ಕುಶಾಲ ನಗರ | ಕುಂಭಗೌಡನ ಸೋಮಣ್ಣ, ಮಯೂರ ಕೋಲ್ಡ್ ಸ್ಟೋರೇಜ್, ಮುಖ್ಯ ರಸ್ತೆ, ಕುಶಾಲನಗರ - 571 234 ಫೋನ್ : 08276/73370 |
| ಬೆಂಗಳೂರು ಮಹಾನಗರ | ಕಲ್ಲುಮುಟ್ಲು ಬಸಪ್ಪ, ನಂ. 37, 3ನೇ ಮೇನ್, ನಂಜಪ್ಪ ಬ್ಲಾಕ್, ಕೆಂಪೇಗೌಡ ನಗರ, ಬೆಂಗಳೂರು -19,ಫೋನ್ : 080/6500946 |

ಚಂದಾ ವಿವರ : ಜೀವಾವಧಿ ಸದಸ್ಯತನ - **2000** ರೂ., ಬಿಡಿ ಪ್ರತಿ - **6** ರೂ., ಅರ್ಧ ವಾರ್ಷಿಕ -75 ರೂ., ವಾರ್ಷಿಕ ಚಂದಾ - **150** ರೂ. (ಅಂಚೆ ವೆಚ್ಚ ಸೇರಿ), ಇಂದೇ ಸದಸ್ಯರಾಗಿ ಕೊಂಡು ಓದಿ.

# ಸಂಪಾದಕೀಯ : ಕೊಡಗಿನಲ್ಲಿ ಶುಂಠಿ ಬೆಳೆಯುವುದಕ್ಕಾಗಿ ಅರಣ್ಯಗಳ ನಾಶ

ಕೊಡಗಿನಲ್ಲಿ ಈಗ ಎರಡು ಮೂರು ವರ್ಷಗಳಿಂದ ಶುಂಠಿ ಬೆಳೆಯನ್ನ ಬೆಳೆಸುವುದಕ್ಕಾಗಿ ಅಲ್ಪಸ್ವಲ್ಪ ಉಳಿದಿರುವ ಕಾಡುಗಳಲ್ಲಿರುವ ಮರಗಳನ್ನು ಕಡಿದು ಬಟ್ಟಂಬೈಲು ಮಾಡುತ್ತಿರುವ ದೃಶ್ಯವನ್ನು ನೋಡಿದರೆ ಇನ್ನು ಹತ್ತು ವರ್ಷಗಳಲ್ಲಿ ಕೊಡಗಿನಲ್ಲಿ ಮರ ಕಾಡೇ ಉಳಿಯುವ ಪರಿಸ್ಥಿತಿಯಲ್ಲಿದೆ. ಕೊಡಗಿನವರ ಕಥೆ ಹಿಂದೆ ಒಬ್ಬನ ಹತ್ತಿರ ಚಿನ್ನದ ಮೊಟ್ಟೆಯನ್ನಿಡುವ ಕೋಳಿ ಇತ್ತಂತೆ, ಆಕೋಳಿ ದಿನಕ್ಕೆ ಒಂದು ಮೊಟ್ಟೆ ಹಾಕಿದರು ಕೋಳಿ ಸಾಕಿದವನಿಗೆ ತೃಪ್ತಿಯಾಗಲಿಲ್ಲ. ಆದ್ದರಿಂದ ಅವನು ಚಿನ್ನದ ಮೊಟ್ಟೆ ಹಾಕುವ ಕೋಳಿಯ ಹೊಟ್ಟೆಯನ್ನ ಸೀಳಿದರೆ ಒಮ್ಮೆಲೇ ತುಂಬಾ ಮೊಟ್ಟೆ ಸಿಗಬಹುದೆಂಬ ಅತಿ ಆಸೆಯಿಂದ ಚಿನ್ನದ ಮೊಟ್ಟೆ ಹಾಕುವ ಕೋಳಿಯನ್ನ ಕೊಂದು ಅದರ ಹೊಟ್ಟೆಯನ್ನು ಸೀಳಿದಾಗ ಚಿನ್ನದ ಮೊಟ್ಟೆ ಸಿಗಲಿಲ್ಲವಂತೆ ಸಾಕಿದ ಮನುಷ್ಯನಿಗೆ ಕೋಳಿಯೂ ಹೋಯಿತು ಮೊಟ್ಟೆಯೂ ಸಿಗಲಿಲ್ಲವಂತೆ. ಅದೇ ರೀತಿ ಕೊಡಗಿನ ಜನರು ಅವರೇನೂ ಬೆಳೆಸದ ತಮ್ಮ ಹಿರಿಯರು ಕಾಪಾಡಿಕೊಂಡು ಬಂದ ತಮ್ಮ ಹಿಡುವಳಿಗಳಿಗೆ ಸೇರಿದ ಕಾಡನ್ನು ಕಡಿದು ಶುಂಠಿ ಬೆಳೆಸಿದರೆ ಹೆಚ್ಚು ಹಣವನ್ನು ಗಳಿಸುವ ಅತಿ ಆಸೆಯಿಂದ ಕಾಡನ್ನು ಕಡಿದು ಅದರಲ್ಲಿರುವ ಕಾಡು ಜಾತಿಯ ಮರಗಳನ್ನು ಕಡಿದು ಸಿಕ್ಕಿದ ಬೆಲೆಗೆ ಸೌದೆಯನ್ನು ಮಾರುತ್ತಿದ್ದಾರೆ. ಯಾಲಕ್ಕಿ ತೋಟಗಳಲ್ಲಿದ್ದ ಮರಗಳನ್ನು ಮರವ್ಯಾಪಾರಿಗಳು ಕೊಡುವ ಅರ್ಧಂಬರ್ಧ ಬೆಲೆಗೆ ಮಾರಾಟ ಮಾಡಿ ಅಲ್ಲಿ ಕಾಫಿ ತೋಟವನ್ನು ಮಾಡಿದರು. ಈಗ ಕಾಫಿಗೂ ಬೆಲೆ ಕುಸಿದು ಕಾಫಿ ತೋಟದವರು ಕಂಗಾಲಾಗಿದ್ದಾರೆ.

ಸರ್ಕಾರದವರು ಒಂದು ಮರ ಕಡಿದರೆ ಹತ್ತು ಮರ ನೆಡಬೇಕೆಂದು ನಿರ್ಧರಿಸಿದ್ದರೂ ಆ ನಿರ್ಧಾರವೆಲ್ಲಾ ಗಾಳಿಗೆ ತೂರಿ ಹೋಗಿದೆ. ಈ ರೀತಿ ಜನರಿಗೆ ತೋಚಿದ ರೀತಿಯಲ್ಲಿ ಮರಗಳನ್ನು ಕಡಿಯುವುದನ್ನು ಸರ್ಕಾರ ಏನುಕ್ರಮ ಕೈಗೊಂಡಿದೆ ಎಂದು ಸಂಗಾತಿಯ ಪ್ರಶ್ನೆ.


# ಹೆರವನಾಡು ಮತ್ತು ಅವಂದೂರು ಗ್ರಾಮಸ್ಥರಿಂದ ಶ್ರಮದಾನ ಪಾಳು ದೇಗುಲ ಜೀರ್ಣೋದ್ಧಾರಕ್ಕೆ ಸಂಕಲ್ಪ

ಮಡಿಕೇರಿ ಸಮೀಪದ ಹೆರವನಾಡುವಿನಲ್ಲಿ ಟಿಪ್ಪುವಿನ ಧಾಳಿಗೆ ಸಿಲುಕಿ ವಿಘ್ನಗೊಂಡು ಕಾಡುಪಾಲಾಗಿದ್ದ ಎನ್ನಲಾದ 'ಮಾಧೂರಪ್ಪ' ಶಿವದೇವಾಲಯ ಆವರಣದಲ್ಲಿ ಗ್ರಾಮಸ್ಥರು ಶ್ರಮದಾನದ ಮುಖಾಂತರ ಈ ದೇಗುಲವನ್ನು ಜೀರ್ಣೋದ್ಧಾರಗೊಳಿಸುವ ಬಗ್ಗೆ ಸಂಕಲ್ಪ ಸ್ವೀಕರಿಸಿದ್ದಾರೆ.

ಹೆರವನಾಡು ಹಾಗೂ ಅವಂದೂರಿನ ಗ್ರಾಮಸ್ಥರು ಅಂದು ಬೆಳಿಗ್ಗೆಯಿಂದಲೇ ಮಹಿಳೆಯರು, ಮಕ್ಕಳು ಸೇರಿದಂತೆ ದೇಗುಲವನ್ನು ಆವರಿಸಿದ್ದ ಕಾಡುಗಳನ್ನು ಕಡಿದು ಹಳೆಯ ಗುಡಿಯ ಅವಶೇಷಗಳನ್ನು ಕಂಡು ಅಚ್ಚರಿ ವ್ಯಕ್ತಿಪಡಿಸುತ್ತಿದ್ದದ್ದು ಗೋಚರಿಸಿತು.



ಸ್ಥಳೀಯ ನಾಯಕ ಅರಂಬೂರು ವಸಂತ ಮತ್ತು ಅವಂದೂರು ಪಂಚಾಯಿತಿ ಸದಸ್ಯ ಪಟ್ಟಡ ಉಲ್ಲಾಸ ಹಾಗೂ ಗ್ರಾಮಸ್ಥರ ಸಹಕಾರದೊಂದಿಗೆ ದುರಸ್ತಿ ಕಾರ್ಯದಲ್ಲಿ ತೊಡಗಿರುವ ದೃಶ್ಯ.



ಶ್ರಮದಾನದಿಂದ ದೇವಾಲಯ ಆವರಣದ ಕಾಡು ನಿರ್ಮೂಲನೆಗೊಳಿಸಿರುವ ದೃಶ್ಯ

ಸುಮಾರು ಒಂದು ಎಕರೆ ಪ್ರದೇಶವನ್ನು ಆವರಿಸಿಕೊಂಡಿದ್ದ ಪಾಳು ದೇವಾಲಯ ಪ್ರಾಂಗಣವನ್ನು ಕಾಡಿನಿಂದ ಬೇರ್ಪಡಿಸಿದ ಗ್ರಾಮಸ್ಥರು, ಮುಂದೆ ಈ ದೇವಾಲಯದ ಜೀರ್ಣೋದ್ಧಾರಕ್ಕಾಗಿ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆ ಹಾಗೂ ಸರಕಾರದ ಮುಜರಾಯಿ ಸಚಿವರು ಮತ್ತು ಜಿಲ್ಲಾಧಿಕಾರಿ ಅವರನ್ನು ಭೇಟಿ ಮಾಡಿ ಬಳಿಕ ಯೋಜನೆ ರೂಪಿಸುವದಾಗಿ ಸ್ಥಳಕ್ಕೆ ಭೇಟಿ ನೀಡಿದ ಪತ್ರಿಕೆ ಬಳಗದೊಂದಿಗೆ ವಿವರಿಸಿದರು. ಶ್ರಮದಾನದ ನೇತೃತ್ವವನ್ನು ಗ್ರಾಮದ ಹಿರಿಯರಾದ ಬೊಳ್ಳಿಯಂಡ ತಿಮ್ಮಯ್ಯ, ಸ್ಥಳೀಯ ನಾಯಕ ಅರಂಬೂರು ವಸಂತ, ಅವಂದೂರು ಪಂಚಾಯಿತಿ ಸದಸ್ಯ ಪಟ್ಟಡ ಉಲ್ಲಾಸ, ಮೊದಲಾದವರು ವಹಿಸಿದ್ದರು ಎಂದು ಸಂಗಾತಿಗೆ ತಿಳಿದು ಬಂದಿದೆ.

ಉಪ್ಪು ತಿಂದ ಮನೆಗೆ ಎರ್ಡ್ ಬಗೆಕ್ಕಾಗದ್

## ಸಂಪಾದಕರಿಗೆ ಪತ್ರ

ಪ್ರೊ|| ಪೂಜಾರಿ ಮೊಣ್ಣಪ್ಪ

ಮಾನ್ಯರೇ,

ನಿಮ್ಮ ಕೊಡಗು ಸಂಗಾತಿ ಪತ್ರಿಕೆ (ಫೆಬ್ರವರಿ 15ರಿಂದ 28ರಲ್ಲಿ) ಅಮರ ಸುಳ್ಯ ದಂಗೆ-ಗೌಡರ ಪಾತ್ರವೆಂಬ ಲೇಖನವನ್ನ ಡಾ|| ಪುರುಶೋತ್ತಮ ಬಿಳಿಮಲೆಯವರು ಬರೆದ ಲೇಖನವನ್ನ ಓದಿ ಸಂತೋಷವಾಯಿತು. ಡಾ||ಬಿಳಿಮಲೆಯವರು ಬರೆದ ಲೇಖನದಲ್ಲಿ ಹಲವಾರು ಚಾರಿತ್ರಿಕ ಗ್ರಂಥಗಳನ್ನ ಆಧಾರವಾಗಿಟ್ಟು ಲೇಕನವನ್ನ ಬರೆದಿದ್ದಾರೆ. ಇದೇ ರೀತಿಯಲ್ಲಿ ಉಳಿದ ವಿದ್ಯಾವಂತ ಯುವಕರು ಗೌಡರ ಚರಿತ್ರೆಯ ವಿಷಯದಲ್ಲೂ, ಗೌಡರ ಸಂಸ್ಕೃತಿ ವಿಷಯದಲ್ಲೂ ಹೆಚ್ಚಿನ ಮಾಹಿತಿಗಳನ್ನು ಸಂಶೋಧಿಸಿ ಲೇಖನವನ್ನ ಬರೆಯಲೆಂದು ನನ್ನ ಆಕಾಂಕ್ಷೆ.

ಡಾ|| ಪುರುಷೋತ್ತಮ ಬಿಳಿಮಲೆಯವರು ಹಾಗೂ ಇನ್ನಿತರರು ಬರೆದ ಲೇಖನಗಳು ಉಪಯುಕ್ತವಾದವುಗಳು. ಸಂಪಾಜೆಯ ಯನ್. ಯಸ್. ದೇವಿಪ್ರಸಾದರವರು ಈ ವಿಷಯದಲ್ಲಿ ಇನ್ನೂ ಹೆಚ್ಚಿನ ಆಳವಾದ ಅಭ್ಯಾಸವನ್ನು ಮಾಡಿ ಈ ವಿಷಯದಲ್ಲಿ ಪತ್ರಿಕೆಗಳಲ್ಲಿ ಲೇಖನವನ್ನು ಬರೆದುದಲ್ಲದೆ 1989ರಿಂದ ಈಚೆಗೆ ಅಮರ ಸುಳ್ಯ ಸ್ವಾತಂತ್ರ್ಯ ಸಂಗ್ರಾಮವನ್ನು ಅಮರ ಕ್ರಾಂತಿ ಸುಳ್ಯವೆಂಬದಾಗಿ ಕರೆದು ಕಲ್ಯಾಣ ಸ್ವಾಮಿಯು ಮಂಗಳೂರಿನ ಬಿಕನಕಟ್ಟೆಯಲ್ಲಿ ಬ್ರಿಟಿಷರ ಧ್ವಜವನ್ನು ಕಿತ್ತೆಸೆದು ಕೊಡಗಿನ ರಾಜರ ಧ್ವಜವನ್ನು ಹಾರಿಸಿದ ದಿನವೇ ಶ್ರೀ ದೇವಿಪ್ರಸಾದರವರು ಈಗಿನ ರಾಷ್ಟ್ರಧ್ವಜವನ್ನು ಹಾರಿಸಿದ ಕೀರ್ತಿ ಶ್ರೀ ದೇವಿಪ್ರಸಾದರವರದು. ನಂತರದ ವರ್ಷಗಳಲ್ಲಿ ಕಲ್ಯಾಣಸ್ವಾಮಿ 1837ರ ಸ್ವಾತಂತ್ರ್ಯ ಸಂಗ್ರಾಮವನ್ನು ಪ್ರಾರಂಭಿಸಿದ ದಿನದಿಂದ ಕಲ್ಯಾಣಸ್ವಾಮಿಯ ಸೈನ್ಯ ಹೋದ ಕಡೆಯಲ್ಲೆಲ್ಲಾ ಕಾಲುನಡಿಗೆಯಲ್ಲಿಯೇ ಸ್ವಾತಂತ್ರ್ಯ ಯೋಧರಂತೆ ನಡೆದು ಆಗಿನ ಸೈನ್ಯ ತಂಗಿದ ಸ್ಥಳಗಳಲ್ಲಿ 1837 ಕ್ರಾಂತಿಯನ್ನು ಜನರಿಗೆ ನೆನಪುಮಾಡುವುದಕ್ಕಾಗಿ ಬೀದಿನಾಟಕವನ್ನು ಆಡಿ ಜನರ ಮನಸ್ಸಿನಲ್ಲಿ 1837ರ ಕ್ರಾಂತಿಯ ನೆನಪನ್ನು ಮಾಡಿಕೊಟ್ಟ ಕ್ರಮ ಸಾಮಾನ್ಯವಾದುದಲ್ಲ. ಈ ರೀತಿ ಶ್ರಮ ಯಾತಕ್ಕಾಗಿ ಮತ್ತು ಯಾರಿಗಾಗಿ? ನಮ್ಮ ಹಿರಿಯರ ದೇಶ ಪ್ರೇಮವನ್ನು ಈಗಿನ ಪೀಳಿಗೆಗೆ ಗೋತ್ತು ಪಡಿಸುವುದಕ್ಕಾಗಿ ಅಲ್ಲವೇ?

**ಒಂದು ಮೈಲು ನಡೆದು ಅಭ್ಯಾಸವಿಲ್ಲದ ಶ್ರೀ ದೇವಿಪ್ರಸಾದ ರಂತಹ ಮಹಾನ್ ವ್ಯಕ್ತಿಗಳು ಸುಳ್ಯದಿಂದ ಮಂಗಳೂರಿನವರೆಗೆ ಕರಾವಳಿಯ ಉಷ್ಣದ** ದಗೆಗೂ ಹಿಮ್ಮೆಟ್ಟದೆ ತಮ್ಮ ಧ್ಯೇಯವನ್ನು ಸಾಧಿಸಲು ತನುಮನ ಧನವನ್ನ ತ್ಯಾಗಮಾಡಿದುದನ್ನು ನಮ್ಮ ಸಂಘ ಸಂಸ್ಥೆಗಳು ಗಮನಿಸದೆ ಇರುವುದು ಬೇಸರದ ಸಂಗತಿ. ಇಂತಹದೊಂದು ಕಾರ್ಯಕ್ರಮವನ್ನು ಏರ್ಪಡಿಸಿದವರನ್ನು ಗುರ್ತಿಸಿ ಅವರನ್ನು ಸನ್ಮಾಸುವುದಲ್ಲದೆ ಅವರಿಗೆ ಪ್ರೋತ್ಸಾಹಿಸು ವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಶ್ರೀ ದೇವಿಪ್ರಸಾದ್‌ರವರು ಹಲವಾರು ಅಮೂಲ್ಯವಾದ ಪ್ರಕಟಣೆಗಳನ್ನು ಚೆನ್ನಾಯ್, ಮಂಗಳೂರು ಹಾಗೂ ಮಡಿಕೇರಿಯಿಂದ ಶೇಖರಿಸಿದ್ದಾರೆ. ಇವುಗಳನ್ನು ಕ್ರೊಢೀಕರಿಸಿ ಕನ್ನಡಕ್ಕೆ ಅನುವಾದಿಸಿ ಪುಸ್ತಕದ ರೂಪದಲ್ಲಿ ಅಚ್ಚುಹಾಕಿಸಿ ಪ್ರಕಟಿಸುವ ಖರ್ಚನ್ನು ದೇವಿಪ್ರಸಾದ್ ರವರೇ ಮಾಡಬೇಕಾಗಿಲ್ಲ. ನಮ್ಮ ಜನಾಂಗದ ಜನತೆ ಶ್ರದ್ದೆ ವಹಿಸಿದರೆ ಈ ಕೆಲಸವನ್ನು ಒಬ್ಬರೇ ಮಾಡುವ ಬದಲು ಸಂಘ ಸಂಸ್ಥೆಗಳು ವಹಿಸಿಕೊಂಡು ಮಾಡಬೇಕು. ನಾವು ನಮ್ಮ ತನವನ್ನು ಸ್ವಂತಿಕೆಯನ್ನು ಇಂತಹ ಕಾರ್ಯಗಳಲ್ಲಿ ಪ್ರದರ್ಶಿಸಿಬೇಕು. ನನ್ನ ಅಧ್ಯಕ್ಷತೆಯಲ್ಲಿ ಹಾಗೂ ಸಂಪಾದಕತ್ವದಲ್ಲಿ ಗೌಡ ಸಂಸ್ಕೃತಿ ಹಾಗೂ ಅಮರ ಸುಳ್ಯ ಕಾಟಕಾಯ ವಿಷ್ಯದಲ್ಲೂ ಹಾಗೂ ದಿ|| ನಿಡ್ಯಮಲೆಯ ಮುದ್ದಪ್ಪನವರ ಶತಾಬ್ಧಿ ವಿಷಯದಲ್ಲೂ ಬೆಂಗಳೂರಿನ ಕೊಡಗು ಮತ್ತು ದಕ್ಷಿಣ ಕನ್ನಡಗೌಡಸಮಾಜದ ವತಿಯಿಂದಲೂ ಹಾಗೂ ನನ್ನ ಸ್ವಂತ ಖರ್ಚಿನಿಂದಲೂ ಪ್ರಕಟಿಸಿದ ಪುಸ್ತಕಗಳನ್ನು ಬೆಲೆಗೆ ಕೊಂಡುಕೊಳ್ಳದೆ ನಿರರ್ಥಕವಾಗಿ ಬಿದ್ದಿರುವುದು ಕಟುಸತ್ಯ ಸಂಗತಿ. ಇದರಿಂದ ನನ್ನ ಅನುಭವದ ರೀತಿಯಲ್ಲಿ ನಮ್ಮ ಜನರು ಸಾಹಿತ್ಯ, ಸಂಸ್ಕೃತಿ, ಗೌಡರ ಚರಿತ್ರೆ ಮುಂತಾದವುಗಳಲ್ಲಿ ಹೆಚ್ಚಿನ ಆಸಕ್ತಿ ಇರುವುದು ಕಂಡು ಬರುವುದಿಲ್ಲ. ಯಾವುದೇ ದೇಶ ಯಾ ಜನಾಂಗ ಎಷ್ಟೇ ಉನ್ನತ ಮಟ್ಟದ ವಿದ್ಯೆ, ಬುದ್ಧಿ, ಐಶ್ವರ್ಯವನ್ನು ಹೊಂದಿದ್ದರೂ ಯಾವ ದೇಶ ಮತ್ತು ಜನಾಂಗಕ್ಕೆ ಇವುಗಳಲ್ಲಿ ಶ್ರದ್ದೆ ಇಲ್ಲದಿದ್ದರೆ ಅಥವಾ ತನ್ನ ಇರುವಿಕೆಯನ್ನು ಗೊತ್ತು ಪಡಿಸದೇ ಕಾಲವಾದರೆ ಶತಮಾನ ಗಳು ಕಳೆದ ನಂತರ ಇಂತಹದೊಂದು ಜನಾಂಗವಿತ್ತೆಂದು ಹೇಳಲು ಸಾಧ್ಯವಿಲ್ಲದೇ ಹೋಗುತ್ತದೆ. ಉದಾಹರಣೆಗೆ ಈಜಿಪ್ಟ್, ಬೇಬಿಲೋನಿಯಾ ನಂತಹ ದೇಶಗಳು ಉನ್ನತ ನಾಗರೀಕತೆಯನ್ನ ಹೊಂದಿದ್ದರೂ ಆ ಕಾಲದ ಸಂಸ್ಕೃತಿಯನ್ನು ಹೇಳಲು ಅಲ್ಲಿನ ಕಟ್ಟಡಗಳು ಮಾತ್ರ ಮೂಕ ಸಾಕ್ಷಿಯಾಗಿವೆ. ಈ ದೇಶದಲ್ಲಿದ್ದ ಅಂದಿನ ಸಂಸ್ಕೃತಿಯು ಅಲ್ಲಿನ ಈಗಿನ ಜನಾಂಗದವರಿಗಿಲ್ಲ. ಇಲ್ಲಿ ಹೊಸ ಸಂಸ್ಕೃತಿಯ ಜನರು ಇದ್ದಾರೆ. ಆದರೆ ಭಾರತದಲ್ಲಿ ಆರೇಳು ಸಾವಿರ ವರ್ಷದ ಸಂಸ್ಕೃತಿ ಇಂದಿಗೂ ಮುಂದುವರಿದು ಕೊಂಡು ಬರುತ್ತಿದೆ. ಹಲವಾರು ಹೊರದೇಶದವರ ದಾಳಿಗೆ ಸಿಕ್ಕಿ ಅಲ್ಪ ಸ್ವಲ್ಪ ನಷ್ಟವಾದರೂ ಮೇಲೆ ಹೇಳಿದ ದೇಶಗಳಂತೆ ತನ್ನ ಹಿಂದಿನ ಸಂಸ್ಕೃತಿ ಪೂರ್ತಿಯಾಗಿ ಮಾಯವಾದ ಪರಿಸ್ಥಿತಿ ಉಂಟಾಗಲಿಲ್ಲ. ಇದಕ್ಕೆ ಇಲ್ಲಿದ್ದ ಧಾರ್ಮಿಕ, ಸಂಸ್ಕೃತಿ ಹಾಗೂ ಕಲೆಗಳ ಆಳವಾಗಿ ಬೇರೂರಿರುವುದೇ ಕಾರಣವಾಗಿದೆ.

**ಭಾರತೀಯ ಸಂಸ್ಕೃತಿ ಇಂದಿಗೂ ಮುಂದುವರಿಯುತ್ತಿದೆ. ಅದೇ ರೀತಿ ಗೌಡರ ಚರಿತ್ರೆ** ಸಂಸ್ಕೃತಿಯು ಬಹಳ ಅನಾದಿ ಯಿಂದಲೂ ಪುರಾತನವಾದದ್ದು. ಇದನ್ನು ಶ್ರೀ ದೇವಿಪ್ರಸಾದ ರಂತಹ ಹುರುಪಿರುವ ವ್ಯಕ್ತಿಗಳಂತೆ ಇನ್ನೂ ಹಲವಾರು ವಿದ್ಯಾವಂತರು ಮುಂದೆ ಬಂದರೆ ಗೌಡರ ಸಂಸ್ಕೃತಿ ಹಾಗೂ ಚರಿತ್ರೆಗೆ ಹೆಚ್ಚಿನ ಮಹತ್ವ ಬರುತ್ತದೆ.

ಈ ದಿಕ್ಕಿನಲ್ಲಿ ಕೊಡಗು ಸಂಗಾತಿ ಪತ್ರಿಕೆಯು ಜನಾಂಗದ ಮಾಹಿತಿ ಲೇಖನವನ್ನು ಸಂಗ್ರಹಿಸುವುದಕ್ಕೆ ತುಂಬಾ ಹೆಣಗುತ್ತಾ ಉಪಯುಕ್ತವಾದ ಸೇವೆಸಲ್ಲಿಸುತ್ತಿದೆ. ಆದರೆ ಜನರ ಪ್ರೋತ್ಸಾಹ ಹೆಚ್ಚಿನ ಮಟ್ಟದಲ್ಲಿ ಇಲ್ಲದಿರುವುದರಿಂದ ಈ ಪತ್ರಿಕೆ ಕುಂಟುತ್ತಾ ನಡೆಯುತ್ತಿದೆ. ಜನಾಂಗದ ಕೆಲವೇ ಜನರು ಇದರ ಚಂದಾದಾರ ರಾಗಿದ್ದರೂ, ವಾರ್ಷಿಕ ಚಂದಾವನ್ನು ಸಹ ನೀಡದೆ ಈ ಪತ್ರಿಕೆಯ

5 ನೇ ಪುಟಕ್ಕೆ

ಹಾಲ್‌ಲಿ ಬಂದ ದುಡ್ಡ್ ನೀರ್‌ಲಿ ಹೋದಂಗೆ

# ಅಯ್ಯಂಗೇರಿಯಲ್ಲಿ ಇತ್ತೀಚೆಗೆ ವೈಶಿಷ್ಟ್ಯಪೂರ್ಣವಾಗಿ ಜರುಗಿದ ಶ್ರೀ ಚಿನ್ನತಪ್ಪ ದೇವರ ಉತ್ಸವ.

ಅಯ್ಯಂಗೇರಿ ಗ್ರಾಮದ ಶ್ರೀ ಚಿನ್ನತಪ್ಪ(ಶ್ರೀಕೃಷ್ಣ) ದೇವರ ಉತ್ಸವವು ಫೆಬ್ರವರಿ 15-16-17ರಂದು ಶ್ರದ್ಧಾ ಭಕ್ತಿಯಿಂದ ವೈಶಿಷ್ಟಪೂರ್ಣವಾಗಿ ಜರುಗಿತು.

15ರಂದು ರಾತ್ರಿ 10ಗಂಟೆಗೆ ದಾರೆ ಪೂಜೆನಡೆದು 16ರಂದು ದೇವರ ಉತ್ಸವ ನಡೆದು 17ರಂದು ಭಂಡರ ಹಾಕುವ ಕಾರ್ಯಕ್ರಮದೊಂದಿಗೆ ದೇವರ ಹಬ್ಬವು ಮುಕ್ತಾಯಗೊಂಡಿತು.

ಹಾಗಾದರೆ ಚಿನ್ನ ತಪ್ಪ ಹಬ್ಬ ಎಲ್ಲಿ ನಡೆಯುತ್ತದೆ ಯಾವಾಗ ನಡೆಯುತ್ತದೆ ಎಂಬುದನ್ನು ತಿಳಿದು ಕೊಳ್ಳೋಣ ಅಲ್ಲವೆ ?

ಕೊಡಗಿನ ಪವಿತ್ರ ಕಾವೇರಿ ಕ್ಷೇತ್ರ ಭಾಗಮಂಡಲದಿಂದ ನಾಪೋಕ್ಲು ಮಾರ್ಗವಾಗಿ ತೆರಳುವಾಗ ಅಯ್ಯಂಗೇರಿ ಗ್ರಾಮ ಸಿಗುತ್ತದೆ. ಅಯ್ಯಂಗೇರಿ ಮುಖ್ಯ ರಸ್ತೆಯಿಂದ ಸುಮಾರು 2ಕಿ. ಮೀ. ದೂರದಲ್ಲಿ ಸಮತಟ್ಟಾದ ಮೈದಾನದ ಮೇಲೆ ವಿಶಾಲವಾಗಿ ಹರಡಿಕೊಂಡಿರುವ ಅಶ್ವತ್ಥ ವೃಕ್ಷ ಸಿಗುತ್ತದೆ. ಅದೆ ರಸ್ತೆಯಲ್ಲಿ ಎಣಿಕೆ ಹೆಜ್ಜೆ ಹಾಕುತ್ತ ಹೋದರೆ ಸಿಗುವುದೆ ಒಂದಿಯಂಡ ಕುಟುಂಬಸ್ಥರ ಐನ್ ಮನೆ. ಹಾಗಾದರೆ ಶ್ರೀ ಚಿನ್ನತಪ್ಪ ದೇವಾಲಯವೆಲ್ಲಿ ? ಒಂದಿಯಂಡ ಕುಟುಂಬಸ್ಥರ ಐನ್‌ಮನೆಯ ಒಂದು ಪಾರ್ಶ್ವವೇ ಈ ಪುಣ್ಯಸ್ಥಳ.

ಪುರಾತನ ಕಾಲದಲ್ಲಿ ಒಂದಿಯಂಡ.ವ್ಯಕ್ತಿಯೊಬ್ಬನು ತನ್ನ ಗದ್ದೆಯನ್ನು ಹೂಡಿ ತನ್ನ ಎತ್ತುಗಳನ್ನು ಮೈ ತೊಳೆಯಲೆಂದು ಪಕ್ಕದ ಹೊಳೆಗೆ ಹೋದಾಗ ಶ್ರೀ ಕೃಷ್ಣನದು ಎನ್ನಲಾದ ಕೊಳಲು ತೇಲುತ್ತಾ ಬಂತು. ಅದು ಆ ವ್ಯಕ್ತಿಯ ವಶವಾದ ನಂತರ ಅಲ್ಲಿಂದ ತೆಗೆದುಕೊಂಡುಹೋಗಿ ಈಗಿನ ದೈವ ನೆಲೆಯಲ್ಲಿ ಪ್ರತಿಷ್ಠಾಪಿಸಿದರು ಎನ್ನಲಾಗಿದೆ.

ಕೃಷ್ಣನದು ಎನ್ನಲಾಗಿರುವ ಈ ಕೊಳಲನ್ನು ಬಲು ಸಂಭ್ರಮೋಲ್ಲಾಸಗಳಿಂದ ಆಚರಿಸುತ್ತಾರೆ. ಈ ಕೊಳಲಿನ ಹಬ್ಬ ಅಷ್ಟೊಂದು ವಿಶಿಷ್ಟ ಎನಿಸಿರುವುದರಿಂದ ಅಲ್ಲಿನ ಜನಾಂಗದವರು ಅದನ್ನು ಚಿನ್ನ ತಪ್ಪ ಎಂದು ಕರೆದು ಶ್ರೀ ಕೃಷ್ಣನ ಹಬ್ಬವನ್ನು ಆಚರಿಸುತ್ತಾರೆ.

ಏನೇ ಇರಲಿ ಶ್ರೀ ಚಿನ್ನತಪ್ಪ ದೇವರ ಉತ್ಸವವು ನಿಶ್ಯಬ್ದ ತಿಂಗಳುಗಳಾದ ಫೆಬ್ರುವರಿ ಕೊನೆ ವಾರ ಅಥವಾ ಮಾರ್ಚ್‌ತಿಂಗಳ ಮೊದಲನೇ ವಾರದಲ್ಲಿ ಶುಬ್ರನೀಲಾಕಾಶದಲ್ಲಿ ರವಿಯ ಹೊಂಗಿರಣಗಳು ಕಾಣಿಸಿ ಕೊಳ್ಳುವ ಮೊದಲೇ ಸುತ್ತ ಮುತ್ತಲ ತಾಣಗಳಿಂದ ಬಂದು ಸೇರುವ ಭಕ್ತಾದಿಗಳು ಶ್ರೀ ಚಿನ್ನತಪ್ಪ ಹಬ್ಬದ ಸಡಗರದಲ್ಲಿ ಇರುತ್ತಾರೆ.

ಈ ವಿಶಿಷ್ಟಕರ ಹಬ್ಬಕ್ಕೆ ಕೊಡಗಿನ ಹಲವಾರು ಭಾಗಗಳಿಂದ ಸಾವಿರಾರು ಭಕ್ತಾದಿಗಳು ಆಗಮಿಸಿ ಕೃಷ್ಣನ ಕೊಳಲಿನ ನಾದವನ್ನು ಆಲಿಸುತ್ತಾರೆ. ಪ್ರತಿವರ್ಷವು ಬೆಳಗಿನ ಹಬ್ಬದೊಂದಿಗೆ ಆರಂಭಗೊಳ್ಳುವ ಉತ್ಸವ, ಭಕ್ತರ ಸಮ್ಮುಖದಲ್ಲಿ ಧಾರೆ ಪೂಜೆ



ಶ್ರೀ ಕೃಷ್ಣನ ಕೊಳಲನ್ನು ವೀಕ್ಷಕರ ಕಣ್ಣಿಗೆ ಬೀಳದಂತೆ ಎಚ್ಚರದಿಂದ ವಸ್ತ್ರದಿಂದ ಮುಚ್ಚಿಟ್ಟುಕೊಂಡು ನಾಡ್‌ಮುಂದ್‌ನತ್ತ ಬರುತ್ತಿರುವುದು.



ಸ್ತ್ರೀ ಶ್ವೇತವಸ್ತ್ರ ಧರಿಸಿದ ಸ್ತ್ರೀಯರು ನಾಡ್ ಮಂದ್‌ಗೆ ಬರುತ್ತಿರುವ ಚಿತ್ರ

ಚಿತ್ರ : ಕುಯ್ಯಮುಡಿ ಡಿ ಸುನೀಲ್,

ಪಟ್ಟಣಿ ಹಬ್ಬ ಹೀಗೆ ಕ್ರಮ ಕ್ರಮವಾಗಿ ಜರುಗುತ್ತದೆ.

ಸೂರ್ಯನ ಪ್ರಖರತೆ ಏರುವ ಮೊದಲೆ ಮೊದಲ ದಿನದ ಹಬ್ಬವು ಮುಕ್ತಾಯಗೊಳ್ಳುತ್ತದೆ. ಅಂದು ಕತ್ತಲಾವರಿಸಿದ ನಂತರ ಸಮೀಪದ ಕಲ್ಲುಹೊಳೆಯಲ್ಲಿ ಧಾರೆ ಪೂಜೆಯು ಬೆಳಗಿನ ಜಾವ ಎರಡು ಗಂಟೆಯ ವರೆಗೆ ಜರುಗುತ್ತದೆ. ಮರುದಿನ ಜರುಗುವ ಮುಖ್ಯ ಹಬ್ಬವೇ ಪಟ್ಟಣಿ.

ಪಟ್ಟಣಿಹಬ್ಬವನ್ನು ವೀಕ್ಷಿಸಲು ಸಾವಿರಾರು ಭಕ್ತಾದಿಗಳು ದೇವಾಲಯದ ಅನತಿದೂರದಲ್ಲಿ ಇರುವ ಅಶ್ವತ್ಥ ವೃಕ್ಷದ ಕೆಳಗೆ ಸೇರುತ್ತಾರೆ. ಮಧ್ಯಾನದ ನಡುಬಿಸಿಲಿನಲ್ಲಿ ದೇವಾಲಯದದಿಂದ ನಾಡ್‌ಮಂದ್‌ಗೆ ಕೃಷ್ಣನದು ಎನ್ನಲಾದ ಕೊಳಲನ್ನ ಹಿಡಿದು ದೇವತಕ್ಕರು ಸಾಲು ಸಾಲಾಗಿ ಆಗಮಿಸಿ ನಾಡ್ ಮಂದ್‌ನ ಪಕ್ಕದಲ್ಲಿ ನಿರ್ಧಿಷ್ಟ ಸ್ಥಳದ ಕಟ್ಟೆಯಲ್ಲಿ ಬಂದು ನಿಲ್ಲುತ್ತಾರೆ. ನಿಷ್ಠೆ, ಶ್ರದ್ಧೆ, ಭಕ್ತಿಯಿಂದ ಇರುವ ಭಕ್ತಾದಿಗಳಿಗೆ ಆಕಾರದಲ್ಲಿ ಮೂರು ಗರುಡ ಸುತ್ತು ಬರುತ್ತಿರುವುದು ಕಾಣಿಸುವುದು. ಈಗಲೂ ಹಬ್ಬ ನಡೆಯುವ ದಿನದಂದು ನೋಡಬಹುದಾಗಿದೆ. ನಾಡ್ ಮುಂದ್‌ನ ಪಕ್ಕದಲ್ಲಿ ಇರುವ ಕಟ್ಟೆಯಲ್ಲಿ ಸುಮಾರು

2 ಗಂಟೆಕಾಲ ಪೂಜಾ ಕಾರ್ಯಕ್ರಮ ಜರುಗುತ್ತದೆ. ಅದೇ ಸಮಯದಲ್ಲಿ ನಾಡ್‌ಮುಂದ್‌ನ ಅನತಿ ದೂರದಲ್ಲಿ ಇರುವ ನಾಳೆಯಂಡ ಗದ್ದೆಯಿಂದ ಎತ್ತು ಪೋರಾಟದವರು ಹೊರಟು ಅವರ ಜೊತೆಯಲ್ಲಿ ಒಂದೊಂದು ಕುಟುಂಬದಿಂದ ಸ್ತ್ರೀಯರು ಶ್ವೇತವಸ್ತ್ರಧರಿಸಿ, ಹರಿವಾಣದಲ್ಲಿ ಹೂ, ಅಕ್ಕಿ, ದೀಪ ಹಿಡಿದು ನಾಡ್‌ಮಂದ್‌ನಲ್ಲಿ ಬಂದು ನಿಲ್ಲುತ್ತಾರೆ. ನಂತರ ತೆಂಗಿನ ಕಾಯಿಗೆ ಗುಂಡು ಹೊಡೆಯಲಾಗುತ್ತದೆ. ನಂತರ ದೇವತಕ್ಕರು ಈ ವಿಶಿಷ್ಠ ಬಗೆಯ ಕೊಳಲನ್ನು ಹಿಡಿದು ಭಕ್ತಾದಿಯು ನಿಗದಿತ ಗೊಂಡಿರುವ ಸ್ಥಳದಲ್ಲಿ ಮೂರು ಬಾರಿ ನುಡಿಸುತ್ತ ಬಂದಿಯಂಡ ಮಾನಿ ಎಂಬಲ್ಲಿ ನಿಲ್ಲುತ್ತಾರೆ. ಅಲ್ಲಿ ಎತ್ತು ಓಡಿಸುವ ಕಾರ್ಯಕ್ರಮವಿದೆ. ಎತ್ತು ಓಡಿಸಿ ಆದ ನಂತರ ಪಕ್ಕದ ಕಲ್ಲು ಹೊಳೆಯಲ್ಲಿ ಧಾರೆ ಪೂಜೆನಡೆದ ಸ್ಥಳಕ್ಕೆ ಹೋಗುತ್ತಾರೆ. ಮೊದಲು ಸ್ತ್ರೀ ಶ್ವೇತವಸ್ತ್ರ ಧರಿಸಿದ ಸ್ತ್ರೀಯರು ತಾವು ಹಿಡಿದು ಕೊಂಡಿರುವ ದೀಪವನ್ನು ಬೆಳಗಿಸಿ ನಂತರ ದೇವರ ಜಳಕ ನಡೆಯುವ ಗುಂಡಿಗೆ ಅಕ್ಕಿಯನ್ನು ಹಾಕುತ್ತಾರೆ. ನಂತರ ದೇವರ ಜಳಕ ಕಾರ್ಯಕ್ರಮ (ಕೃಷ್ಣನ ಕೊಳಲು) ನಡೆಯುವದರೊಂದಿಗೆ ಪಟ್ಟಣೆ ಹಬ್ಬ ಮುಕ್ತಾಯಗೊಳ್ಳುತ್ತದೆ. ಮರುದಿನ ಭಂಡಾರ ಹರಿಕೆ ಸಲ್ಲಿಸುವವರು ದೇವರ ಮನೆಯಲ್ಲಿ ಸಲ್ಲಿಸುತ್ತಾರೆ. ನಂತರ ಊಟದ ಕಾರ್ಯಕ್ರಮದೊಂದಿಗೆ ಹಬ್ಬ ಮುಕ್ತಾಯಗೊಳ್ಳುತ್ತದೆ.

ಈ ಹಬ್ಬದ ತಕ್ಕ ಮುಖ್ಯಸ್ಥರಾಗಿ ಗೊಲ್ಲ ಜನಾಂಗದ (ಯಾದವ)ಬಿಂದಿಯಂಡ, ಚಿಂಗಡ ತೆಕ್ಕಡ ಮನೆ ಮತ್ತು ಗೌಡ ಜನಾಂಗದ ಪೆಮ್ಮಡಿ ಮನೆಯವರು ಭಯಭಕ್ತಿಯಿಂದ ನಡೆಸುತ್ತಿದ್ದಾರೆ.

ಏನೇ ಇರಲಿ, ಶ್ರೀ ಕೃಷ್ಣನ ಸುಮಧುರ ಕೊಳಲ ಕರೆಯನ್ನು ನೀವಿಲ್ಲಿ ಉತ್ಸವದ ಸಂದರ್ಭದಲ್ಲಿ ಆಲಿಸ ಬಹುದು. ಶ್ರೀ ಕೃಷ್ಣನ ಅನುಗ್ರಹಕ್ಕೆ ಪಾತ್ರರಾಗಲು ನಿತ್ಯ ಇಲ್ಲಿಗೆ ಆಗಮಿಸಿದ ಭಕ್ತರ ಸಂಖ್ಯೆಯೂ ಕಡಿಮೆಯಾಗಿಲ್ಲ.

ನೀಲವರ್ಣದ ಆಕಾಶದಲ್ಲಿ ಪ್ರಾತಃ ಕಾಲದ ಸೂರ್ಯನು ವಿರಾಜಮಾನವಾಗುತ್ತಲೇ ಇಲ್ಲಿ ಉತ್ಸವದ ರಂಗೇರುವುದು. ಬಂದ ಅತಿಥಿಗಳಿಗೆ ಅವಲಕ್ಕಿ ಉಪಹಾರ ಲಭ್ಯ. ಅಂದು (ಹಬ್ಬದ ಸಂದರ್ಭದಲ್ಲಿ) ಸಣ್ಣಪುಲಿಕೋಟು, ಅಯ್ಯಂಗೇರಿ ಗ್ರಾಮದ ಎಲ್ಲಾ ಮನೆಗಳಲ್ಲೂ ಅವಲಕ್ಕಿ ಬಳಸಲಾಗುವುದು (ಶ್ರೀ ಕೃಷ್ಣನ ಅವಲಕ್ಕಿ ಸ್ನೇಹಿತ ಸುಧಾಮನ ನೆನಪಲ್ಲಿ!)

ಇಂತಹ ವೈಶಿಷ್ಟ್ಯಪೂರ್ಣ ಹಬ್ಬದಲ್ಲಿ ಕೃಷ್ಣನ ಕೊಳಲಿನ ಕರೆ ಅಲೆ ಅಲೆಯಾಗಿ ತೇಲಿಬರುವುದು. ನೀವು ಸಹ ಜೀವಮಾನ ದಲ್ಲಿ ಒಮ್ಮೆಯಾದರೂ ಬಂದು ದರ್ಶನ ಪಡೆಯುವುದರಿಂದ ಮೋಕ್ಷಕ್ಕೆ ದಾರಿಯಾಗುವುದೆಂಬ ಹಳೇ ನಂಬಿಕೆಯೊಂದಿದೆ.

— ಕುಯ್ಯಮುಡಿ ಸುನಿಲ್, ಸಣ್ಣಪುಲಿಕೋಟು.

3ನೇ ಪುಟದಿಂದ

ಮಾಲಿಕರು ನಷ್ಟದಿಂದ ಕೆಲಸ ಮಾಡುತ್ತಿದ್ದು ಲಕ್ಷದಷ್ಟು ಚಂದಬಾಕಿ ಇರುವುದು ಶೋಚನೀಯ ಸಂಗತಿಯಾಗಿದೆ. ಇದು ಜನಾಂಗದ ದುರ್ದೈವವೆಂದೆ ತಿಳಿಯಬೇಕು.

ಈ ರೀತಿ ಜನತೆ ಎಚ್ಚೆತ್ತು ಜನಾಂಗದ ಚರಿತ್ರೆ, ಸಂಸ್ಕೃತಿ ಮತ್ತು ಆಗು ಹೋಗುಗಳನ್ನು ಪ್ರಕಟಿಸುತ್ತಿರುವ "ಕೊಡಗು ಸಂಗಾತಿ" ಪತ್ರಿಕೆ ಈ ಮೇಲೆ ವಿವರಿಸಿದ ಕಾರಣದಿಂದಾಗಿ ಎಲ್ಲಿಯಾದರು ನಿಂತು ಹೋಗುವುದೇ ಎಂಬ ಭಯ ನನಗೆ ಉಂಟಾಗಿದೆ. ಕೊಡಗು ಸಂಗಾತಿ ಪತ್ರಿಕೆ ಹುಟ್ಟಿದ ನಂತರದಲ್ಲಿ ಕೊಡಗಿನಲ್ಲಿ ಈಗ ಸ್ಥಾಪಿತವಾಗಿರುವ ಕೊಡಗು ಗೌಡ ಸಾಂಸ್ಕೃತಿಕ ಅಕಾಡಮಿ, ಕೊಡಗು ಗೌಡ ಮಹಿಳಾ ಒಕ್ಕೂಟಗಳ ಕಾರ್ಯಾಚರಣೆಯ ಬಗ್ಗೆ ಜನರಿಗೆ ತಿಳುವಳಿಕೆ ನೀಡುವ ಒಂದು ಅಮೂಲ್ಯ ಮಾಧ್ಯಮವಾಗಿ ಹೊರಹೊಮ್ಮಿ ಕೊಡಗಿನಲ್ಲಿ ಅಲ್ಲಲ್ಲಿ ಗೌಡ ಸಮಾಜಗಳ ಸ್ಥಾಪನೆ, ಗೌಡ ಸಂಸ್ಕೃತಿಯ ಬಗ್ಗೆ ಚಟುವಟಿಕೆಗಳು, ಹಾಡುಗಾರಿಕೆ, ನೃತ್ಯಕ್ಕೆ ಚೇತನ ನೀಡುವಂತಾಗಿರುವ ಈ ಪತ್ರಿಕೆ ನಿಂತು ಹೋದರೆ ನಮ್ಮಲ್ಲಿ ನಮ್ಮದೇ ಆದ ಪತ್ರಿಕೆಯನ್ನು ಹೊಂದಲು ನಾವು ಅಸಮರ್ಥರೆಂಬ ವಿಷಯವನ್ನು ಬೇರೆಯವರಿಗೆ ತೋರಿಸುವಂತಾಗುವುದೆಂದು ನನ್ನ ಅಭಿಪ್ರಾಯ. ಈ ನಿಟ್ಟಿನಲ್ಲಿ ಜನಾಂಗದ ಸರ್ವ ಬಂಧುಗಳು ಹಿರಿಕಿರಿಯಾದಿ ಯಾಗಿ ಚಿಂತಿಸಬೇಕಾದ್ದು ಅನಿವಾರ್ಯವಾಗಿದೆ ಮತ್ತು ಈ ಬಗ್ಗೆ ಉದಾಸೀನ ಸಲ್ಲದು ಎಂದು ನನ್ನ ಕಳಕಳಿಯ ನಿವೇದನೆಯಾಗಿದೆ.

## ಶುಭ ವಿವಾಹ

ಮಂಡ್ಯ ಜಿಲ್ಲಾ ಶ್ರೀರಂಗಪಟ್ಟಣ ತಾಲೂಕು ಮಹದೇವ ಪುರ ಗ್ರಾಮದ ಮಾಜಿ ಛೇರ್ಮನ್ ಕೆ. ಸಿದ್ದೇಗೌಡರ ಪುತ್ರಿ ಭಾರತಿಗೂ ಮತ್ತು ಪಾಂಡವಪುರ ತಾಲೂಕು, ಕುಪ್ಪಳ್ಳಿ ಗ್ರಾಮದ ಶ್ರೀ ಮರೀಗೌಡರ ಪುತ್ರ ಕೆ. ರಾಮಚಂದ್ರುವಿಗೂ ದಿನಾಂಕ 4-3-2001ನೇ ರವಿವಾರ ದಿವಸ ಶ್ರೀರಂಗಪಟ್ಟಣದ T.A.P.C.M.S.ಕಲ್ಯಾಣ ಮಂಟಪದಲ್ಲಿ ಭಾರೀ ವಿಜೃಂಭಣೆಯಿಂದ ನಡೆಯಿತು.

ಕುಶಾಲನಗರ ಗುಡ್ಡೆಹೊಸೂರು ನಿವಾಸಿ ಕೈಬಿಲಿರ ತಿಮ್ಮಯ್ಯನವ್ರ ಮಂಜ್ಞ ಮನೋಹರ್ BE. E&C ಇವೆಂಗೂ ಮತ್ತೆ ಕಡಿಯತ್ತೂರು ಗ್ರಾಮದ ಕುಂಜಿಲನ ಸೀತಾರಾಮನವು ಮಗ್ಳು ತುಳಸಿ, B.A. ಇವಳಿಗೂ ತಾರೀಖ್ 11-3-2001ಲ್ಲಿ, ಮಡಿಕೇರಿ ಕೆಳಗಿನ ಕೊಡವ ಸಮಾಜಲಿ ಬಾರಿ ಲಾಯ್ಕಾಗಿ ಮದ್ವೆ ಕಳ್ತ್ತ ತಿಳ್ದು ಬಂದುಟು.

ಮೈಸೂರು ನಿವಾಸಿ ಬೈಮನ ದೇವಯ್ಯನವ್ರ ಮಂಜ್ಞ ಚೇತನ್ ಕುಮಾರಂಗೂ ಮತ್ತೆ ಟೀನರಸೀಪುರದ ಮಾಜಿ ಶಾಸಕ ಟಿ. ಪಿ. ಬೋರಯ್ಯನವ್ರ ಪುತ್ರ ಲೇಟ್ ಶಿವಸ್ವಾಮಿಯವ್ರ ಮಗ್ಳು ಹರಿಣಿಗೂ ತಾರೀಖ್ 16-2-2001ಕ್ಕೆ ಟೀ ನರಸೀಪುರದ ಆದಿ ಚುಂಚನಗಿರಿ ಸಮುದಾಯ ಭವನಲಿ ಬಾರೀ ವಿಜೃಂಭಣೆಂದ ಕಳ್ತ್ತ ತಿಳ್ದು ಬಂದ್‌ಟು.

— ಸಂಗಾತಿ

ಮರಂದ ಆದ ಮೊಚ್ಚೆ ಮರಕ್ಕೆ ವಿಪತ್ತು.

# ಸಮರಭೂಮಿಯಲ್ಲಿ ಸಮಾರೋಪ ಭಾಷಣ ಸುಳ್ಯ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮಾಡಿದ ಶ್ರೀ ದೇವಿಪ್ರಸಾದ್‌ರ ಸಮಾರೋಪ ಭಾಷಣ

ಪ್ರಥಮ ತಾಲೂಕು ಸಮ್ಮೇಳನ ಸುಬ್ರಹ್ಮಣ್ಯ ಪುಣ್ಯ ಕ್ಷೇತ್ರದಲ್ಲಿ ನಡೆಯಿತು. ಎರಡನೇ ತಾಲೂಕು ಸಮ್ಮೇಳನ ನಡೆಸುವ ಪುಣ್ಯ ಪಂಜದವರಿಗೆ ಸಿಕ್ಕಿದೆ. ಪಂಜ ಪರಾಕ್ರಮಕ್ಕೆ ಹೆಸರಾದ ಪ್ರದೇಶ. ಇಲ್ಲಿಯ ಚರಿತ್ರೆ ಸರಿಯಾಗಿ ದಾಖಲೆಯಾಗಿಲ್ಲವಾದರೂ ಇಲ್ಲಿ ಅನೇಕ ಸಮರಗಳು ಸಂಭವಿಸಿದೆ ಎನ್ನುವುದಕ್ಕೆ ಆಧಾರಗಳಿವೆ. ಇಂತಹ ಸಮರ ಭೂಮಿಯಲ್ಲಿ ನನ್ನ ಸಮಾರೋಪ ಭಾಷಣ. "ಸಾಧುವಿಂಗೆ ಸಾಧು ಮಾಧುರ್ಯಂಗೆ ಮಾಧುರ್ಯ ಬಾಧಿಪ ಕಲಿಗೆ ಕಡುಗಲಿ" ಎನ್ನಿಸಿರುವ ಕನ್ನಡದ ಕಲಿಗಳಾದ ನಿಮ್ಮ ಮುಂದೆ-ಸಾಧುವಾಗಿ ನಿಂತಿದ್ದೇನೆ. ಪಕ್ಕದಲ್ಲಿಯೇ ನನಗೆ ಕನ್ನಡ ಕಲಿಸಿದ ಗುರುಗಳು ಇದ್ದಾರೆ ಎಂಬ ಮುಜುಗರ ಮತ್ತು ಧೈರ್ಯವೂ ಕೂಡಾ ಇದೆ. ಈ ಸಮ್ಮೇಳನದ ಅಧ್ಯಕ್ಷರಾದ ಪ್ರೊ|| ಸಚ್ಚಿದಾನಂದಯ್ಯನವರು ನನ್ನನ್ನು ಬಾಲ್ಯದಲ್ಲಿ ಬೆನ್ನು ತಟ್ಟಿ ಪ್ರೋತ್ಸಾಹಿಸಿದವರು. ಡಿಬೇಟ್ ಕ್ಲಾಸುಗಳಿದ್ದ ದಿವಸ ಭಾಷಣ ಮಾಡಲು ಭಯಪಟ್ಟು ಜ್ವರ ಬಂದು ರಜಾ ಹಾಕಿ ಮನೆಯಲ್ಲಿ ಉಳಿಯುತ್ತಿದ್ದೆ. ಅಂತವನನ್ನು ಯಾವ ಚಮತ್ಕಾರದಿಂದಲೊ ಈ ರೂಪಕ್ಕೆ ತಂದಿದ್ದಾರೆ. ನನ್ನ ಪ್ರಥಮ ಭಾಷಣಕ್ಕೆ ಅವರೇ ಪ್ರೇರಣೆ. ಅದನ್ನು ಈಗಲೂ ನೆನೆದುಕೊಳ್ಳುತ್ತೇನೆ. ಹಾಲು ಕೊಡುವ ದನಕ್ಕೆ ಬಾಲವೊ ಹಾಲು ಕೊಂಡುಕೊಳ್ಳಲಿಕ್ಕಿರುವ ಧನಕ್ಕೆ ಬಾಲವೊ ಎನ್ನುವ ಅನುಮಾನ ಇಟ್ಟುಕೊಂಡು ನನ್ನನ್ನು ಬರೆಯ ಬಲ್ಲವನಾಗಿ ಮಾಡಿದರು. ನನಗೆ ಕೊಟ್ಟಿರುವ ಈ ಅವಕಾಶವನ್ನು ಗುರುಗಳಿಗೆ ಗೌರವ ಸಲ್ಲಿಸಲು ಸಿಕ್ಕಿದ್ದು ಎಂಬ ಕಾರಣಕ್ಕೆ ಸಂತೋಷದಿಂದ ಒಪ್ಪಿಕೊಂಡದ್ದಾಗಿದೆ. ಇದಕ್ಕಾಗಿ ದ. ಕ. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶ್ರೀ ಹರಿಕೃಷ್ಣ ಪುನರೂರು, ತಾಲೂಕು ಸಮಿತಿ ಅಧ್ಯಕ್ಷ ಶ್ರೀ ಟಿ. ಜಿ. ಮುಡೂರು, ಸಮ್ಮೇಳನ ಕಾರ್ಯಾಧ್ಯಕ್ಷ ಶ್ರೀ ಜಾಕೆ ಮಾಧವ ಗೌಡ ಮತ್ತು ಸಮಿತಿಯ ಎಲ್ಲಾ ಸದಸ್ಯರಿಗೂ ನನ್ನ ವಂದನೆಗಳು.

ಪಂಜ ಪಶ್ಚಿಮ ಘಟ್ಟದ ಕೆಳಗಿನ ಪರಶುರಾಮ ಸೃಷ್ಟಿ ದಕ್ಷಿಣ ಕನ್ನಡ ಜಿಲ್ಲೆಗೆ ಹೆಬ್ಬಾಗಿಲು. ಹಿಂದಿನ ಕಾಲದಲ್ಲಿ ಘಟ್ಟದ ಮೇಲಿನಿಂದ ಬಯಲು ಸೀಮೆಯವರಿಗೆ ಕರಾವಳಿಗೆ ಇಳಿದು ಬರಲು ಇದ್ದುದು ಒಂದೇ ದಾರಿ -" ಬಿಸ್ಲೆ ಘಾಟಿ". ಅನೇಕ ವರ್ಷಗಳ ನಂತರ ಬ್ರಿಟಿಷರ ಆಳ್ವಿಕೆಯಲ್ಲಿ ಸಂಪಾಜೆ, ಶಿರಾಡಿ, ಚಾರ್ಮಾಡಿ, ಆಗುಂಬೆ ಹೆದ್ದಾರಿಗಳಾದವು. ಈಗ ಹಾಳು ಬಿದ್ದಿರುವ ಬಿಸ್ಲೆ ರಸ್ತೆ ಆಗ ಪ್ರಮುಖ ಹೆದ್ದಾರಿ. ಮಿಕ್ಕುಳಿದ ದಾರಿಗಳು ಜನ ಸಂಚಾರ ಯೋಗ್ಯದಾಗಿದ್ದಿರಲಿಲ್ಲ. ಸಂಪಾಜೆ ರಸ್ತೆ ೧೮೩೭ರಲ್ಲಿ ಆದದ್ದು. ಘಟ್ಟದ ಮೇಲೆ ಹತ್ತಿ ಬಂದ ಬಯಲು ಸೀಮೆಯ ಕನ್ನಡಿಗರು ಕೂಡು ರಸ್ತೆಯಲ್ಲಿ ಅಂದರೆ ವಣಗೂರಿನಲ್ಲಿ ಬಂದು ಕೂಡಿಕೊಳ್ಳುತ್ತಿದ್ದರು. ಪಕ್ಕದ ಕೊಡ್ಲಿಪೇಟೆಯಲ್ಲಿ ಕೊಡಲಿ ಸಿಕ್ಕುತಿದ್ದಿರಬಹುದು. ಅಲ್ಲಿಂದ ಪರಶುಧಾರಿಗಳಾಗಿ ದಾರಿಯ ನಿರ್ಮಾಣ ಮಾಡುತ್ತಾ ಸುಬ್ರಹ್ಮಣ್ಯಕ್ಕೆ ಬಂದು ಸೇರಿರಬೇಕು. ಸಕಲೇಶಪುರದ ಸುತುಮುತ್ತಲಿನ ಹಳ್ಳಿಗಳಾದ ಅತ್ತಿಹಳ್ಳಿ, ಹೆತ್ತೂರು, ಐಗೂರು ಮೊದಲಾದ ಗ್ರಾಮಸ್ಥರು ಈಗಲೂ ಸುಬ್ರಹ್ಮಣ್ಯ ಷಷ್ಠಿಯ ಉಪವಾಸ ಮಾಡುತ್ತಾರೆ. ಇಲ್ಲಿ ರಥ ಎಳೆದ ಸುದ್ದಿಯನ್ನು ಕಾಲ್ನಡಿಗೆಯಲ್ಲಿ ಹೋಗಿ ಯಾರಾದರೂ ತಲುಪಿಸಿದ ಮೇಲೆಯೇ ಅವರು ಊಟ ಮಾಡುವುದು ಸಂಪ್ರದಾಯವಾಗಿದೆ.

ಈ ಬಿಸ್ಲೆ ಘಾಟಿಯಲ್ಲಿ ಐಗೂರು ವೆಂಕಟಾದ್ರಿ ನಾಯಕನ ಅಧಿಪತ್ಯ ಇದ್ದದ್ದು. ಟಿಪ್ಪು ಸುಲ್ತಾನನ ಬೆಂಬಲಿಗನಾಗಿದ್ದ ಈತನು ೧೮೦೨ರ ತನಕ ಬಿಸ್ಲೆ ಮಾರ್ಗವನ್ನು ಬ್ರಿಟಿಷರಿಗೆ ಬಿಟ್ಟುಕೊಡಲಿಲ್ಲ. ಘಟ್ಟದ ಮೇಲಿನ ಪಾಳೆಗಾರರು ಬ್ರಿಟಿಷರಿಗೆ ಸವಾಲು ಒಡ್ಡಿದ್ದರು. ಕೊಡಗು ಮಾತ್ರ ಬ್ರಿಟಿಷರ ಪರವಾಗಿತ್ತು. ಹಾಗಾಗಿ ಕೊಡಗಿನಲ್ಲಿ ಅಲ್ಲಲ್ಲಿ ಶಾಲೆ, ರಸ್ತೆ, ಸೇತುವೆ ಕಾಫಿ ತೋಟ ಹೀಗೆ ಕೊಡಗು ಶ್ರೀಮಂತ ಆಯ್ತು. ವಿರೋಧವಿದ್ದ ಸುಳ್ಯ ತಾಲೂಕಿನವರನ್ನು ಬ್ರಿಟಿಷರು ಅಷ್ಟೇ ಹಿಂದುಳಿಯುವಂತೆ ನೋಡಿಕೊಂಡರು. ಕಾರಣ ಇಲ್ಲಿಯವರು ೫-೪-೧೮೩೭ರಂದು ಬ್ರಿಟಿಷರನ್ನು ಮಂಗಳೂರಿನಿಂದ ಓಡಿಸಿ, ಬಾವುಟ ಗುಡ್ಡೆಯಲ್ಲಿದ್ದ ಬ್ರಿಟಿಷ್ ಧ್ವಜವನ್ನು ಇಳಿಸಿ ತಮ್ಮ ಧ್ವಜ ಏರಿಸಿದ್ದರು. ಈ ಸಾಹಸವನ್ನು ನಮ್ಮವರೇ ಸಣ್ಣದು ಮಾಡಿ ಬರೆದರೂ, ಬ್ರಿಟಿಷ್ ಕಲೆಕ್ಟರಾಗಿದ್ದ ಲೆವಿನ್ಸ್‌ನ ರಿಪೋರ್ಟ್ ಪ್ರಕಾರ ಇದು ಬಹಳ ಮಹತ್ವದ್ದಾಗಿದೆ. ಎಂ. ವೆವಿನ್ಸ್ ತಾನು ಮಂಗಳೂರಿನಿಂದ ಕಣ್ಣನೂರಿಗೆ ಓಡಿ ಹೋಗಬೇಕಾದ ಪರಿಸ್ಥಿತಿ ಹೇಗೆ ಬಂತು ಎಂಬುದನ್ನು ವಿವರವಾಗಿ ಸಮರ್ಥಿಸಿಕೊಂಡಿದ್ದಾನೆ. ಅದರ ಕನ್ನಡ ಅನುವಾದ ನಮಗೆ ಬಹಳ ಅಗತ್ಯ ಅನ್ನಿಸುತ್ತದೆ. ನಮ್ಮ ಹಿರಿಯರ ಸಾಹಸದ ಬಗ್ಗೆ ನಾವು ಹೆಮ್ಮೆ ಪಡಬಹುದಾದ ಚರಿತ್ರೆ ಇದರಲ್ಲಿ ಸಿಗುತ್ತದೆ. ಕೂಜುಗೋಡು ಅಪ್ಪಯ್ಯ ಮತ್ತು ಮಲ್ಲಪ್ಪ ಸಹೋದರರು, ಸುಬ್ರಹ್ಮಣ್ಯ ಜಾತ್ರೆ ನಡೆಸುತ್ತಿದ್ದವರು, ಇವರು ಬಿಸ್ಲೆ ಘಾಟಿ ಮಾರ್ಗವನ್ನು ಮುಚ್ಚಲು ಶಕ್ತರಾಗಿದ್ದರು. ಕೊಡಗಿನ ಎಡೆನಾಡು, ಗಡಿನಾಡುಗಳ ಜನರ ಮೇಲೆ ಇವರ ಪ್ರಭಾವವಿತ್ತು. ಕೊಡಗಿನ ಸುಭೇದಾರ ಅಪ್ಪಚ್ಚುನನ್ನು ಇವರು ಬಂಧಿಸಿದ್ದರು. ಇಂತಹ ಅನೇಕ ವಿಚಾರಗಳು ಚರಿತ್ರೆಕಾರರು ಮರೆಮಾಚಿದ್ದಾರೆ.

ಒಟ್ಟಿನಲ್ಲಿ ಬಿಸ್ಲೆ ಘಾಟಿಯ ಮೂಲಕ ತುಳುನಾಡಿಗೆ ಕನ್ನಡದ ಆಗಮನ ಆಯಿತು ಎನ್ನುವುದು ಬಹಳ ಗಮನಾರ್ಹ ವಿಚಾರ. ಹೀಗಾಗಿ ಪ್ರಥಮ ತಾಲೂಕು ಸಮ್ಮೇಳನ ಸುಬ್ರಹ್ಮಣ್ಯದಲ್ಲಿ ನಡೆದದ್ದು ನಿಜವಾಗಿಯೂ ಸಮರ್ಪಕ

ಎನ್ನಿಸುತ್ತದೆ. ಹಾಗೆಯೇ ಎರಡನೇ ಸಮ್ಮೇಳನ ಪಂಜದಲ್ಲಿ ಅಷ್ಟೇ ಸಮರ್ಪಕ. ಯಾಕೆಂದರೆ ತುಳುನಾಡಿನ ಮೂಲನಿವಾಸಿಗಳು ತಡೆ ಒಡ್ಡಿದ್ದು ಇಲ್ಲಿ. ಒಂದು ಧರ್ಮಕ್ಷೇತ್ರ ಇನ್ನೊಂದು ಕುರುಕ್ಷೇತ್ರ.

"ಕೊರಿಯೆರ್ ಕೋಟೆ ದೀಡಿಯೆರ್ ತಡೆಮುಳ್ಳು"- ಹೀಗೆ ಘಟ್ಟದ ಮೇಲಿನಿಂದ ಇಳಿದು ಬರುವವರನ್ನು ತಡೆದದ್ದು ಪಾಡ್ದನಗಳಲ್ಲಿ ಕಾಣಿಸಿಕೊಂಡಿದೆ. ನಮ್ಮ ದೇವರನ್ನು ಮಾತ್ರ ನಾವು ನಂಬುವುದು. "ಬದಲೊಂಜಿ ದೇವರೆಗ್ ಕೈಮುಗ್ಗಯೊ ಕಾಣಿಕೆ ಒಪ್ಪಿಸಾವಯೊ" ಎಂದು ಕರ್‌ರಂಬೆರ್‌ನಕ್ಲು ಅಂದರೆ ಕದಂಬರು ಹೇಳಿದರು ಎನ್ನುವುದನ್ನೂ ಗಮನಿಸಬೇಕಾಗುತ್ತದೆ. "ಘಟ್ಟಾಡ್ತ್ ಮಿತ್ತ್ ದೇವೆರ್‌ಯೇ...

ಘಟ್ಟಾಡ್ತ್ ಸಿರ್ತ್ ದೈವೋ....." ಎನ್ನು ಅಂಶ ಬಹಳ ಗಮನಾರ್ಹವಾದದ್ದು. ಕರಾವಳಿಯಲ್ಲಿ ಭೂತಾರಾಧನೆ ಘಟ್ಟದ ಮೇಲೆ ದೇವತಾರಾಧನೆ. ಇಲ್ಲಿಯೂ ಇಕ್ರವರೆ ಬಲ ಬಂಟ ಅನ್ನುವ ಮಾತು ಬರುತ್ತದೆ. ಇಕ್ರವರ ದೇವರು ಎನ್ನುವುದು ನುಡಿಗಟ್ಟಿನಲ್ಲಿ ಇದೆ. ಇಕ್ಕೇರಿಯರು ತುಳು ಮಾತಲ್ಲಿ ಇಕ್ರೆವರು ಆಗಿರಬೇಕು.

ಒಟ್ಟಿನಲ್ಲಿ ಈ ಪ್ರದೇಶಕ್ಕೆ ಎರಡು ಹಂತದಲ್ಲಿ ಬಯಲು ಸೀಮೆಯಿಂದ ಕನ್ನಡಿಗರು ಇಳಿದುಬಂದಿದ್ದಾರೆ.

ಪ್ರಥಮ ಹಂತದಲ್ಲಿ ಬಂದವರು ಹೊಯ್ಸಳರ ಕಾಲದಲ್ಲಿ ಬಂದಿರಬೇಕು. ಅವರು ಇಲ್ಲಿಯ ಮೂಲ ನಿವಾಸಿಗಳಂತೆ ಭೂತಾರಾಧನೆಯನ್ನು ಒಪ್ಪಿಕೊಂಡು ಅವರಂತೆ ಅಳಿಯ ಸಂತಾನ ಪದ್ಧತಿಯನ್ನು ಸ್ವೀಕರಿಸಿರಬೇಕು. ಅವರಿಗೆ ತುಳು ಮಾತೃ ಭಾಷೆ ಆಯಿತು. ಐಗೂರಿನ ಚರಿತ್ರೆಯಲ್ಲಿ ತಮ್ಮಂದಿರು ಕೆಳಬಂಗಾಡಿ ಮೇಲ್ ಬಂಗಾಡಿ ಆಳಿಕೊಂಡಿದ್ದ ವಿಚಾರ ಕಾಣಿಸಿಕೊಂಡಿದೆ. ಮಿತ್ತೂರು ನಾಯರ್ ಇತ್ಯಾದಿ ಮಲಯಾಳಿ ಭೂತಗಳ ಬಗ್ಗೆ ಸಂಶೋಧನೆ ನಡೆಸಿದರೆ- ಕೇರಳದ ಪ್ರಭಾವಕ್ಕೆ ಕನ್ನಡಿಗರಿಂದ ತಡೆ ಉಂಟಾಯಿತು ಎನ್ನುವ ವಿಚಾರ ಗೊತ್ತಾಗಬಹುದು. ಹೊಯ್ಸಳರು ಜೈನ ಮತ ಸ್ವೀಕರಿಸಿದಾಗ, ಇಲ್ಲಿ ವಲಸೆ ಬಂದವರು ಜೈನರಾಗಿರಬೇಕು. ಆದರೆ ಕೆಲವರಿಗೆ ಆಹಾರ, ಆಚಾರ, ವಿಚಾರ ಹೊಂದಿಕೊಳ್ಳುವುದು ಕಷ್ಟವಾಗಿ ಬಂಟರಾಗಿ ಉಳಿದರಿಬಹುದು. ಹಾಗೆ ಅವರವರ ಕುಲ ಕಸುಬಿಗೆ ಅನುಸಾರವಾಗಿ ಬೇರೆ ಬೇರೆ ಜಾತಿಗಳಾಗಿರಬಹುದು. ಆದರೆ ಇಲ್ಲಿಯ ಮೂಲನಿವಾಸಿಗಳನ್ನು ಹೊರತುಪಡಿಸಿ ಉಳಿದ ಎಲ್ಲರೂ ಕನ್ನಡ ನಾಡಿನ ಬಯಲು ಸೀಮೆಯಿಂದ ಬಂದವರು.

ಎರಡನೇ ಹಂತದಲ್ಲಿ ಬಂದವರು ಪ್ರತ್ಯೇಕ ಜಾತಿಗಳಾಗಿ ಉಳಿಯಲು ಯಾವುದೋ ಪ್ರಮುಖ ಕಾರಣಗಳಿರಬೇಕು. ಪ್ರಾಯಶಃ ಬಹಳ ದೀರ್ಘಕಾಲ ಸಂಬಂಧ ಕಡಿದುಹೋಗಿ ರಬೇಕು. ಇದಕ್ಕೆ ಮುಖ್ಯವಾಗಿ ರಾಜಕೀಯ ಕಾರಣವೇ ಅಡ್ಡಿ ಬಂದಿರಬೇಕು. ವಿಜಯನಗರದ ಪತನದ ನಂತರ ಬಂದ ಇನ್ನೊಂದು ಜನ ಸಮುದಾಯ ತುಳುನಾಡಿನಲ್ಲಿ ಪ್ರತ್ಯೇಕವಾಗಿ ಉಳಿದಿದೆ. ಅವರು ಭೂತಾರಾಧನೆ ಒಪ್ಪಿಕೊಂಡಿದ್ದಾರೆ. ತುಳು ಭಾಷೆ ಕಲಿತಿದ್ದಾರೆ. ಆದರೆ ಅಳಿಯ ಸಂತಾನ ಒಪ್ಪಿಕೊಂಡಿಲ್ಲ. ಒಟ್ಟಿನಲ್ಲಿ ಒಡೆದು ಆಳುವ ನೀತಿಯ ಬ್ರಿಟಿಷರು ಇಡಿ ಸಮಾಜವನ್ನು ಚಿಕ್ಕ ಚಿಕ್ಕ ಜಾತಿಗಳಾಗಿ ಕತ್ತರಿಸಿ ಕೈಮಾ ಮಾಡಿತ್ತಾರೆ.

ಬ್ರಿಟಿಷರು ಹೋಗಿ ಅರ್ಧ ಶತಮಾನ ಆದರೂ ನಮ್ಮಲ್ಲಿ ಆ ಜಾತಿ ಈ ಜಾತಿ, ಮೇಲು-ಕೀಳು ಹೋಗಿಲ್ಲ. ವಿದ್ಯಾವಂತರಲ್ಲೂ ವಿಶಾಲ ಭಾವನೆ ಬಂದಿಲ್ಲ. ಈ ಪರಿವಾರ ಪಂಚಲಿಂಗೇಶ್ವರನ ಕೃಪೆಯಿಂದ ಆದರೂ ನಾವೆಲ್ಲ ಕನ್ನಡಿಗರು, ನಾವೆಲ್ಲ ಒಂದು ಪರಿವಾರದವರು ಎನ್ನುವ ಭಾವನೆ ಮೂಡಿ ಬರಲಿ. ಒಂದು ಸಮುದಾಯವಾಗಿ ಬಂದ ಜನ ಕೋಟಿ ಚೆನ್ನಯರ ಕಾಲದಲ್ಲಿ ರಕ್ತಪಾತ ಮಾಡಿಕೊಂಡ ಈ ಪಂಜದ ಚರಿತ್ರೆಯಿಂದ ನಾವು ಪಾಠ ಕಲಿಯಬೇಕಾಗುತ್ತದೆ. ವರ್ಗ ದ್ವೇಷ, ವರ್ಣದ್ವೇಷ ಪತನಕ್ಕೆ ಹೇತುವಾಗುತ್ತದೆ.

ಬ್ರಿಟಿಷರು ಹೋದ ಮೇಲೆ ಪ್ರಜಾಪ್ರಭುತ್ವದ ಸರಕಾರದಲ್ಲಿಯೂ ರಾಜಕೀಯ ಉದ್ದೇಶಕ್ಕೆ ಜಾತೀಯತೆಯ ದುರುಪಯೋಗ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ. ನನ್ನ ಮೇಲೆ ಜಾತಿವಾದಿ ಎಂಬ ಆಪಾದನೆ ಕೆಲವು ರಾಜಕಾರಣಿಗಳು ಕಳೆದ ವಿಧಾನ ಸಬೆ ಚುನಾವಣೆ ಸಂದರ್ಭದಲ್ಲಿ ಮಾಡಿದರು. ಅದನ್ನು ಅಲ್ಲಗಳೆಯುವುದಕ್ಕಾಗಿಯೇ ಈ ದಿನ ಬಿಡುಗಡೆಯಾದ "ಕೊಡಗಿನಲ್ಲಿ ಜಾತೀಯತೆ" ಎಂಬ ಪುಸ್ತಕ ರೂಪದಲ್ಲಿ ಕಾಣಿಸಿಕೊಂಡಿದೆ. ಇದರಲ್ಲಿ ಒಂದು ತಿಂಗಳ ಕಾಲ ವಿವಿಧ ಪತ್ರಿಕೆಗಳಲ್ಲಿ ಕಾಣಿಸಿಕೊಂಡ ಹೇಳಿಕೆಗಳನ್ನು ಜಾಹೀರಾತುಗಳನ್ನು ಸಂಗ್ರಹಿಸಿಡಲಾಗಿದೆ. ಅವುಗಳ ಬಗ್ಗೆ ನನ್ನ ಅಭಿಪ್ರಾಯವೇನನ್ನೂ ಕೊಡದೆ ಓದುಗರ ಮುಕ್ತ ಚಿಂತನೆಗೆ ತೆರೆದಿಡಲಾಗಿದೆ.

ಈ ತಾಲೂಕಿನಲ್ಲಿ ಪ್ರತಿ ಮನೆಯ ಆಡು ಭಾಷೆ ಪ್ರತ್ಯಪ್ರತ್ಯೇಕ. ಗೌಡ ಕನ್ನಡ, ಹವ್ಯಕ ಕನ್ನಡ, ತುಳು, ಮಲೆಯಾಳ, ಮರಾಠಿ, ಕೊಂಕಣಿಗಳಲ್ಲದೆ ಸಿಲೋನಿನವರೊಂದಿಗೆ ತಮಿಳೂ ಬಂದಿದೆ. ಇವತ್ತಿನ ಸಮ್ಮೇಳನದಲ್ಲಿ ಹವ್ಯಕ ಕನ್ನಡ, ಗೌಡ ಕನ್ನಡ, ತುಳು ಭಾಷೆಗಳ ಬಗ್ಗೆ ಪ್ರಬಂಧ ಮಂಡಿಸಲ್ಪಟ್ಟಿರುವುದು ಔಚಿತ್ಯಪೂರ್ಣವಾಗಿದೆ. ತುಳು, ಕೊಂಕಣಿ, ಕೊಡವ ಅಕಾಡೆಮಿ ಮುಂದುವರಿಯುವುದು ಒಳ್ಳೆಯದು. ಅದರೊಂದಿಗೆ ಗೌಡ ಕನ್ನಡ, ಹವ್ಯಕ ಕನ್ನಡಗಳಿಗೂ ಅಕಾಡೆಮಿಯ ಅವಶ್ಯಕತೆ ಇದೆ. ಐದಾರು ಲಕ್ಷ ಜನರ ಮನೆ ಮಾತು ಅಲಕ್ಷ್ಯವಾಗಬಾರದು.

ಹವ್ಯಕ ಕನ್ನಡದ ಕುರಿತು ಪ್ರೊ|| ಡಾ|| ಮರಿಯಪ್ಪ ಭಟ್ ಹಾಗೂ ಗೌಡ ಅರೆಗನ್ನಡದ ಕುರಿತು ಪ್ರೊ|| ಡಾ|| ಕುಶಾಲಪ್ಪ ಗೌಡರು ಉಲ್ಲೇಖನೀಯ ಕೃತಿಗಳನ್ನು ನೀಡುವುದರ ಮೂಲಕ ಇಲ್ಲಿ ದೊಡ್ಡ ಕೆಲಸಗಳನ್ನು ಮಾಡಿದವರು. ಇತ್ತೀಚೆಗೆ ಆಡು ನುಡಿಗಳ ಸೊಗಡನ್ನು ತಮ್ಮ ಕೃತಿಗಳಲ್ಲಿ ಕಾಣಿಸಿಕೊಳ್ಳುವುದರ ಮೂಲಕ ಈ ತಾಲೂಕಿನ ಯುವ ಬರಹಗಾರರಲ್ಲಿ ಕೆಲವರು ಈ ಪ್ರದೇಶದ ಸತ್ವಶಾಲಿ ಸಾಹಿತ್ಯದ ಬೆಳೆಗೆ ತೊಡಗಿದ್ದಾರೆ. ಕಳೆದೆರಡು ದಶಕಗಳಿಂದ ಸುಳ್ಯ ತಾಲೂಕು ಎಲ್ಲಾ ಕ್ಷೇತ್ರಗಳಲ್ಲೂ ಮುನ್ನಡೆಯ ರಭಸದಲ್ಲಿದೆ. ಸಾಹಿತ್ಯ, ಸಂಗೀತ, ನಾಟ್ಯ, ನೃತ್ಯ, ಚಿತ್ರ, ನಾಟಕ, ಯಕ್ಷಗಾನ, ಜಾನಪದವೇ ಮುಂತಾಗಿ ಲಲಿತಕಲಾ ಮಾಧ್ಯಮಗಳಲ್ಲಿ ಹೊಸ ಹೆಜ್ಜೆ ಇಡುತ್ತಿದೆ. ಪ್ರಸಾರ, ಪ್ರಚಾರ ಮಾಧ್ಯಮಗಳಿಂದ ಹೊಸ ತಲೆಮಾರಿನ ಬಹುಮುಖ ಪ್ರತಿಭೆಗಳು ಬೆಳಕಿಗೆ ಬರುತ್ತಿವೆ. ಸಾಹಿತ್ಯ, ಶಿಕ್ಷಣ ಕ್ಷೇತ್ರಗಳಲ್ಲಿ ಮೊದಲ

ಸ್ಥಾನದಲ್ಲಿರುವ ಈ ಜಿಲ್ಲೆಯ ಇತ್ತೀಚೆಗೆ ಹೆಸರುಗೊಂಡ ಸುಳ್ಯ ತಾಲೂಕು ಎಲ್ಲಾ ಪ್ರಕಾರಗಳಲ್ಲೂ ಇಂದು ಮೊದಲೆಣಿಕೆಯಲ್ಲಿದೆ.

ಇದರೊಂದಿಗೆ ಈ ಕ್ಷೇತ್ರಗಳಲ್ಲಿ ದುಡಿದು ಹೊಸ ಬೆಳೆಗೆ ಕಾರಣರಾದ ಹಿರಿಯ ತಲೆಮಾರಿನ ಹಲವರನ್ನು ಅರ್ಥಮಾಡಿಕೊಳ್ಳಲು, ಗುರುತಿಸಿ ಪ್ರೋತ್ಸಾಹಿಸಲು ಸಮರ್ಥ ಸಮಕಾಲೀನರ ಕೊರತೆಯೂ ಎದ್ದು ಕಾಣುತ್ತಿದೆ. ಮುಖ್ಯವಾಗಿ ಅಚ್ಚಗನ್ನಡಕ್ಕಾಗಿ ತನ್ನ ಬದುಕನ್ನೇ ತೇದ ದಿ| ಕೊಳಂಬೆ ಪುಟ್ಟಣ್ಣ ಗೌಡರನ್ನು ನಾವು ಸಾಕಷ್ಟು ಗಮನಿಸಿಲ್ಲ. ನಾವು ಮೈಸೂರಲ್ಲಿದ್ದು "ನೀವು ಎಲ್ಲಿದ್ದೀರಿ?" ಎಂದು ಪರಿಚಿತರನ್ನು ಕೇಳಿದರೆ 'ಕುವೆಂಪು ನಗರ'ಎಂಬ ಉತ್ತರ ಬರಲೂ ಬಹುದು. ಈಗ 'ಕುವೆಂಪು ಮನೆಯಲ್ಲಿ ಯಾರಿದ್ದಾರೆ?" ಎಂಬ ಪ್ರಶ್ನೆಗೆ ಡಾ| ಚಿದಾನಂದ ಕೊಳಂಬೆ ಎಂಬ ಉತ್ತರ ಬಂದೇ ಬರುತ್ತದೆ. ಕುವೆಂಪು ಮಗಳು ತಾರಿಣಿ ಮತ್ತು ಕೊಳಂಬೆ ಪುಟ್ಟಣ್ಣ ಗೌಡರ ಮಗ ಚಿದಾನಂದರ ವೈವಾಹಿಕ ಸಂಬಂಧ ಸುಳ್ಯಕ್ಕೆ ಸಂದ ಗೌರವ. ಕುವೆಂಪು ಮಾತ್ರ ಕೊಳಂಬೆಯವರನ್ನು ತೂಗುವ ತೂಕ ಇದ್ದವರೆಂದು ಇದರಿಂದ ಅರಿವಾಗುತ್ತದೆ. ಅಂತೆಯೇ ಕಳೆದ ನಾಲ್ಕೈದು ದಶಕಗಳಿಂದ ಸಾಹಿತ್ಯ ಕಲಾ ಚಟುವಟಿಕೆಗಳಲ್ಲಿ ದುಡಿಯುತ್ತಿರುವ ಹಿರಿಯ ಸಾಹಿತಿ ಶ್ರೀ ಟಿ. ಜಿ. ಮುಡೂರು ಇವರ ಸಾಧನೆಯನ್ನು ಗುರುತಿಸುವಲ್ಲಿ ನಾವು ಹಿಂದುಳಿದಿದ್ದೇವೆ. ಇಲ್ಲಿನ ಹಲವು ಸಾಹಿತ್ಯ ಕಲಾ ಸಂಘ, ಸಂಸ್ಥೆ, ಪ್ರಕಾಶನಗಳನ್ನು ಹುಟ್ಟು ಹಾಕಿ ಬೆಳೆಸಿ ಹೊಸ ತಲೆಮಾರಿನ ಬರಹಗಾರರನ್ನು ಬೆಳಕಿಗೆ ತಂದ ಇವರು ಈ ಪ್ರದೇಶದ ಹೊಸ ಸಾಹಿತ್ಯ ಕೃಷಿಯ ಆದ್ಯ ಪ್ರವರ್ತಕರು ಎಂದರೆ ಅತಿಶಯೋಕ್ತಿಯಾಗದು. ಇಂದೂ ಈ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದುಕೊಂಡು ಹೊಸ ತಲೆಮಾರಿನ ಸಾಹಿತಿ ಕಲಾವಿದರೊಂದಿಗೆ ಬೆರೆತು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದಾರೆ. ಇದಕ್ಕೆ ಇಂದಿನ ಸಮ್ಮೇಳನವೇ ನಮ್ಮೆದುರಿಗಿದೆ.

ಕೊಳಂಬೆಯವರು ಮರಣಾನಂತರ ದಿ|| ಕೊಳಂಬೆ ಸ್ಮಾರಕ ಸಮಿತಿ ಹುಟ್ಟಿಕೊಂಡರೂ ಅದರಿಂದ ಹೆಚ್ಚಿನ ಕೆಲಸಗಳಾಗುತ್ತಿಲ್ಲ. ಅವರು ಬದುಕಿದ್ದಾಗಲೇ ಅವರ ಅಚ್ಚಗನ್ನಡ ನುಡಿಕಣಜ ಶಬ್ದಕೋಶ ಪ್ರಕಟವಾಗುವುದನ್ನು ಅವರಿಂದ ಕಾಣಲಾಗಲಿಲ್ಲ. ಕೊಳಂಬೆ ಮತ್ತು ಮುಡೂರು ಇವರುಗಳ ಪ್ರಕಟವಾದ ಕೆಲವು ಕೃತಿಗಳಲ್ಲದೇ, ಅಪ್ರಕಟಿತ ಕೃತಿಗಳೂ ಹಲವಿದೆ. ಅವುಗಳ ಪ್ರಕಟನೆ ವಿಚಾರ ಗೋಷ್ಠಿಗಳಲ್ಲಿ ಅವುಗಳ ಮೌಲ್ಯಮಾಪನ ಕಾರ್ಯಗಳು ಇಂದು ನಡೆಯಬೇಕಾದ ಅಗತ್ಯವಿದೆ. ಇದೇ ರೀತಿ ಈ ರಂಗಗಳಲ್ಲಿ ದುಡಿದು ಗುರುತಿಸಲ್ಪಡದ ಪ್ರತಿಭೆಗಳೂ ಹಲವಿರಬಹುದು. ಈ ತಾಲೂಕಿನ ಹಿಂದಿನ ಇಂದಿನ ಸಾಹಿತ್ಯ ಸಾಧನೆಗಳನ್ನು ಗುರುತಿಸಿ ಅಜ್ಞಾತ ಕಲಾವಿದರನ್ನು ಬೆಳಕಿಗೆ ತರುವ ಕೆಲಸವನ್ನು 'ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು' ಈ ತಾಲೂಕಿನ ಸಾಹಿತ್ಯ ಕಲಾ ಸಂಘ ಸಂಸ್ಥೆಗಳು ಮಾಡಬೇಕಾಗಿದೆ. ಇಂದಿನ ಸಮ್ಮೇಳನದಲ್ಲಿ ಈ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಹದಿನಾಲ್ಕು ಮಂದಿಯನ್ನು ಗುರುತಿಸಿ ಸನ್ಮಾನ ಮಾಡಿರುವುದು ಸ್ತುತ್ಯ. ಇದರಲ್ಲಿ ಬೊಳಿಯ ಅಜಿಲರನ್ನು ಜಾನಪದ ಕ್ಷೇತ್ರದಲ್ಲಿ ಗುರುತಿಸಿರುವುದು ಪ್ರಮುಖವಾಗಿದೆ.

ಅಧಿಕ ಸಂಖ್ಯೆ ಸಾಹಿತ್ಯ ಆಸಕ್ತರ ಸಮಾವೇಶದಲ್ಲಿ ಈ ಸಮ್ಮೇಳನ ಅದ್ದೂರಿಯಾಗಿ ಮಾತ್ರವಲ್ಲ, ಅಚ್ಚುಕಟ್ಟಾಗಿ ನಡೆದಿದೆ ಎನ್ನಲು ಹರ್ಷವಾಗುತ್ತದೆ. ಉದ್ಘಾಟಕರ, ಅಧ್ಯಕ್ಷರ ಭಾಷಣಗಳು-ಮುಂಜಾನೆಯ ಎರಡು ವಿಚಾರಗೋಷ್ಠಿಯ ಪ್ರಬಂಧಗಳು, ಸಂಜೆಯ ಕವಿಗೋಷ್ಠಿ-ಸನ್ಮಾನಗಳು, ಜಿಲ್ಲಾ ಸಮ್ಮೇಳನಗಳ ಕಾರ್ಯಕ್ರಮಗಳಿಗೆ ಹೆಗಲೆಣೆಯಾಗಿ ಜರಗಿವೆ ಎನ್ನಲು ಸಂತೋಷವಾಗುತ್ತಿದೆ. ಸಮ್ಮೇಳನದ ಭಾಷಣ ಪ್ರಬಂಧಗಳನ್ನು ಸ್ವಾಗತ ಸಮಿತಿಯು ಹೊತ್ತಗೆ ರೂಪದಲ್ಲಿ ಹೊರ ತರುವ ನಿಟ್ಟಿನಲ್ಲಿದೆಯೆಂದು ತಿಳಿದು ಸಮ್ಮೇಳನದ ಕಾರ್ಯ ಸಾರ್ಥಕವಾಗುತ್ತಿದೆಯೆಂದು ಹೇಳುತ್ತಿದ್ದೇನೆ. ಸಮ್ಮೇಳನಗಳು ಬರಿಯ ಮಾತುಕತೆಗಳಲ್ಲಿ ಮರೆಯಾಗಬಾರದು. ಬರಹಗಳಲ್ಲಿ ದಾಖಲೆಯಾಗಿ ಉಳಿಯಬೇಕು.

ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಶ್ರೀ ಹರಿಕೃಷ್ಣ ಪುನರೂರು ಇವರನ್ನು ನಾನು ಹತ್ತಿರದಿಂದ ಬಲ್ಲವನು. ವಿವಿಧ ಕ್ಷೇತ್ರಗಳಲ್ಲಿ ದುಡಿಯುತ್ತಿರುವ ಇವರು ಪರಿಷತ್ತಿನ ಜಿಲ್ಲಾಧ್ಯಕ್ಷರಾದ ಮೇಲೆ ಪ್ರತಿ ವರುಷವೂ ತಾಲೂಕು, ಜಿಲ್ಲಾ ಸಾಹಿತ್ಯ ಸಮ್ಮೇಳನಗಳು ತಪ್ಪದೆ ನಡೆಯುತ್ತಿವೆ. ಇವರ ಕಾಲಾವಧಿಯಲ್ಲಿ ಪರಿಷತ್ತು ಇನ್ನಷ್ಟು ಸಾಹಿತ್ಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿ. ಇವುಗಳಿಂದ ಜನಸಾಮಾನ್ಯರಲ್ಲೂ ಸಾಹಿತ್ಯಾಭಿರುಚಿ ಹೆಚ್ಚಲಿ ಎಂಬ ಹಾರೈಕೆಯೊಂದಿಗೆ ಸಮ್ಮೇಳನದ ಯಶಸ್ಸಿಗೆ ಕಾರಣರಾದ ಸ್ವಾಗತ ಸಮಿತಿಯ ಸರ್ವರನ್ನು ಜೊತೆಗೆ ಪಂಜದ ಪೌರರನ್ನು ಅಭಿನಂದಿಸುತ್ತೇನೆ. ಇದು 'ಕೊಂಬೋಲಗ" ಎಂಬ ಪುಸ್ತಕದಲ್ಲಿ ಪ್ರಕಟವಾಗಿದೆ.

ಪಂಜ(ದ.ಕ) 8-04-1995

— ಶ್ರೀ ನಂಜೇಗೌಡನ ಯಸ್. ದೇವಿಪ್ರಸಾದ್, ಸಂಪಾಜೆ.

---

## ನನ್ನ ಪ್ರಿಯೆ

ತಿಳಿನೀರ ಹೊಳನಿಂದ..... ಬಿಳಿಪಾಲ ನೊರೆಯಿಂದ
ಕಡೆದಿರುವ ನಿನ್ನನ್ನು ಶ್ರೀಗಂಧ ತುಂಡಿಂದ
ಕಂಗಳಲಿ ಚಂದಿರನ ಕಾಂತಿಯನ್ನು ತುಂಬಿರುವ
ಕೆಂದುಟಿಯ ಮೇಲೆಲ್ಲಾ ಹೂಬಣ್ಣ ಚೆಲ್ಲಿರುವ
ಮುಂಗುರುಳ ಸುಳಿಯಲ್ಲಿ ಚಿತ್ತಾರ ಬಿಡಿಸಿರುವ

ನಕ್ಕಾಗ ಕೋಲ್ಮಿಂಚು ತುಟಿಯಲ್ಲಿ ನೀಡಿರುವ
ಚಂದಿರನ ಊರಿಂದ ಚಂದನವ ಲೇಪಿಸಿ
ಮಗುವಂತೆ ಜೋಪಾನ ಮಾಡೆಂದು ಕಳುಹಿಸಿರುವ
ಪ್ರೀತಿಯನ್ನು ಮನದೊಳಗೆ 'ನಿನಗಾಗಿ' ಸೃಷ್ಟಿಸಿದ
ಆ ಶಿಲ್ಪಿಗೀಗ ನಾನೇನು ಕೊಡಲಿ ....?

— ಪೇರಿಯನ ವಿವೇಕ್

---

ನಾಯಿ ಬೊಗುಳಿದರೆ ದೇವಸ್ಥಾನ ಹಾಳಾದೊ ?

# ಕೆಂಚನೂ.....

— ಬಿ. ಆರ್. ಜೋಯಪ್ಪ

ಕೆಂಚನ ಪಾಲಿಗೆ ಕಾಡೇ ನಾಡು. ಜೇನು ಬೇಟೆ ಮುಖ್ಯ ಕಸುಬು. ಅದಿಲ್ಲದಿದ್ದರೆ ಊರವರಿಗೆ ಬೇಕಾದ ನಾರನ್ನು ಸಂಗ್ರಹಿಸುವ ಕೆಲಸ. ಬೆಳೆಯನ್ನು ಹೊರೆ ಕಟ್ಟಲು ಬೇಕಾದ ಕವರಿ ನಾರನ್ನು ಎಳೆದು ಹೊರೆ ಮಾಡಿ ಊರೊಳಗೆ ಮಾರಾಟ ಮಾಡುತ್ತಿದ್ದ. ಕೆಲವೊಮ್ಮೆ ಕಣಿಲೆಯನ್ನು ಹೊತ್ತು ಊರೊಳಗೆ ನುಗ್ಗಿದರೆ ಒಂದೆರಡು ದಿನದ ಗಂಜಿಗೆ ಅಕ್ಕಿಯೋ ನುಚ್ಚೋ ಸಿಕ್ಕುತ್ತಿತ್ತು. ನುಚ್ಚನ್ನು ಗಂಜಿ ಮಾಡಿ ಉಂಡು ಮುಂದಿನದನ್ನು ಚಿಂತಿಸುತ್ತಿದ್ದ. ಕೆಂಚನ ಮಕ್ಕಳೂ ಅವನಷ್ಟೇ ಚುರುಕು. ಗಂಡು ಮಗು ಹುಟ್ಟಿದಾಗ ಆ ಮಗುವನ್ನು ಹೆಮ್ಮರಕ್ಕೆ ಮುಟ್ಟಿಸುತ್ತಾರೆನ್ನುವ ಮಾತಿದೆ. ಯಾಕೆಂದರೆ ಆ ಮಗು ಮರ ಹತ್ತುವ ನಿಸ್ಸೀಮನಾಗಲೆಂಬ ಆಶಯವಂತೆ! ಇವನ ಮಕ್ಕಳು ಎಳೆ ಬಿಸಿಲು ಬಂತೆಂದರೆ ಕಾಡಿನೊಳಗೆ ಮಾಯ! ಹುತ್ತಕ್ಕೋ ಪೊಟರೆಗೂ ನುಗ್ಗುವ ಜೇನುನೊಣದ ಬಿಂಕವನ್ನು ಬಹು ದೂರದಿಂದಲೇ ಪತ್ತೆ ಮಾಡಬಲ್ಲರು.

ಕೆಂಚನ ಪರಿವಾರ ದೊಡ್ಡದು. ನಾಲ್ಕು ಮಕ್ಕಳು; ಜೊತೆಗೆ ಅತ್ತೆ, ಮಾವ, ಭಾವ, ಅತ್ತಿಗೆ, ನಾದಿನಿ -ಹೀಗೆ ಹತ್ತು ಹನ್ನೆರಡು ಜನರ ಗುಂಪು. ಇವರ ಹಾಡಿ ಚಿಕ್ಕದಾದರೂ ಚೊಕ್ಕದ್ದು. ಬೇಸಗೆಯಲ್ಲಿ ಅಂಗಳವೇ ಮಲಗುವ ಮನೆ. ನಡುವೆ ಬೆಂಕಿಯ ರಾಶಿ. ಬೆಂಕಿಯ ಸುತ್ತಲೂ ಕುಳಿತು ಬಹು ಹೊತ್ತಿನವರೆಗೆ ಹಾಡು ಹೇಳುತ್ತ ಬುಂಡೆ ಆಡಿಸುತ್ತ ನಕ್ಕು ನಲಿದು ಮಲಗಿಕೊಳ್ಳುವರು. ಹಾವು ಚೇಳಿನ ಬಗ್ಗೆಯಾಗಲಿ, ಕ್ರೂರ ಮೃಗಗಳ ಬಗ್ಗೆಯಾಗಲಿ ಎಂದೂ ಚಿಂತಿಸಿದವರಲ್ಲ. ಹಾಡಿಯ ಗಳುವನ್ನು 'ಭೀಮ' ಗಂಟಿನಲ್ಲಿ ಕಟ್ಟಿದರೆ ಆನೆ ಹಾಡಿಯತ್ತ ಬರುವುದಿಲ್ಲ ಎಂಬ ನಂಬಿಕೆಯೂ ಉಂಟು. ಹಾಡಿಯ ಹತ್ತಿರ ಆನೆ ಬಂತೆಂದರೆ ಶಿಳ್ಳೆ ಹಾಕಿ ಓಡಿಸುತ್ತಿದ್ದರು. ಒಂದು ವೇಳೆ ಹಾಗೂ ಓಡಲಿಲ್ಲವೆಂದರೆ ಬಿಲ್ಲು ಕಲ್ಲಿನ ಹೊಡೆತ ಕೊಡುತ್ತಿದ್ದರು. ಬಿಲ್ಲು ಕಲ್ಲಿನ ಹೊಡೆತ ಬಿದ್ದಾಕ್ಷಣ ಕಣ್ಣಿಗೇನಾದರೂ ಹೊಡೆತ ಬೀಳಬಹುದೆಂದು ಹೆದರಿ ಆನೆ ಹಿಂತಿರುಗಿ ಬಿಡುತ್ತಿತ್ತು.

ಇವರು ತಮ್ಮ ಹಾಡಿಯ ಸುತ್ತಲೂ ಅಗೆದು ರಾಗಿ ಬಿತ್ತುತ್ತಿದ್ದರು. ಕೆಲವು ಸಿಹಿ ಕುಂಬಳದ ಬಳ್ಳಿಯೂ ಇರುತ್ತಿತ್ತು. ರಾಗಿ ತೆನೆ ಹೊರಟು ಹಾಲು ತುಂಬಿತೋ ಇಲ್ಲವೋ ಆಗಲೇ ಕುಯ್ಲು ಪ್ರಾರಂಭ. ರಾಗಿ ತೆನೆಯನ್ನೇ ಆಯ್ದು ತಂದು ಸುಟ್ಟು ತಿನ್ನುವರು. ಅದಿಲ್ಲದಿದ್ದರೆ ಚಗ್ತೆ, ಪೈಚೆ, ಕೆಸ, ವನಗನ, ಗೆಣಿಕೆ ಈ ಯಾವುದೇ ಸೊಪ್ಪನ್ನಾಗಲಿ ತಂದು ಉಪ್ಪುಹಾಕಿ ಬೇಯಿಸಿ ತಿನ್ನುವರು. ಸಿಹಿಕುಂಬಳವೇನಾದರೂ ಇದ್ದರೆ ಅದನ್ನು ಬಿಸಿ ಬೂದಿಯಲ್ಲಿ ಹೂತು ಬೇಯಿಸಿ ಹಂಚಿಕೊಂಡು ತಿಂದರಾಯಿತು ಆ ದಿನದ ಊಟ. ಇಂಥವರು ಕಾಯಿಲೆಗೆ ತುತ್ತಾಗುತ್ತಿದ್ದುದೇ ವಿರಳ!

ಮಕ್ಕಳು ದೊಡ್ಡವರಾದಿಯಾಗಿ ಗೆಣಸು ಅಗೆಯಲು ಕಾಡಿಗೆ ಹೋಗುತ್ತಿದ್ದರು. ನಾರೆ ಗೆಣಸು, ಅಕ್ಕಿ ಗೆಣಸು ಇಲ್ಲವೆ ತೀನ ಗೆಣಸು ಸಿಕ್ಕುತ್ತಿತ್ತು. ನಾರೆ ಗೆಣಸು ಸಿಕ್ಕಿದರೆ ಸುಟ್ಟು ತಿನ್ನುತ್ತಿದ್ದರು. ಆ ಗೆಣಸು ತಿಂದ ಶುರುವಿನಲ್ಲಿ ಒಬ್ಬ ಹುಡುಗ ಎರಡ ಮಾಡಲು ಹೋಗಿ ಕಿರುಚಿಕೊಂಡು ಬಂದುದುಂಟು. ಯಾಕೆಂದರೆ ನಾರೆಗೆಣಸು- ಹೆಸರೇ ನಾರು ಗೆಣಸು-ನಾರಿನಂತೇ ಇರುವ ಆ ಗೆಣಸು ಹೊಟ್ಟೆಯಿಂದ ದಾಟುವಾಗ ಹಾವೇ ಹೊರಬಂದಂತೆ! ಇರುವ ಮಾಂಸದ ಅಡಿಗೆಗೆ ಉಪ್ಪು ಮತ್ತು ಗಾಂಧಾರಿ ಮೆಣಸನ್ನೇ ಉಪಯೋಗಿಸುತ್ತಿದ್ದುದರ ಗುಟ್ಟು ಅವರಿಗೆ ಗೊತ್ತು.

ಏಪ್ರಿಲ್-ಮೇ ತಿಂಗಳು ಕೆಂಚನಿಗೆ ಜೇನುತುಪ್ಪದ ಸುಗ್ಗಿಯ ಕಾಲ. ಜೇನುಗೂಡು ಹೆಮ್ಮರದ ತುತ್ತ ತುದಿಯಲ್ಲಿರಲಿ ಅಥವಾ ಪೊಟರೆಯಲ್ಲೇ ಇರಲಿ ಅದನ್ನು ಕಿತ್ತೇ ಕೀಳುತ್ತಿದ್ದ. ತುಪ್ಪವನ್ನು ಸೋರೆ ಬುರುಡೆಯಲ್ಲಿ ತುಂಬಿಕೊಂಡು ಊರೊಳಗೆ ನುಗ್ಗಿದರೆ ಅವರು ನೀಡುವ ಬತ್ತವನ್ನೋ ಚಿಂದ್ಲನ್ನೋ ತಂದು ಕುಟ್ಟಿ ಅಕ್ಕಿ ಮಾಡಿ ಗಂಜಿ ಕಾಯಿಸಿ ಒಂದೆರಡು ತಟ್ಟೆಯಷ್ಟು ಗಂಜಿಯನ್ನು ಕುಡಿದರೆ ಅನ್ನ ಉಂಡ ಸಂತೃಪ್ತಿ. ಒಂದು ವೇಳೆ ಜೇನಿನ ಬರೇ ಮೊಟ್ಟೆಯ ಎರಿ ಸಿಕ್ಕಿದರೆ ಸ್ವಲ್ಪ ಜೇನುತುಪ್ಪವಿರುವ ಎರಿಯೊಡನೆ ಬೆರಸಿ ಮೊಟ್ಟೆ ಎರಿಯನ್ನು ತಿನ್ನುತ್ತಿದ್ದರು. ಕಣಿಲೆ ಸಿಕ್ಕುವ ಕಾಲದಲ್ಲಿ ಕಣಿಲೆಯನ್ನು ಕೊಯ್ದು ಬೇಯಿಸಿ ನೀರು ಚೆಲ್ಲಿದರೆ ಅವತ್ತು ಕತ್ತರಿಸಿದ ಕಣಿಲೆ ಅವತ್ತೇ ತಿನ್ನಬಹುದು. ಮೂರು ದಿನ ನೀರಲ್ಲಿಟ್ಟು ಹುಳಿಬಂದ ನಂತರ ತಿನ್ನುವುದು ಸಿರಿವಂತರ ಪಾಲಿಗೆ ಶೋಕಿಯಾದೀತು. ಆದರೆ ಕೆಂಚನಿಗೆ ಅಂದಿನ ಕಣಿಲೆ ಬಿಟ್ಟರೆ ಬೇರೆ ಗತಿಯಿಲ್ಲ.

ಇವರು ಬೇಟೆಗೆ ಹೊರಡುವುದೊಂದು ಸಂಭ್ರಮವೇ. ಮಣ್ಣನ್ನು ಕಲಸಿ ಹದಮಾಡಿ ಗೋಲಿಯಂತಹ ನೂರಾರು ಉಂಡೆ ಮಾಡಿ ಒಣಗಿಸಿ ಚೀಲಕ್ಕೆ ತುಂಬಿಕೊಳ್ಳುವರು. ಬಿದಿರಿನಿಂದ ಮಾಡಿದ ಬಿಲ್ಲು. ಬಿದಿರನ್ನು ಒಡೆದು ಒಂದು ಒಡೆಯನ್ನು ಬಿಲ್ಲಿಗಾಗಿ ಆಯ್ಕೆ ಮಾಡಿಕೊಳ್ಳುವರು. ಚೆನ್ನಾಗಿ ಕೀಸಿ(ಗೀಸಿ) ಬೂತಾಳೆ(ರಕ್ಕಸ ಪಟ್ಟೆ) ನಾರಿನ ಹುರಿಯನ್ನು ಆ ಒಡೆಗೆ (ಪಟ್ಟೆಗೆ) ಬಿಗಿದು ಎಳೆದು ಕಟ್ಟಿ ಮೀಟಿದಾಗ "ಟಿಂಗ್ ಟಿಂಗ್' ಸದ್ದು ಬರುತ್ತಿತ್ತು. ಅಂಥ ಬಿಲ್ಲು ಇವರ ಕೈಗೆ ಬಂತೆಂದರೆ ಆನೆಯೇ ಹೆದರುತ್ತಿತ್ತು. ಇನ್ನು ಸಣ್ಣ ಪುಟ್ಟ ಪ್ರಾಣಿ-ಪಕ್ಷಿಗಳ ಕತೆಯೇನು?

ಕೆಂಚ ಕಪಿ ಬೇಟೆಯ ನಿಸ್ಸೀಮ. ಒಮ್ಮೆ ಬೇಟೆಗೆ ಹೊರಟನೆಂದರೆ ನಾಲ್ಕಾರು ಕಪಿಗಳು ಇವನ ಬಲೆಗೆ ಬಲಿಯಾಗಲೇ ಬೇಕು. ಸತ್ತ ಕಪಿಗಳು ಕೆಂಚನ ಹೆಗಲಲ್ಲಿ ಬೇತಾಳದಂತೆ ಜೋತಾಡುತ್ತಿದ್ದವು. ಕೆಂಚನ ಪರಿವಾರಕ್ಕೆ ಮಾಂಸ ತಿನ್ನುವ ಆಸೆ ಚಿಗುರೊಡೆದಾಗ"ಮಾವುಸ ತಿನ್ನಾಕ್‌ನೇ ಭಾವಾ" ಅಂತ ಕೆಂಚ ತನ್ನ ಭಾವನೊಡನೆ ರಾಗ ಎಳೆಯುತ್ತಿದ್ದ. ಭಾವನಿಗೂ ಅದೇ ಬೇಕಿತ್ತು. ಇವರ ಮಾ[illegible] ಕ್ಷಣದಲ್ಲಿ ಹಾಡಿಯೊಳಗೂ ತಲುಪಿಬಿಡುತ್ತಿತ್ತು. ಹೆಂಗಸರು ಮುಖ ಮುಖ ನೋಡಿ ನಗಾಡುವರು.

ಜೂನ್-ಜುಲೈ ತಿಂಗಳೆಂದರೆ ಕಪಿಗಳಿಗೆ ಹಣ್ಣಿನ ಸುಗ್ಗಿಯ ಕಾಲ. ತಡಸಿಲ ಹಣ್ಣು, ಚಾಕಟೆ ಹಣ್ಣು ಆ ಕಾಲದಲ್ಲಿ ವಿಶೇಷವಾಗಿರುತ್ತದೆ. ಒಂದೊಂದು ಮರದಲ್ಲಿ ಹತ್ತಿಪ್ಪತ್ತು

ಕಪಿಗಳು ನಕ್ಕು ನಲಿಯುತ್ತ ಜಗಳವಾಡಿಕೊಳ್ಳುತ್ತ, ಒಂದು ಮತ್ತೊಂದರ ಮೈಯಿಂದ ಹೇನು ಹೆಕ್ಕಿ ಹೆಕ್ಕಿ ಬಾಯಿಗೆ ಹಾಕಿಕೊಳ್ಳುತ್ತ ಇರುವುದನ್ನು ನೋಡಬೇಕು. ಹೇನು ಹೆಕ್ಕುತ್ತಿರುವಾಗ ಮರಿಕಪಿಯೇನಾದರೂ ತುಂಟಾಟವಾಡುತ್ತಾ ಅತ್ತಿತ್ತ ಎಳೆದಾಡಿದರೆ ತಾಯಿ ಕಪಿ ಪಟಾರ್ ಅಂತ ಒಂದೇಟು ಕೊಟ್ಟು ಎಳೆದು ಕೂರಿಸಿಕೊಂಡು ಹೇನು ಹೆಕ್ಕುತ್ತಾ ಮರಿಯನ್ನು ಹದ್ದುಬಸ್ತಿನಲ್ಲಿಡುತ್ತದೆ. ಕೆಂಚನ ಪರಿವಾರಕ್ಕೆ ಆ ಕಾಡಿನ ಪ್ರತೀ ಮರವೂ ಪರಿಚಯವೇ. ಅವರೆಷ್ಟು ಸೂಕ್ಷ್ಮವೆಂದರೆ ಬೇರನ್ನು ಅಥವಾ ತೊಗಟೆಯನ್ನು ನೋಡಿ ಇದು ಇಂಥ ಮರದ್ದೇ ಎನ್ನುತ್ತಿದ್ದರು. ಆಯಾಯ ಸಮಯದಲ್ಲಿ ಇಂಥಾ ಕಡೆ ಇಂಥಾ ಹಣ್ಣಿವೆ ಎಂಬ ವಿಚಾರ ಗೊತ್ತಿರುತ್ತಿತ್ತು. ಆ ಮರವನ್ನು ನೆನೆದು ಅಲ್ಲಿ ಖಂಡಿತವಾಗಿಯೂ ಬಿಲ್ಲನ್ನು ಹೊತ್ತು ಹೊರಡುತ್ತಿದ್ದರು. ಹಾಗೆ ಹೊರಟ ದಿನ ದಾರಿಯಲ್ಲಿ ಸಿಕ್ಕುವ ಹಕ್ಕಿಗಳಿಗಾಗಲಿ, ಅಳಿಲುಗಳಿಗಾಗಲೀ ಹೊಡೆಯುತ್ತಿದ್ದುದು ಕಮ್ಮಿ ಇವರ ನಿಗಪೂರ ಕಪಿಗಳತ್ತಲೆ ತಾನೆ?

ಬೇಟೆಗೆ ಹೊರಟ ಆ ದಿನ :

ಅಷ್ಟು ದೂರ ಹೋಗಿ ಕಪಿಗಳ ಕಿರುಚಾಟ ಕೇಳುತ್ತದೆಯೇ ಎಂದು ಒಂದೆಡೆ ಆಲಿಸುತ್ತಾ ನಿಂತರು. 'ಕಿರ್ರೋ ಕಿರ್ರೋ' ಎಂಬ ಕೂಗು ಕೇಳಿಸಿತು. ಇವರ ದಂಡು ಅತ್ತ ಹೋಗಲು ಹಿಂದೇಟು ಹಾಕಿತು. ಯಾಕೆಂದರೆ ಕಪಿಗಳ ಆ ರೀತಿಯ ಕೂಗು ಅಪಾಯದ ಸೂಚನೆ. "ಹುಲಿಗಿಲಿ ಇರಾಕ್‌ನೇ. ಅತ್ತ ಹೋಗೂದು ಬ್ಯಾಡ" ಅಂತ ಕೆಂಚ ಹೇಳಿದ. ಅವನ ಮಾತಿನಲ್ಲಿ ಸತ್ಯವಿದೆ ಎಂದು ಉಳಿದವರು ಚರ್ಚೆಗೆ ನಿಲ್ಲದೆ ಹಿಂತಿರುಗಿ ಬೇರೆ ದಿಕ್ಕಿನತ್ತ ಹೊರಟರು. ಅಲ್ಲೊಂದು ಚಾಕಟೆ ಹಣ್ಣಿನ ಮರವಿತ್ತು. ದೂರದಲ್ಲಿ ನಿಂತು ಸದ್ದನ್ನಾಲಿಸಿದರು. "ಕಿರ್ ಕಿರ್‌ಕ್" ಎಂಬ ಧ್ವನಿ ಬಂತು. ಇವರೆಲ್ಲರೂ ಬೇಟೆಗೆ ಸನ್ನದ್ಧರಾದರು. ತಗ್ಗಿ ಬಗ್ಗಿ ಆ ಮರದ ಹತ್ತಿರ ಹೋದರು. ಕಪಿಗಳ ಒಂದು ಹಿಂಡೇ ಅಲ್ಲಿತ್ತು. ಇನ್ನು ಇವರ ಆನಂದಕ್ಕೆ ಮಿತಿ ಉಂಟೆ? ಹಣ್ಣು ತಿನ್ನುತ್ತ ಸಂಭ್ರಮದಿಂದ ಮೆರೆದಾಡುತ್ತಿದ್ದ ಕಪಿಗಳಿಗೆ ಈ ಬೇಟೆಗಾರರ ಸುಳಿವು ಹೇಗೆ ತಿಳಿಯಿತೋ ಏನೊ? ಬಹುಶಃ ಕಾಳೆ ಕಪಿ (ಕಪಿಗಳ ನಾಯಕ)ಸೂಕ್ಷ್ಮವಾಗಿ ಗ್ರಹಿಸಿರಬೇಕು. ಅದು ಕೂಡಲೆ ತನ್ನ ಪರಿವಾರಕ್ಕೆ ಅಪಾಯದ ಸೂಚನೆಯನ್ನು ನೀಡಿತು. ಕಿರುಚಾಡಿಕೊಳ್ಳುತ್ತ, ಕಾದಾಡಿಕೊಳ್ಳುತ್ತಿದ್ದ ಕಪಿಗಳು ನಿಶಬ್ದವಾದವು. ಓ ! ಕಪಿಗಳು ಈ ಕ್ಷಣದಲ್ಲಿ ತಪ್ಪಿಸಿಕೊಳ್ಳುತ್ತವೆಂಬುದನ್ನು ಬೇಟೆಗಾರರು ಅರಿತುಕೊಂಡು "ಹೊಡಿನು ಭಾವಾ, ಮಾವಾ ಇತ್ತ ಬಾನೆ, ಕೊಡುನು ಕೊಡುನು ಓಹೋ ಹೋತದೆ ಹೊಡಿನ ಹೊಡಿನು" ಎಂಬ ಕೆಂಚನ ಸೂಚನೆ ಬರಲು ಎಲ್ಲರೂ ಆ ಮರದತ್ತ ಬಿಲ್ಲು ಕಲ್ಲಿನ ಮಳೆಗರೆದರು. ಏನು ಎತ್ತ ಎಂದರಿಯದ ಮರಿ ಕಪಿಗಳು ಅತ್ತಿತ್ತ ಓಡಾಡಿ ತಂತಮ್ಮ ತಾಯಂದಿರನ್ನು ಕೂಡಿಕೊಳ್ಳುತ್ತಿದ್ದವು. ಕೆಲವು ಮರಿಗಳು ತಾಯಿಯ ಹೊಟ್ಟೆಯನ್ನು ತಬ್ಬಿಕೊಂಡವು. ಮರದ ಸುತ್ತ ಬೇಟೆಗಾರರು ನಿಂತು ಸತತವಾಗಿ ಹೊಡೆತ ಕೊಡುತ್ತಿದ್ದುದರಿಂದ ಎತ್ತಲೂ ಹಾರಲಾಗದೆ ಅದೇ ಮರದಲ್ಲಿ ಸಿಕ್ಕಿಕೊಂಡವು. ಕೆಂಚ ತನ್ನ ಮುಂದಿನ ಕೆಲಸವನ್ನು ಪ್ರಾರಂಭಿಸಿದ.

ಕಪಿಗಳು ಕುಳಿತುಕೊಂಡಿರುವ ಮರ ಮತ್ತು ಕಪಿಗಳು ಕುಳಿತಿರುವ ಮರಕ್ಕೆ ತಾಗಿಕೊಂಡಂತಿರುವ ಮತ್ತೊಂದು ಮರವನ್ನು ಅಂದರೆ ಈ ಎರಡು ಮರಗಳನ್ನು ಬಿಟ್ಟು ಹತ್ತಿರವಿದ್ದ ಉಳಿದ ಮರಗಳ ರೆಂಬೆಗಳನ್ನು ಕತ್ತರಿಸಿಬಿಟ್ಟ. ಅನಂತರ ಕಪಿಗಳಿಲ್ಲದ ಮರದ ಎರಡು ರೆಂಬೆಗಳನ್ನು ಬಿಟ್ಟ. ಒಂದು ರೆಂಬೆ ಕಪಿಗಳಿರುವ ಮರಕ್ಕೆ ಮುಟ್ಟುತಿತ್ತು. ಮತ್ತೊಂದು ರೆಂಬೆ ಕಾಡಿನ ಕಡೆಗೆ ಬೇರೊಂದು ಮರಕ್ಕೆ ಮುಟ್ಟುವಂತಿತ್ತು. ಈ ವ್ಯವಸ್ಥೆಯಾದ ಬಳಿಕ ಕಪಿಗಳಿರುವ ಮರಕ್ಕೆ ತಾಗಿಕೊಂಡಂತಿದ್ದ ಮರದ ರೆಂಬೆಗೆ ಒಂದು ಬಲೆಯನ್ನು ಕಟ್ಟಿದ. ಅಷ್ಟರಲ್ಲಿ ಕಪಿಗಳು ಅತ್ತಿತ್ತ ಹಾರಲು ಯತ್ನಿಸುತ್ತಿದ್ದವು. ಹುಡುಗರು "ಅದ್ದಾ, ಓ....... ಹಾ.......'ಎಂದು ಬೊಬ್ಬೆ ಹಾಕುತ್ತಿದ್ದರು. ಬಲೆ ಕಟ್ಟಿದ ಕೆಂಚ ಕೆಳಕ್ಕೆ ಇಳಿದ. ಇಂವ ಇಳಿದೊಡನೆ ಮತ್ತೆ ಸತತವಾಗಿ ಬಿಲ್ಲು ಕಲ್ಲಿನ ಹೊಡೆತವನ್ನು ಎಲ್ಲರೂ ಕೊಡಲಾರಂಬಿಸಿದರು. ಇತ್ತ ಮನುಷ್ಯರೆಲ್ಲರೂ ಒಂದೆಡೆ. ಅತ್ತ ಮರದಲ್ಲಿ ಕಪಿಗಳೆಲ್ಲವೂ ಒಂದು ಕಡೆ. ಇವರಿಗೆ ಸಂಭ್ರಮ. ಅವುಗಳಿಗೆ ನರಕ. ಇವರ ಒಂದೊಂದು ಹೊಡೆತವೂ ಮರಣಾಂತಿಕ. ನೋವು ತಾಳಲಾರದೆ ಕೆಲವು 'ಕಿರ್ ಕಿರ್‌ಕ್' ಅನ್ನುತ್ತಿದ್ದವು. ತಾಯಿಯನ್ನು ಅಮರಿಕೊಂಡ ಮರಿಗಳಿಗೆ ತನ್ನ ತಾಯಿಯ ಎದೆಗೂಡಿನ ಸದ್ದು ಗಾಬರಿಯನ್ನುಂಟುಮಾಡುತ್ತಿತ್ತು. ತಾನೂ ಬದುಕಬೇಕು., ಮರಿಗಳನ್ನೂ ಬದುಕಿಸಬೇಕು-ಇದು ತಾಯಿ ಕಪಿಗಳ ತವಕ. ಇಡೀ ತನ್ನ ಬಳಗವನ್ನೇ ಕಾಪಾಡಬೇಕು-ಇದು ಕಾಳೆ ಕಪಿಯ ಆತಂಕ. ಗಡವ ಕಪಿಗಳತ್ತಲೇ ಬೇಟೆಗಾರರ ಹೊಡೆತ. ನಾಲ್ಕಾರು ಹೊಡೆತಗಳು ಕಾಳೆ ಕಪಿಯನ್ನು ಬಡಿದಾಗ ನೋವು ಸಹಿಸಲಾಗದೆ ಆ ತಾಗಿಕೊಂಡಿದ್ದ ರೆಂಬೆಯತ್ತ ಜಿಗಿಯಿತು. ಬೇಟೆಗಾರರು ಬೊಬ್ಬೆ ಹಾಕುತ್ತ ಹೊಡೆಯುತ್ತಲೇ ಇದ್ದರು. ಒಮ್ಮೆ ತಪ್ಪಿಸಿಕೊಂಡರೆ ಸಾಕಪ್ಪಾ ಎನ್ನುತ್ತ ಹಾರಿದ ಕಾಳೆ ಕಪಿ ಕೆಂಚನು ಕಟ್ಟಿದ ಬಲೆಯೊಳಗೇ ಬಿದ್ದುಬಿಟ್ಟಿತು. ಆ ಬಲೆಗೆ ಒಂದು ಚಿಕ್ಕ ಗೆಜ್ಜೆಯನ್ನು ಕಟ್ಟಲಾಗಿತ್ತು. ಯಾಕೆಂದರೆ ಬೇಟೆ ಅದರೊಳಗೆ ಬೀಳು ಸದ್ದು ದೂರಕ್ಕೆ ಕೇಳಬೇಕಲ್ಲ! ಗೆಜ್ಜೆಯ ಸದ್ದು ಕಪಿಗಳಿಗೆ ಅಪಾಯದ ಕರೆಗಂಟೆ. ಕೆಂಚನ ಪರಿವಾರಕ್ಕೆ ಬೇಟೆಯು ಫಲಿಸಿದ ಸೂಚನೆ.

ಕಾಳೆಕಪಿ ಬಲೆಯೊಳಗೆ ಬಿದ್ದೊಡನೆ ಕೆಂಚ ಮರವನ್ನೇರಿದ. ಕಪಿ ಬಲೆಯೊಳಗೆ ಹೋರಾಟ ಮಾಡುತ್ತಲೇ ಇತ್ತು. ಇವನು ಆ ಬಲೆಯನ್ನು ಬಿಚ್ಚಿದ. ಕಪಿಯನ್ನು ಬಲೆಯಲ್ಲೇ ಚೆನ್ನಾಗಿ ಸುತ್ತಿದ. ಕಪಿ ಅದರೊಳಗೆ ಸುರುಟಿಕೊಂಡಿತು. ಇವನು ತನ್ನ ಕೈಯಲ್ಲಿದ್ದ ಮಂಡಗತ್ತಿಯ ಬೆನ್ನಿಂದ ಅದರ ತಲೆಗೆ ಹೊಡೆದ. ಅದು ಒದ್ದಾಡಿತು. ಹೊರಬರಲು ಹೋರಾಡಿತು. ಆದರೆ ಪೆಟ್ಟಿನ ಮೇಲೆ ಪೆಟ್ಟು ಬೀಳುತ್ತಿದ್ದುದರಿಂದ ಸ್ವಲ್ಪ ಹೊತ್ತಿನಲ್ಲೇ ಪ್ರಜ್ಞೆಯನ್ನು ಕಳೆದುಕೊಂಡಿತು. ನಿಶ್ಚಲವಾದ ಶರೀರವನ್ನು ಹೊರಗೆಳೆದು ಅಪ್ಪೆತ್ತರದಿಂದ ನೆಲಕ್ಕೆ ಹಾಕಿದ. ಕೆಳಗಿದ್ದವರು

ಕೂಡಲೆ ಅದು ಬಿದ್ದೆಡೆ ಹೋಗಿ ಎಳೆದುಕೊಂಡರು. ಅದನ್ನು ತಮ ಕಾಲಬುಡದಲ್ಲಿಟ್ಟುಕೊಂಡರು.

ಕೆಂಚ ಪುನಃ ಅದೇ ಬಲೆಯನ್ನು ಅಲ್ಲೇ ಕಟ್ಟಿ ಇಳಿದ. ಇಳಿದೊಡನೆ ಮತ್ತೆ ಉಳಿದ ಕಪಿಗಳ ಮೇಲೆ ಹೊಡೆತ ಶುರುವಾಯಿತು. ಈಗ ಮತ್ತೊಂದರ ಸರದಿ. ಅದೂ ಅದೇ ರೆಂಬೆಯತ್ತಲೇ ಹಾರಿತು. ಆದರೇನು? ಅದೂ ಅದೇ ಬಲೆಯೊಳಗೆ ಬಿದ್ದುಹೋಯಿತು. ಕೆಂಚ ಕೂಡಲೆ ಮರವನ್ನೇರಿ ಬಲೆಯನ್ನು ಬಿಚ್ಚಿ ಕಪಿಯನ್ನು ಸುತ್ತ ನಾಲ್ಕೇಟು ಹೊಡೆದು ಕೆಳಕ್ಕೆ ಎಸೆದ. ಬಲೆಯನ್ನು ಅಲ್ಲೇ ಕಟ್ಟಿ ಇಳಿದ. ನೋಡುತ್ತಾನೆ ಮೊದಲು ಹೊಡೆತ ತಿಂದ ಪ್ರಜ್ಞೆ ಕಳೆದುಕೊಂಡಿತ್ತಲ್ಲ ಆ ಕಾಳೆ ಕಪಿ, ಅದಕ್ಕೆ ಪ್ರಜ್ಞೆ ಬಂದಿತ್ತು! ಮೆಲ್ಲನೆ ತನ್ನ ಕಾಲು ಕೈಯನ್ನು ಅಲುಗಾಡಿಸಿತು. "ನೋಡುನು ಬಾವಾ ಕಾಳೆ ಕಪಿನ" ಎನ್ನುತ್ತ ಕೆಂಚ ಓಡಿಬಂದು ಹಿಡಿದುಕೊಂಡ. ಬದುಕುವ, ತನ್ನವರನ್ನು ನೋಡುವ ಆಸೆ ಅದಕ್ಕೆ ದೂರವೇ ಆಯಿತು. ಇವನು ಹಿಡಿದುಕೊಂಡು ಅದೇ ಕತ್ತಿಯ ಬೆನ್ನಿಂದ 'ಟಕಾ ಟಕಾ' ಎಂದು ಹೊಡೆದ. ಆದರೂ ಸಂಶಯ ಇವ ತಲೆಯಲ್ಲಿ! ಮತ್ತೇನಾದರೂ ಇದು ಓಡೀತೆಂದು ಅರೆ ಪ್ರಜ್ಞೆಯಲ್ಲಿರುವ ಕಪಿಯ ಒಂದೊಂದೆ ಅಂಗವನ್ನು 'ಲಟಕ್ ಲಟಕ್ಕನೆ' ಮುರಿಯತೊಡಗಿದ. ಮೊದಲು ಒಂದು ಕೈಯನ್ನು ಬಗ್ಗಿಸಿ ಮುರಿವಾಗ ಕಪಿ ಕಿರುಚಲಿಲ್ಲ. ಅಯ್ಯೋ ಎಂದು ರೋದಿಸಲಿಲ್ಲ. ಕಣ್ಣು ಮುಚ್ಚಿಕೊಂಡು ಹಲ್ಲು ಕಡಿಯುತ್ತಾ ತುಟಿಯನ್ನು ತೆರೆದುಕೊಂಡಿತ್ತು. ಮತ್ತೆ ಎರಡನೇ ಕೈಯನ್ನು 'ಲಟಕ್' ಎಂದು ಮುರಿದ. ಆಗಲೂ ಕಪಿ ಹಲ್ಲು ಕಡಿದು ತುಟಿ ತೆರೆದು ಕಣ್ಣು ಮುಚ್ಚಿತು. ಅನಂತರ ಅದರ ಒಂದು ಕಾಲನ್ನು, ಮತ್ತೊಂದು ಕಾಲನ್ನು ಮುರಿದ. ಕಪಿ ಮೊದಲಿನಂತೇ ಮಾಡಿತು. ಆದರೂ ಇದು ಓಡಿಯಾತೆಂದು ಮತ್ತೆರಡೇಟು ಹೊಡೆದ. ಸ್ವಲ್ಪ ಮಿಸುಗಾಡಿತು. ಕಣ್ಣು ತೆರೆದು ನಿಶ್ಚಲವಾಯ್ತು.

# ನಿಮಗಿದು ಗೊತ್ತೆ?

**ಔಷಧಿ ತರಕಾರಿ ಹಾಗಲಕಾಯಿ**

ಹಾಗಲಕಾಯಿ ಒಂದು ತರಕಾರಿಯಷ್ಟೇ ಅಲ್ಲ. ಅತ್ಯುಪಯುಕ್ತ ಔಷದಿಯ ಆಗಿದೆ. ಅದರ ರುಚಿ ಕಹಿಯಾದಷ್ಟು ಅದರ ಉಪಯುಕ್ತತೆಯೂ ಅದಿಕ. ಅದು ವಿಶೇಷವಾಗಿ ಗ್ರೀಷ್ಮ ಹಾಗೂ ವರ್ಷಋತುವಿನ ತರಕಾರಿಯಾಗಿದೆ. ಅದರ ಔಷಧೀಯ ಗುಣಗಳು ಹೀಗಿವೆ.

ಹಾಗಲಕಾಯಿಯಲ್ಲಿ ಸಸಾರಜನಕ, ಪೊಟಾಷಿಯಮ್, ಸೆಲ್ಯೂಲೋಸ್, ಕಬ್ಬಿಣ ಇತ್ಯಾದಿ ಸತ್ವಗಳು ಇವೆ.

ಅದರಲ್ಲಿರುವ 'ಎ'ಮತ್ತು 'ಸಿ'ವಿಟಾಮಿನ್‌ಗಳೂ ಕಣ್ಣುಗಳ ಹೊಳಪನ್ನು ಕಾಪಾಡುತ್ತವೆ. ದೃಷ್ಟಿ ಮಾಂಧ್ಯವನ್ನು ದೂರಗೊಳಿಸುತ್ತವೆ. ಹಲ್ಲುಗಳು ಮತ್ತು ಒಸಡನ್ನು ಗಟ್ಟಿಯಾಗಿ ಉಳಿಸುತ್ತವೆ.

ಹಾಗಲದ ಬಳ್ಳಿಯ ಎಲೆಗಳ ರಸದಲ್ಲಿ ಕುಷ್ಠ, ಮೂಲವ್ಯಾದಿ ಹಾಗೂ ಜಠರದ ಹುಳಗಳನ್ನು ನಿವಾರಿಸುವ ಸಾಮರ್ಥ್ಯವಿದೆ. ಬರಿ ಹೊಟ್ಟೆಯಲ್ಲಿ ಹಸಿ ಹಾಗಲಕಾಯಿಯ ಸೇವನೆಯಿಂದ ಶರೀರವನ್ನು ತಂಪು ಗೊಳಿಸಬಹುದು.

ಹಾಗಲಕಾಯಿಯ ಬಳಕೆಯಿಂದ ಜೀರ್ಣಕ್ರಿಯೆ ಉತ್ತಮಗೊಂಡು ಹಸಿವು ಹೆಚ್ಚುತ್ತವೆ. ಮಲಬದ್ಧತೆ ದೂರಾವಾಗುತ್ತದೆ.

ಆಯುರ್ವೇದದಲ್ಲಿ ಹೇಳಿರುವಂತೆ ಹಾಗಲಕಾಯಿ ಗೊರಲು ಸಂಧಿವಾತ ಹೊಟ್ಟೆನೋವು ಮತ್ತು ಕಾಲರಾ ಬೇನೆಯಲ್ಲಿ ಒಂದು ಉಪಯುಕ್ತ ತರಕಾರಿಯಾಗಿದೆ.


**— ಕಡ್ಯದ ಧನು. ಅವಂದೂರು.**

# ಹಿತ್ತಲ ಮದ್ದು

**ತಾರೆ ಮರ :** ಆಯುರ್ವೇದ ವೈದ್ಯ ಪದ್ಧತಿಯಲ್ಲಿ ಹೆಸರುವಾಸಿಯಾಗಿರುವ ತ್ರಿಫಲಗಳಲ್ಲಿ ತಾರೆಯ ಹಣ್ಣು ಕೂಡಾ ಒಂದು ಅತ್ಯಂತ ಖಾರ, ಗಾಟು ಹಾಗೂ ಹುಳಿಗುಣಗಳಿಂದ ಕೂಡಿದ ತಾರೆ ಹಣ್ಣುಗಳನ್ನು ಉದರ ಶುದ್ಧಿ, ಊತ ನಿವಾರಣೆ ಮತ್ತು ಜಂತು ನಾಶಕವಾಗಿ ಬಳಸುತ್ತಾರೆ. ಗಂಟಲು ಕೆರೆತ, ಬ್ರಾಂಕೈಟಿಸ್, ಉರಿಮೂತ್ರ, ಪಿತ್ತ ವಿಕಾರ ಅಸ್ತಮಾ, ಹಾಗೂ ಕಣ್ಣು ಮೂಗೂ, ಹೃದಯ ಮತ್ತು ಗುಲ್ಮಕ್ಕೆ ಸಂಬಂಧಿಸಿದ ರೋಗಗಳನ್ನು ವಾಸಿ ಮಾಡಲು ಈ ಹಣ್ಣುಗಳು ಪ್ರಯೋಜನಕಾರಿಯಾಗಿವೆ. ತಾರೆಯ ಹಣ್ಣಿನ ತಿರುಳಿನ 1ಭಾಗಕ್ಕೆ 16ಭಾಗ ನೀರು ಸೇರಿಸಿ 1/4 ಭಾಗಕ್ಕೆ ಇಳಿಯುವಂತೆ ಕುದಿಸಿ ಕಷಾಯ ರಸ ತಯಾರಿಸಬೇಕು ಬಾಯಾರಿಕೆ, ಸೀತ, ಮೈನಡುಕ ಮಲಬದ್ಧತೆ ಮುಂತಾದ ವಾತ ಸಂಬಂಧಿ ರೋಗಗಳಿಗೆ 1-2 ಚಮಚದಷ್ಟು ಕಷಾಯ ರಸವನ್ನು 2ಹಸಿ ಒಳ್ಳೆಣ್ಣೆ ಜೊತೆಗೆ ದಿನಕ್ಕೆ 2ರಿಂದ 3ಬಾರಿ ಸೇವಿಸಬೇಕು. ಆಲಸ್ಯ, ಮೂರ್ಛೆ, ನಿದ್ರೆ ಹೆಚ್ಚಾಗುವುದ. ಸಂಧಿ ಶೈಥಿಲ್ಯ ಇವುಗಳಿಗೆ ಜೇನು ತುಪ್ಪದೊಡನೆ ಸೇವಿಸುವುದರಿಂದ ಉತ್ತಮ ಪರಿಣಾಮ ಕಂಡುಬರುತ್ತದೆ. ಮಕ್ಕಳಿಗೆ ಇದರ 1/4 ಭಾಗವನ್ನು ಮಾತ್ರ ಕೊಡಬೇಕು. ತಾರೆಮರದ ತೊಗಟೆಯನ್ನು ರಕ್ತಹೀನತೆ ಮತ್ತು ತೊನ್ನು ರೋಗಗಳ ನಿವಾರಣೆಯಲ್ಲಿ ಉಪಯೋಗಿಸುತ್ತಾರೆ. ಜೇನು ತುಪ್ಪದೊಡನೆ ಈ ಮರದ ಹಣ್ಣುಗಳ ತಿರುಳನ್ನು ಅರೆದು ಹಚ್ಚಿದರೆ ಕಣ್ಣುನೋವು ವಾಸಿಯಾಗುತ್ತದೆ.

— ಹೊಸೂರು ತುಳಸಿಮಾಲ, ಚೇರಂಗಾಲ.

ಕಪ್ಪು ಕಸ್ತೂರಿ ಇದ್ದ ಹಾಂಗೆ.




ಈ ನಮ್ಮ ಭಾರತದೇಶ ದೈವ ಸಾಕ್ಷಾತ್ಕಾರ ಮಾಡಿಕೊಂಡ ಮುನಿಪುಂಗವರ ಕ್ಷೇತ್ರವಾಗಿದೆ. ಸನಾತನ ಋಷಿಮುನಿಗಳ ತಪೋಭೂಮಿ ಈ ದೇಶ. ಇಂತಹ ಪುಣ್ಯ ಭೂಮಿಯಲ್ಲಿ ಇತಿಹಾಸ ಪ್ರಸಿದ್ಧವೂ ಧರ್ಮಕ್ಷೇತ್ರವೂ ಆದ "ಆದಿ ಚುಂಚನಗಿರಿ 'ಅತ್ಯಂತ ಪವಿತ್ರವಾಗಿದೆ.

ಈ ಪ್ರದೇಶ ಕಾವೇರಿ ಮತ್ತು ತುಂಗಭದ್ರ ನದಿಗಳ ಮಧ್ಯಭಾಗದಲ್ಲಿದೆ. ಇದು ರಮ್ಯವಾದ ನೋಟದಿಂದಲೂ ಉದ್ಯಾನವನಗಳಿಂದಲೂ ಫಲ ಪುಷ್ಪಭರಿತ ವನರಾಶಿಗಳಿಂದಲೂ ಸರೋವರಗಳಿಂದಲೂ ಆವೃತವಾಗಿದ್ದು ನವರತ್ನ ಖಚಿತವಾದ ಸೋಪಾನಗಳಿಂದ ಕೂಡಿದ ಗಳಿಗೆಗಲ್ಲು ಮತ್ತ ಚೇಳೂರು ಕಂಬಗಳ ಪರ್ವತವೇ ಆದಿಚುಂಚನಗಿರಿ ಎಂದು ಪಸಿದ್ಧವಾಗಿದೆ. ಇಲ್ಲಿ ನೆಲಗೊಂಡಿರುವ ಶ್ರೀಮಠದ ಶಿಷ್ಯವರ್ಗದವರಲ್ಲಿ ಅನಾದಿ ಯಿಂದಲೂ ಒಕ್ಕಲಿಗರೇ ಇರುವುದರಿಂದ ಇದು ಒಕ್ಕಲಿಗರ ಪೀಠ(ಮಠ) ಮತ್ತು ಗುರುಪೀಠ ಎಂದು ಖ್ಯಾತಿ ಪಡೆದಿದೆ. (ಚುಂಚನಗಿರಿಯ ಇತಿಹಾಸ 1893) ಇಲ್ಲಿ ಭಗೀರಥ ಪುತ್ರಿ ಗಂಗಾದೇವಿ ನೆಲೆಸಿದ್ದಾಳೆ. ಇವಳ ಪರಿಮಿತಿ ಪಾತಾಳ ಪರ್ಯಂತರ. ಈ ನಿರ್ಮಲ ಸರೋವರ ತೀರ್ಥದ ಆಳ ಇಷ್ಟೇ ಎಂಬುದು ಗಣನೆಗೆ ಬಾರದ ವಿಷಯ. ಯಾವ ಮನುಷ್ಯನು ಈ ಒಂದು ತೀರ್ಥದಲ್ಲಿ ಸ್ನಾನಮಾಡಿ ಈಶ್ವರನನ್ನು ಪೂಜಿಸುತ್ತಾನೋ ಅವನು ಶುದ್ಧಾತ್ಮನಾಗಿ ಅಂತ್ಯದಲ್ಲಿ ಸ್ವರ್ಗಸೇರುವನು.

ಈಶ್ವರನ ತೇಜಸ್ಸಿನ ಅಂಶ ಮತ್ತು ಅಗ್ನಿಮಯವಾದ ಗುರುಪರಂಪರೆಯ ಜ್ವಾಲಾಪೀಠ ಇರುವುದು ಇಲ್ಲೇ. ಈ ಪೀಠದಲ್ಲಿ ಗುರುದರ್ಶನ ಮಾಡಿದ ಮಾತ್ರದಿಂದಲೇ ಜನ್ಮ ಸಾಫಲ್ಯ ಹೊಂದುತ್ತಾರೆ. ಯೋಗ ನಿಷ್ಠನಲ್ಲದ ಯಾರು ಈ ಪೀಠವನ್ನು ಸ್ಪರ್ಶಮಾಡುತ್ತಾರೋ ಅವರು ಆಕ್ಷಣವೇ ಭಸ್ಮೀಭೂತರಾಗುತ್ತಾರೆ.

ಹೆಬ್ಬಾಗಿಲಿಗೆ ಎದುರಾಗಿ ಈಶ್ವರ ಸ್ವರೂಪನಾದ ಭೈರವನನ್ನು ಸತ್ಪುರುಷರ ರಕ್ಷಣೆಗಾಗಿಯೂ, ದುರಾಚಾರ ಮಾಡ ತಕ್ಕವರ ಶಿಕ್ಷಾನಿಮಿತ್ತವಾಗಿ ಮಂತ್ರೋಚ್ಛರಣೆ ಪೂರ್ವಕವಾಗಿ ಪ್ರತಿಷ್ಠಾಪನೆ ಮಾಡಲಾಗಿದೆ.

ಸ್ತ್ರೀ ಸ್ತಂಭಶಕ್ತಿ (ಕಂಬದಮ್ಮ) ಈಶ್ವರನ ಆದಿ ಮಾಯ ಶಕ್ತಿ ಸ್ವರೂಪಿಣಿಯಾಗಿ ಕ್ಷೇತ್ರಾಭಿಮಾನಿಯಾಗಿ ಸ್ತಂಭನಾಮಕಳಾದ ಶಕ್ತಿ ದೇವತೆ ಈ ಪರ್ವತದಲ್ಲಿ ನೆಲೆಸಿದ್ದಾಳೆ.

ಆದಿ ಚುಂಚನಗಿರಿ ಗುರುಪೀಠಕ್ಕೆ ಸಿದ್ಧ ಸಿಂಹಾಸನಕ್ಕೆ ಭೈರವ ಗದ್ದುಗೆಗೆ ಶಿವಯೋಗಿ ಭಕ್ತನಾಥಸ್ವಾಮಿಯವರು 98ನೇ ಗುರುವರ್ಯರಾಗಿ ಅಧಿಪತಿಗಳಾದ ಆ ಶುಭದಿನದ ಕೀರ್ತಿ ಮಹಾ ಪ್ರಭುಗಳಾದ ಶ್ರೀಮಾನ್ ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರಿಗೆ ಸೇರಿದುದಾಗಿದೆ. ಹೀಗೆ ರಾಜಾಶ್ರಯದಿಂದ ಚೇತನಗೊಂಡ ಆದಿ ಚುಂಚನಗಿರಿ ಪರಂಪರೆ, ಗುರುಪೀಠ ಪವಿತ್ರವಾದುದು. ಅಮೋಘ ಇತಿಹಾಸವನ್ನು ಅಪಾರ ಶಿಷ್ಯಕೋಟಿಯನ್ನು ಪಡೆದಿರುವ ಈ ಮಹಾಕ್ಷೇತ್ರ ಕರ್ನಾಟಕವಲ್ಲದೆ ಆಂಧ್ರ, ತಮಿಳುನಾಡು ಮತ್ತು ಮಹಾರಾಷ್ಟ್ರಗಳಲ್ಲಿ ಪ್ರಖ್ಯಾತವಾಗಿದೆ. ಒಕ್ಕಲಿಗರ ಸಂಘವು ಆಡಳಿತ ಕ್ಷೇತ್ರದಲ್ಲಿ ಅಧಿಪತಿಯಾಗಿರುವಂತೆ ಗುರು ಪರಂಪರೆ ಗುರುಕುಲವಾಗಿ ಧರ್ಮಸಂಸ್ಥೆಯಾಗಿ ಮಹಾವಿದ್ಯಾಸಂಸ್ಥೆಯಾಗಿ ಶ್ರಮಿಸುತ್ತಿರುವುದು ಪ್ರಶಂಸನೀಯವಾಗಿದೆ. ಪ್ರಾಚೀನ ಕಾಲದಿಂದಲೂ ಈ ಕ್ಷೇತ್ರದ ಗುರುಪೀಠವು ಒಕ್ಕಲಿಗ ಜನಾಂಗದ ಮತ್ತು ಇತರ ಸರ್ವಧರ್ಮ ಸಮನ್ವಯದ ಪ್ರಖ್ಯಾತ ಗುರುಪೀಠವೆನಿಸಿದೆ. ಇಲ್ಲಿನ ಕಾಲಭೈರವೇಶ್ವರನು ತಮ್ಮ ಆರಾಧ್ಯದೈವವೆಂದು ಹಾಸನ, ಮಂಡ್ಯ ತುಮಕೂರು ಶಿವಮೊಗ್ಗ ಚಿತ್ರದುರ್ಗ ಜಿಲ್ಲೆಯ ಒಕ್ಕಲಿಗರೂ ಗಂಗಡಿಕಾರರು ಕುಂಚಿಟಿಗರೂ ಕುರುಬಗೌಡರೂ ಪೂಜಿಸುತ್ತಾ ಬಂದಿದ್ದಾರೆ.

ಪ್ರಸ್ತುತ ಈ ಪರಂಪರೆಯ ಪೂಜ್ಯ ಸ್ಥಾನದಲ್ಲಿ 1974ರಲ್ಲಿ ಪೀಠಾರೋಹಣ ಮಾಡಿದ ಬಾಲಗಂಗಾಧರ ಸ್ವಾಮಿಯವರು ದೀನ ದಲಿತರ ಹಿಂದುಳಿದ ವರ್ಗಗಳ ಪುರೋಭಿವೃದ್ಧಿಗಾಗಿ ಶ್ರಮಿಸುತ್ತಾ ಬಂದಿದ್ದಾರೆ. ಆದಿ ಚುಂಚನಗಿರಿ ಸಂಸ್ಥಾನವು ಧಾರ್ಮಿಕ ಸಾಂಸ್ಕೃತಿಕ ಶೈಕ್ಷಣಿಕ ಹಾಗೂ ಆರ್ಥಿಕ ಕ್ಷೇತ್ರಗಳಲ್ಲಿ ಹೊಸಹೊಸ ಮೈಲುಗಲ್ಲು ಗಳನ್ನು ಸ್ಥಾಪಿಸುತ್ತಾ ಕರ್ನಾಟಕದಲ್ಲಿ ಅಗ್ರಸ್ಥಾನ ಪಡೆದಿದೆ.

— ಚೈತನ್ಯ ಜಾನಕಿ.

ಐಶ್ವರ್ಯ ಬಾಕನ ಅರ್ಧ ರಾತ್ರಿಲಿ ಕೊಡೆ ಹಿಡಿದಂಗೆ.


# ಸಂಗಾತಿ ಪದ ಬಂಧ — ೩

**ಎಡದಿಂದ ಬಲಕ್ಕೆ**

1. ಕರ್ನಾಟಕದ ಕಾಶ್ಮೀರ ಸಂಗಾತಿಯೊಂದಿಗೆ ಸೇರಿದೆ (3)
3. ಮಡಚು ಎಂಬುದು ಇಲ್ಲಿ ತಿರುಗಿ ಚರ್ಮವಾಗಬೇಕೇ ? (3)
5. ಈತ ಬಾರ್ ಹೊಕ್ಕಿದ್ದು ಕಾಲೇಜಿನಿಂದ ಹೊರಗಟ್ಟಿದ ಮೇಲೆ (3)
9. ಗಣಿತದ ಈ ಕಾರ ಕೊಡುವುದಕ್ಕಿಂತ ಸುಲಭ (4)
10. ಅರರೇ ನಕ್ಷತ್ರಕ್ಕೂ ಕರ ಎಂದು ಹೆದರದಿರಿ, ಇದು ಸೂರ್ಯ ಅಷ್ಟೆ. (4)
11. ಇದನ್ನು ಕಂಡರೆ ಹೆಣವೂ ಬಾಯಿ ಬಿಡುತ್ತದೆ ಅಂತೆ ! (2)
12. ಧನಿಯ ಸ್ವರ ಇಲ್ಲಿ ತೀವ್ರತೆ ಕಳೆದು ಕೊಂಡಿದೆ. (2)
14. ಈತ ವಾನರನಲ್ಲ, ಅದಕ್ಕಿಂತ ಶ್ರೇಷ್ಠ ಅಷ್ಟೆ. (3)
18. ಗಾದೆಯಲ್ಲಿ ಕೋಟೆ ಕೊಳ್ಳೆ ಹೋದಮೇಲೆ ನೆನಪಾಗಿದ್ದು. (2)
19. ಈ ಅಂಗನೆ ಮನಕ್ಕೇ ಕನ್ನ ಇಕ್ಕಿದಳಲ್ಲಾ !(4)
20. ಇದೇ ವೃತ್ತಿ ನನ್ನದು ಎಂದು ದಾಸರು ಎಷ್ಟು 'ಮಧು' ರವಾಗಿ ಹಾಡಿದ್ದಾರೆ !(4)
21. ಜೋರಾದ ಗುಡುಗಿಗೂ ಕೆಲವರು ಹೀಗೂ ಆಗುತ್ತಾರೆ (3)
23. ನನ್ನ ಶಿರದಲ್ಲಿ ಈ ಋತುವಿನದೇ ಆಲೋಚನೆ. (3)
24. ಈ ರಾಶಿಯೊಂದಿಗೆ ನನ್ನದು ತುಂಬಾ ಮಮಕಾರ ಎಂದೇ ಹೇಳಬೇಕು. (3)

**ಮೇಲಿಂದ ಕೆಳಗೆ:**

1. ಲೇ ಇಲ್ಲಿ ಕೊಡೆ ಎಂದು ಕೊಟ್ಟಿದ್ದನ್ನು ಎತ್ತಿಕೊಂಡು ಹೊರಡುತ್ತಾರೆ ನೀರಿಗೆ. (2)
2. ದೇವರ ದಾಸ ಇಲ್ಲಿ ಮಾತ್ರ ಎಂದು ಕೆಲವರ ನಂಬಿಕೆ ಬಿಡಿ. (2)
4. ಈ ಕಾರದಲ್ಲೂ ಮಮತೆ ಉಕ್ಕಿ ಹರಿದಿದೆ. (4)
6. ಬಸವನ ಜೊತೆ ಸೇರಿ ಇದು ಒಂದು ಊರಾಗಿದೆ. (4)
7. ಈತನ ಗುಣ ತಂಬಾ ಒಳ್ಳೆಯದು. (3)
8. ಈತ ನರನೇ ಆದರೆ ಆಕಡೆ ಈಕಡೆ ಚುಚ್ಚುತ್ತಾನೆ ಅಷ್ಟೆ (3)
11. ಆತನ ಮಾನ ತೆಗೆಯುವ ಮನನವೇ ಈತನಿಗೆ. (3)
13. ಈ ನಾದ ತುಂಬಾ ಮಧುರ. (3)
15. ಈ ಮಣಿ ತುಂಬಾ ಸುಂದರಿ ಕೂಡ !(3)
16. ಚಮ್ಮಾರನಿಗೆ ಈ ಕೆಲಸ ನೀರು ಕುಡಿದಷ್ಟೇ ಸುಲಭ (4)
17. ಆತನ ಉದ್ದೇಶ ತುಂಬಾ ಒಳ್ಳೆಯದೆ ಬಿಡಿ. (4)
18. ಈ ಉತ್ಸವದಲ್ಲಿ ಕರಕ್ಕೇನು ಕೆಲಸವಿಲ್ಲ ಬಿಡಿ. (3)
22. ಮಗು ಇಲ್ಲಿ ಹಿಂದು ಮುಂದಾಗಿದೆ ಅಷ್ಟೆ. (2)
23. ತಲೆಗೆ ಈ ರೀತಿಯೂ ಹೇಳುತ್ತಾರೆ. (2)




ಉತ್ತರ : ಮುದಿನ ವಾರ

— ಚೈತಡ್ಕ ಶ್ರೀಧರ, ಮಡಿಕೇರಿ.

ಅಂಬು ಅಟ್ಟಲಿ ಬಿಲ್ಲ್ ಚೆಟ್ಟಲಿ.

## ಅರೆಭಾಷೆಯ ಸರಳ ವಾಕ್ಯಗಳು

1. ಹೋಗಿ ಬಂದವೆ = ಹೋಗಿ ಬರುತ್ತೇವೆ.
2. ಮತ್ತೆ ಯಾಗ ಬಂದರೆ? = ಮತ್ತೆ ಯಾವಾಗ ಬರುತ್ತೀರಿ?
3. ಮನೆಲಿ ಎಲ್ಲವು ಉಸಾರೊಳಾ ? = ಮನೆಯಲ್ಲಿ ಎಲ್ಲರೂ ಹುಷಾರಿದ್ದಾರೊ?
4. ಏನಾತ್‌ಗಡ ? = ಏನಾಯ್ತಂತೆ ?
5. ಗಡ = ಅಂತೆ
6. ಹೋತುಗಡ = ಹೋಯ್ತಂತೆ (ಹೋದನಂತೆ, ಹೋದಳಂತೆ)
7. ಬಾತ್‌ಗಡ = ಬಂದಿತಂತೆ (ಬಂದನಂತೆ, ಬಂದಳಂತೆ)
8. ಬಾದುಲೆ = ಬರುವುದಿಲ್ಲ
9. ಗೂಡೆ ಹೆಂಗುಟ್ಟು ? = ಹುಡುಗಿ ಹೇಗಿದ್ದಾಳೆ ?
10. ಗೂಡೆನ ಕೈಲಿ ದುಡ್ಡು ಎಷ್ಟ್ ಉಟ್ಟು ? = ಹುಡುಗಿ ಕೈಯಲ್ಲಿ ಹಣ ಎಷ್ಟಿದೆ ?
11. ಹೈದನ ಕಡೆ ಅನ್ಕೂಲ ಉಟ್ಟಾ ? = ಹುಡುಗನ ಕಡೆ ಅನುಕೂಲ ಇದೆಯಾ ?
12. ಹೈದನ ಕಡೆಂದ ಎಷ್ಟ್ ಜನ ಹೋಕು ? = ಹುಡುಗನ ಕಡೆಂದ ಎಷ್ಟು ಜನರು ಹೋಗಬೇಕು ?
13. ಹಂಗ್ಯಾಕೆ ಹೇಳ್ರೆ ? = ಹಾಗೇಕೆ ಹೇಳುತ್ತೀರಿ ?
14. ನೀನ್ ಹೇಳ್ದರಲ್ಲಿ ಸತ್ಯ ಉಟ್ಟು = ನೀನು ಹೇಳುವುದರಲ್ಲಿ ಸತ್ಯ ಇದೆ.
15. ಅಲ್ಲರೆ ಹೆಂಗೆ ? = ಅಲ್ಲದಿದ್ದರೆ ಹೇಗೆ ?
16. ಹೋಕನ ನಾವಿಬ್ಬರು ಒಟ್ಟಿಗೆ ಪೋಯಿ = ಹೋಗುವಾಗ ನಾವಿಬ್ಬರು ಜೊತೆಯಲ್ಲಿ ಹೋಗೋಣ

    ಹೋನೆ = ಹೋಗುತ್ತೇನೆ, ಬನ್ನೆ = ಬರುತ್ತೇನೆ
17. ಗಿಡಲಿರುವ ಹೂ ಎಷ್ಟ್ ಪೊರ್ಲು ಉಟ್ಟಲಾ? = ಗಿಡದಲ್ಲಿ ರುವ ಹೂ ಎಷ್ಟ್ ಚಂದ ಇದೆಯಲ್ಲಾ ?
18. ಮರ ಒಣ್ಗಿ ಸಾಯಕಾಗುಟ್ಟು. ಕಡ್ತರೆ ಸೌದೆಗೆ ಆಗ್ತಿತ್ = ಮರ ಒಣಗಿ ಸಾಯಲಿಕ್ಕಾಗಿದೆ. ಕಡಿದರೆ ಸೌದೆಗೆ ಆಗುತಿತ್ತು.
19. ಸೌದೆ ಹೊರಿಕೆ ಸುಮಾರ್ ಜನ ಬೇಕ್ = ಸೌದೆ ಹೊರಲು ಸುಮಾರು ಜನರು ಬೇಕು.
20. ಹೊತಾರೆ ಬ್ಯಾಗ ಎದ್ದ್ ತ್ವಾಟಕಡೆ ಹೋಕು = ಬೆಳಿಗ್ಗೆ ಬೇಗ ಎದ್ದು ತೋಟದ ಕಡೆ ಹೋಗಬೇಕು.

— ಬೈತಡ್ಕ ಜಾನಕಿ,
ಸಂಚಾಲಕಿ, ಗೌಡ ಮಹಿಳಾ ಒಕ್ಕೂಟ, ಮಡಿಕೇರಿ.

## ಕೊಡಗಿನ ಬೆಡಗು

ಕಾವೇರಿ ಹುಟ್ಟಿದ ಹೆಮ್ಮೆಯನಾಡು.
ಕಣ್ಮನ ತಣಿಸುವ ಹಿರಿನ ಕಾಡು
ಮಾನವನಾಗಿ ನೀನೊಮ್ಮೆ ಬಂದುನೋಡು.

ಕಂಪನು ಸೂಸುವ ಬಗೆಬಗೆ ಹೂಗಳು
ಮೊಹಕಗೋಳಿಸುವ ಕಾಫಿಯ ಗಿಡಗಳು
ತೂಗಿ ನಿಂತಿವೆ ಅಲ್ಲಲ್ಲಿ ಭತ್ತದ ತೆನೆಗಳು

ಈ ಮಣ್ಣಿಗೆ ಬೀಳುವುದು ಸಾಕಷ್ಟು ಮಳೆ
ಅದಕ್ಕಾಗಿಯೇ ಘಮ ಘಮಿಸುವ ಏಲಕ್ಕಿಯಾ ಬೆಳೆ
ಇದೇ ಈ ಮಣ್ಣಿಗೊಂದು ಚಂದದ ಕಳೆ.

ಹುತ್ತರಿ ಕೈಲುಪೋದು ಆಚರಣೆಯ ನಾಡು
ಕುಪ್ಪಸ ದಟ್ಟಿ ತೊಟ್ಟು ನಲಿದಾಡುವ ವೀರರ ಬೀಡು
ಸಂಪ್ರದಾಯಸ್ಥರ ಹೆಮ್ಮೆಯ ಈ ನಾಡು

ಹೆಂಗಳೆಯರ ಓಡಾಟ ಗೆಂಟಿಗೆ ಕಟ್ಟಿ
ಕಾವೇರಿ ಮಾತೆಯರಿವರು ಈ ಮಣ್ಣಾ ಮೆಟ್ಟಿ
ಇನ್ನೆಲ್ಲಿರಲಾರರು ಇವರಿಗೆ ಸರಿಸಾಟಿ.

ಇಲ್ಲಿಯ ಜನರಾಡುವುದೆ ಅರೆಭಾಷೆ
ಎಲ್ಲವರ ಮನೆಯಲ್ಲೂ ತುಂಬಿರುವುದು ಜೇನಿನ ಸೀಸೆ
ಇದನ್ನೆ ಸವಿಯುದೆಂದರೆ ಎಲ್ಲರಿಗೂ ಬಲು ಆಸೆ.

ಪ್ರಕೃತಿ ಮಾತೆಯ ಈ ಸೊಬಗು
ಎಲ್ಲರನ್ನು ಕೈ ಬೀಸಿ ಕರೆಯುತಿದೆ ಕೊಡಗು
ಬಂದು ನೋಡಿ ಆನಂದಿಸಿ ನಮ್ಮ ಕೊಡಗಿನ ಬೆಡಗು|

ಅಣ್ಣೆಚೀರಾ ಭಾರತಿ ಸೋಮಣ್ಣ. ಮಕ್ಕಂದೂರು ಗ್ರಾಮ.

---

### ಯಾರ್ ಗ್ರೇಟ್

ಟೀಚರ್ (ವಿದ್ಯಾರ್ಥಿಗಳನ್ನುದ್ದೇಶಿಸಿ):"ಅವ್ವಂದರ್ ಗ್ರೇಟಾ? ಟೀಚರ್ ಗ್ರೇಟಾ?"

ತರ್ಲೇ ತಿಮ್ಮ : "ಟೀಚರ್"

ಟೀಚರ್ :"ಅದ್ಹೆಂಗೆ ಹೇಳಿಯ"

ತ. ತಿಂ: "ಅವ್ವ ಆದರೆ ಅವಳ ಮಕ್ಕಳ್ನ ಮಾತ್ರ ನಿದ್ದೆ ಮಾಡ್ಸಿದೆ, ಟೀಚರ್ ಮಾತ್ರ ಒಮ್ಮೆ ಪಾಠ ಮಾಡ್ರೆ ಕ್ಲಾಸಿಗೆ ಕ್ಲಾಸೇ ನಿದ್ದೆಲಿ ಮುಳುಗಿದೆ.".

ತೊತ್ತಿಯನ ಕಿರಣ್, ಚೇರಂಬಾಣೆ.

---

ಬಸವ ಎದ್ದ ಬಾಲ ಬೀಸಿದ.

# ವಾಂಟೆಡ್ ಮಿಸ್ಟರ್ ರಾಜು : [ನಮ್ಮ ರಾಜು ಮಂಜನ ಕಥೆ]

ಲೇಖನ : ಶಂಕರನ ಬಸಪ್ಪ

**ಧಾರಾವಾಹಿ - 29**

ಬೆಳಿಗ್ಗೆ 91/2 ಗಂಟೆಗೆ Mr. ರಾಜು ಗೋಕುಲಂನ ರಸ್ತೆ ಕೊನೆಯಲ್ಲಿರುವ ಅಭಯ ಹಸ್ತ ಆಸ್ಪತ್ರೆಯ ಒಳಗೆ ನುಗ್ಗಿತ್. ಹೋದಂಗೆ ಅಲ್ಲಿ ಸಿಸ್ಟರ್ ರೀನಾಮೋಳ್‌ನ ಕಂಡ್ ಮಾತಾಡಿಸಿ ಅವಳ ಕೈಗೆ ತಾನ್ ತಂದಿದ್ದ ಪೋರ್ಟೆಬಲ್ ಟೆಪ್‌ರಿಕಾರ್ಡರ್‌ನ ಯಾರಿಗೂ ಕಾಣದಂಗೆ ಕೊಟ್ಟು ಗುಡ್‌ಲಕ್ ಸಿಸ್ಟರ್ ಬೀ ಕೇರ್ ಫುಲ್ ತಾ ವಿಶ್ ಮಾಡ್ತ್. ಆಮೇಲೆ ಅಲ್ಲೇ ಸೈಡಿಗೆ ಇರುವ ವಿಸಿಟರ್ಸ್‌ಗಳ ಸೋಫದ ಮೇಲೆ ಗೊತ್ತಿಲ್ಲದವರಂಗೆ ಕುದ್‌ಕಂಡತ್.

ಅಷ್ಟೊತ್ತಿಗೆ ಒಂದ್ A.C.ಕಾರ್ ಪೋರ್ಟಿಕೋಲಿ ಬಂಧ್ ನಿಂತತ್. ಅದರ ಒಳಗಡೆಂದ 'ಡಾ|| ಧನರಾಜ್" ಅಭಯ ಹಸ್ತ ಆಸ್ಪತ್ರೆಯ ಯಜಮಾನ ಇಳ್ದ್ ಬಾತ್. ಆಗ ಆ ರಿಷಪ್ಷನ್ ಕೌಂಟರ್‌ಲಿ ನಿಂತಿದ್ದ ಕೆಲವು ನರ್ಸ್‌ಗೂಡೆಗ ನಗೆ ಆಡಿಕಂಡ್ ಗುಡ್ ಮಾರ್ನಿಂಗ್ ಸಾರ್ ತಾ ಜುಮ್ಮನೆ ಬಾಯಿಲಿ ಮಾತ್ರ ಹೇಳ್ದೊ. ಯಾರೂ ಕೂಡಾ ಭಯ ಭಕ್ತಿಲಿ ಗೌರವ ಕೊಟ್ಟ್ ಹೇಳ್ದಂಗೆ ಕಂಡತಿಲ್ಲೆ.

ಆಗ ಈ ರೀನಾಮೋಳ್ ಗೂಡೆ ಆ ಬಾಸ್‌ನ ಒಮ್ಮೆ ನೋಡಿ ಸ್ವೀಟ್ ಆಗಿ ನಗೆ ಆಡಿ ಗುಡ್ ಮಾರ್ನಿಂಗ್ ಡಾಕ್ಟರ್ ತಾ ಹೇಳಿ ಕಣ್ಣಾರಳಿಸಿತ್. ಆಗ ಈ ಬಾಸ್ ಆ ಗೂಡೆದ್ ಸ್ಪೆಷಲ್ ನಗೆನ ನೋಡಿ " ಓಹ್" ತಾ ಆಶ್ಚರ್ಯ ಪಟ್ಟ್ ಈಗ ಈ ಚೋಟಿ ಚೆಲುವೆ ಗೂಡೆ ಕೂಡಾ ನನ್ನ ಬಲೆಗೆ ಬೀಳುತಾ ಉಟ್ಟುತಾ ಗೇನ ಮಾಡಿ ಆ ಗೂಡೆಗೆ ಮಾತ್ರ ಕೇಳ್ಪವಂಗೆ ಗುಡ್‌ಮಾರ್ನಿಂಗ್ ಸ್ವೀಟೀ ತಾ ತನ್ನ ಸ್ಪೆಷಲ್ ನಗೆಲಿ ಹೇಳಿ ತನ್ನ ಛೇಂಬರ್‌ದ್ ಬಾಗ್ಲ್‌ದ್ ಬೀಗನ ತೆಗ್ದ್ ಒಳಗಡೆಗೆ ಹೋತ್. ಐದು ನಿಮಿಷ ಬುಟ್ಟು ಆ ಬಾಸ್ ಡಾ|| ಧನರಾಜ್ ಹೊರಗೆ ಬಂದ್ ಸಿಸ್ಟರ್ ರೀನಾ ಮೋಳ್‌ನ ಕರ್ದ್ ನೀನ್ ಹೋಗಿ ಆರನೇ ವಾರ್ಡ್‌ಲಿ ಇದ್ದ ಸುಮಿತ್ರಳ ಲೇಬರ್‌ಕೇಸ್ ಕೇಸೀಟ್ ಫೈಲ್‌ನ ತಕಂಡ್ ಬಾತಾ ಹೇಳ್ತ್.

ಆಗ Mr. ರಾಜು ಮಧ್ಯೆ ಎದ್ದ್ ಬಂದ್ ಗುಡ್ ಮಾರ್ನಿಂಗ್ ಸಾರ್. ನಾನ್ ಮೆಡಿಕಲ್ ರಿಪ್ರಿಸೆಂಟೇಟಿವ್ ರಾಜೂಂತ ತಾ ಹೇಳಿಕೆ ಪ್ರಯತ್ನ ಮಾಡ್ತ್. ಆಗ ಈ ಬಾಸ್ ಇಂವನ ಕಡೆಗೆ ಕೆಂಗಣ್ಣ್ ಬುಟ್ಟ್‌ಕಂಡ್ ಹೇಳ್ತ್ ಸ್ವಲ್ಪ ನಿಲ್ಲಿ.... ನಿಮಿಗೆ ಬೆಳಿಗ್ಗೇನೇ ಏನವಸರ ಇನ್ನೊಂದು ಅರ್ಧ ಗಂಟೆ ಅಲ್ಲೇ ಕುದ್ದಿರಿತಾ ಹೇಳಿ ತನ್ನ ಚೇಂಬರ್‌ನ ಒಳಗೆ ಡಬ್ಬ್‌ತಾ ಹೋಗಿ ಬುಡ್ತ್. ರೀನಾ ಮೋಳ್ ಈ ಅನ್‌ನೆಸಸರಿ ಕೇಸ್ ಸೀಟ್‌ನ ಎದೆಗೆ ಒತ್ತಿ ಹಿಡ್‌ಕಂಡ್ ಒಮ್ಮೆ ರಾಜುನ ಕಡೆಗೆ ನೋಡಿ ಸ್ವಲ್ಪ ಭಯಲಿ, ಗಾಭರಿಲೇ ಆ ಡಾಕ್ಟರ್ ಛೇಂಬರ್‌ದ್ ಡೋರ್‌ನ ತಳ್ಳಿಕಂಡ್ ಒಳಗೆ ಹೋತ್. ಕೂಡ್ಲೇ ಆ ಬಾಗ್ಲ್ ತನ್ನಿಷ್ಟಕೇ ಡಬ್ಬ್‌ತಾ ಮುಚ್ಚಿ ಹೋತ್.

ಆಗ ಆ ರಿಷಪ್ಷನ್ ಕೌಂಟರಲಿ ನಿಂತಿದ್ದ ಗೂಡೆಗ ಮುಖಮುಖ ನೋಡಿಕಂಡ್ ನಗೆ ಆಡಿಕಂಡ್ ನಮ್ಮ ಈ ಮುದಿ ಬಾಸ್‌ದ್ ಡ್ಯೂಟಿ ಬೆಳಿಗ್ಗೆನೇ ಶುರುಆಗಿ ಹೋತಾ ತ ಗೊಣಗಿಕಂಡೊ. ಇದರ ಕೇಳ್ದ ಎದುರು ಗಡೆಲಿ ಕುದ್ದಿದ ಎರಡ್ ಹೆಣ್ಣ್‌ಜನ ತಮ್ಮ ಬೆರಳುಗಳ ಅವರ ಮೂಗಿನ ಮೇಲೆ ಮಡಗಿ ಕಂಡ್ ಆ ಬಾಗಲ್ ಕಡೆಗೇ ನೋಡುತಿದ್ದೊ. 5ನಿಮಿಷ ಆತ್. 10 ನಿಮಿಷ ಕಳ್ತ್. ಒಳಗೆ ಹೋದ ಆ ಗೂಡೆ ಹೊರ್‌ಗೆ ಬಾತ್ಲೆ. 15 ನಿಮಿಷಕ್ಕೆ ಆ ಗೂಡೆ ಮುಖನೆಲ್ಲ ಕೆಂಪು ಮಾಡಿಕಂಡ್ ಆ ಚೆಂಬರ್‌ದ್ ಬಾಗ್ಲ್‌ನ ತೆಗ್ತ್. ಆ ಕೂಡ್ಲೆ ಬಾಗ್ಲ್ ಹತ್ರ ಕಾಯುತಿದ್ದ Mr. ರಾಜು ತನ್ನ ಬ್ಯಾಗ್‌ನ ಕೈಲಿ ಹಿಡ್ಕಂಡ್ ಆ ನರ್ಸ್‌ಗೂಡೆನ ಕೈಯಿಂದ ಟೇಪ್‌ರಿಕಾರ್ಡರ್‌ನ ಇಸಕಂಡ್ ಒಳಗೆ ನುಗ್ಗಿತ್. ಆಗ ಒಳಗಡೆಲಿ ಇನ್ನೂ ನಿಂತಿದ್ದ ಬಾಸ್ ಧನರಾಜ್ ತನ್ನ ಶರ್ಟ್‌ದ್ ಗುಂಡಿಗಳ ಹಾಕುತಾ ನಿಂತ್ ಕಂಡದರ Mr.ರಾಜು ನೋಡಿಬುಡ್ತ್. ಆದ್ರುಂದ ಈ ಬಾಸ್‌ಗೆ ವಿಪರೀತ ಸಿಟ್ಟ್ ಬಂದ್ ಅಂವನ ದುರುಗುಟ್ಟಿ ನೋಡಿಕಂಡ್ ಏನ್ರೀ ನಿಮಗೆ ಪರ್ಮಿಶನ್ ತಕಂಡ್ ನನ್ನ ಛೇಂಬರ್‌ಗೆ ಬರೋಕು ತ್ತೇಳುವ ಕಾಮನ್‌ಸೆನ್ಸ್ ನಿಂಗೆ ಇಲ್ಲೆನಾ? ಒಳ್ಳೆ ಗೂಳಿತರ ಒಳಗೆ ನುಗ್ಗಿದಲ್ಲಾ? I say you get out from here ತಾ ಕಿರುಚಿ ಕಂಡತ್. ಆಗ Mr. ರಾಜು "ಶ್ಯ್" ಸೌಂಡ್ ಕಮ್ಮಿಮಾಡಿ ನಾನ್ ಹೊರಗೆ ಹೋಕೆ ಬಂದಂವ ಅಲ್ಲಾ. ಈಗ ಇಲ್ಲಿಂದ ಹೊರಗೆ ಬಾತಲ್ಲಾ ರೀನಾಮೋಳ್ ಅವಳು ನನ್ನ ಸ್ವಂತ ಅತ್ತೆ ಮಗಳು, ಗೊತಾತಾ ? ನೋಡಿಲ್ಲಿ ಈಗ ತಾನೇ ಅವಳು ರಿಕಾರ್ಡ್ ಮಾಡಿಕೊಟ್ಟ ಕ್ಯಾಸೆಟ್ ತಾ ಕೈಲಿದ್ದ ಟೇಪ್ ರಿಕಾರ್ಡ್‌ನ ಆ ಧನರಾಜ್‌ಗೆ ತೋರ್ಸಿತ್. ನಿನ್ನ ಎಲ್ಲಾ ಚರಿತ್ರೆನ ರಿಕಾರ್ಡ್ ಮಾಡಿಕಂಡೇ ನಾನ್ ಹೊರಗೆ ಹೋದು ನಾನ್ ಜಾಗ್ರತಾ ಪತ್ರಿಕಾಲಯದ ಸಂಪಾದಕ, ಹಾಗೂ ವರದಿಗಾರ. Mr. ರಾಜು ತಾ ನನ್ನ ಹೆಸರು ತಾ ಹೇಳಿ ಅಲ್ಲಿದ ಕುರ್ಚಿನ ಎಳ್ದ್ ಕುದ್ದ್‌ಕಂಡತ್. ಆ ಮೇಲೆ ತನ್ನ ಜೋಬೊಳಗಿಂದ ಪಿಸ್ತೂಲ್ ತೆಗ್ದ್ ತೋರ್ಸಿಕಂಡ್, ನೋಡಿಲ್ಲಿ ಈಗ ನಾನ್ ಇಲ್ಲಿ ನಿನ್ನ ಕೊಲೆಮಾಡಿರೂ ಯಾರಿಗೂ ಸೌಂಡ್ ಕೇಳ್ಪದಿಲ್ಲೆ. ಯಾಕೆತ್ತೇಳಿರೆ ಈ ನಿನ್ನ ಚೇಂಬರ್‌ನ ನೀನೇ ನಿನ್ನ ತೀಟೆ ತೀರ್ಸಿ ಕಂಬದಕ್ಕೋಸ್ಕರ ಸೌಂಡ್ ಪ್ರೂಫ್ ಮಾಡಿ ಕಂಡೊಳೊ. ತಾ ಹೇಳಿಕಂಡೇ ತನ್ನ ಬೆಗ್ ಒಳಗಿಂದ ಹಲವಾರು "ವಿ ಟೆಕ್,

**ಕಳ್ದ ಸಂಚಿಕೆಂದ ......**

Mr. ರಾಜು ಬಟ್ಟೆ ವ್ಯಾಪಾರ ಮಾಡ್ಸಿದರ ಕಮಿಷನ್ ಹಣಲಿ ತನಿಗೂ ತನ್ನ ತಂಗೆಗೂ ಮದುವೆಗಿರುವ ಬಟ್ಟೆನ ತಕಂಡತ್. ಭಾರ್ ಬಾರ್ ಅಂಗಡಿಲಿ ಕುದ್ದಿರ್‌ಕಾಕನ ಸಿಕ್ಕಿದ ಮಾಹಿತಿ ಮೇರೆಗೆ ಅಭಯಹಸ್ತ ಆಸ್ಪತ್ರೆಯ ಅವ್ಯವಹಾರದ ಬಗ್ಗೆ ವಿಷ್ಯ ತಿಳ್ಕಂಡಿತ್. ಹಂಗಾಗಿ ಆ ವಿಚಾರನ ಸತ್ಯಾನ್ವೇಷಣೆಗೋಸ್ಕರ ಆ ಆಸ್ಪತ್ರೆಗೆ ಹೊರಟತ್....

ಮುಂದಕೆ ........

ವೆರಿಟೆಕ್" ನಂತಹ ಸೆಕ್ಸುಯಲ್ ಕ್ಯಾಪ್ಸೂಲ್ಸ್‌ಗಳ ತೆಗ್ದ್ ಅವನ ಟೇಬಲ್ ಮುಂದೆ ಮಡಗಿತ್. ಇದು ನೋಡು ಅಮೇರಿಕಂದ ಇಂಪೋರ್ಟ್‌ಮಾಡಿ ಕಂಡಂತಹ ಫ್ಲೋಯಿಡ್ ಸ್ಪ್ರೆಯರ್ ಇದರ ನೀನ್ ನಿನ್ನದರ ಮೇಲೆ ಸ್ಪ್ರೇ ಮಾಡಿಕಂಡರೆ ದಿನಕ್ಕೆ ನಾಲ್ಕು ಹೆಣ್ಣು ಮಕ್ಕಳೊಟ್ಟಿಗೆ ಮಜ ಮಾಡಕ್. ಒಳ್ಳೆ ಹೈದಗಳಿಗಿಂತಲೂ ಹೆಚ್ಚು ಶಕ್ತಿ ನಿಂಗೆ ಬಂದದೆ ಗೊತಾತಾ? ಈಗ ನೀನ್ ಸಧ್ಯಕೆ ಯಾವ್ಯಾವ ತರಹದ ಕಾಮೋತ್ತೇಜಕ ವಯಾಗ್ರ ಉಪಯೋಗಿಸುತಾ ಒಳೋ? ಅದಕ್ಕಿಂತಲೂ 10ಪಟ್ಟು ಹೆಚ್ಚ್ ಪ್ರಭಾವಶಾಲಿ ಔಷಧಿಗಳ ನಾನ್ ನಿಂಗೆ ಕೊಡುತಾ ಒಳೆ. ಇದರ ನೀನ್ ತಕೊ. ಇದರ ಉಪಯೋಗಿಸಿ ನೋಡು ಇನ್ನೂ ನಿಂಗೆ ಆಯಸ್ಸು ಮೀರಿತಿಲ್ಲೆ. ನಿಂಗೆ ನಿನ್ನ ಆಯುಸ್ಸು ತೀರಿಕೆ ಮೊದ್ಲು ನಿಂಗೆ ಹಿಡ್ದ ದೆವ್ವನ ಬುಡ್ಸಿಕೆ ನಾವು ಜಾಗ್ರತಾ ಪತ್ರಿಕಾಲಯಂದ ನಾಲ್ಕು ಜನ ಬಂದ್ ನಿನ್ನನ ಕವರ್ ಮಾಡ್ಕ್ಯೊಳೊ. ಇದೂವರೆಗೂ ನಿನ್ನ ಲೈಂಗಿಕ ಕಿರುಕುಳನ ಅನುಭವಿಸಿದ ಹದಿನೈದು ಜನ ಸಿಸ್ಟರ್‌ಗ ನಿನ್ನ ಮೇಲೆ ಆರೋಪ ಹೊರಿಸಿ ಅವು ನಿಂಗೆ ಸರಿಯಾದ ಶಿಕ್ಷೆಕೊಡಿಕೆ ಮತ್ತು ಪರಿಹಾರ ಧನಕ್ಕೋಸ್ಕರ ಮಹಿಳಾ ಜಾಗ್ರತಿ ವೇದಿಕೆ ಪೀಠದ ಸಂಘಟನಾ ಅಧ್ಯಕ್ಷೆ ಶ್ರೀಮತಿ ಪ್ರಮಿಳಾ ಜೋಷಿ ಹತ್ರ ಮನವಿ ಸಲ್ಲಿಸಳೊ. ಇದರ ಸತ್ಯಾ ಅಸತ್ಯತೆಗಳ ಬಗ್ಗೆ ಕಣ್ಣಾರೆ ತಿಳ್ಕಂಡ್ ಬಾಕೆ ಅವು ನನ್ನನ ನಿಯೋಜಿಸಳೊ. ಈಗ ಗೊತಾತಾ ನಾನ್ ಯಾರ್‌ತಾ?

ಈ ಬಡ ಅಸಾಯಕ ನರ್ಸ್‌ಗೂಡೆಗಳ ಅರಣ್ಯರೋಧನಕ್ಕೆ ಪೋಲಿಸ್‌ರವರಿಂದ ಇದೂವರೆಗೂ ಏನೂ ಸಹಾಯ ಆಗದೇ ಇದ್ದ ಕಾರಣಕ್ಕಾಗಿ ಈಗ ಈ ದೂರು ನಮ್ಮ ಹತ್ರಕೆ ಬಂದುಟು. ಆದುದರಿಂದ ಈಗ ನೀನ್ ಯಾವ ಗಲಾಟೆನೂ ಮಾಡಿಕೆ ಧೈರ್ಯ ಮಾಡದೆ ನಾನ್ ಕೇಳ್ದಕೆಲ್ಲಾ ಉತ್ತರ ಹೇಳಿರೆ ಸರಿ! ನೀನ್ ಕಚ್ಚೆ ಹರುಕ, ಚಪಲಚಿತ್ತ ಚೆನ್ನಿಗರಾಯ ತಾ ಹೇಳ್ದಿಕೆ ಸಾಕ್ಷಿ ಆಗಿ ಈ ಕ್ಯಾಸೆಟ್‌ಲಿ ರಿಕಾರ್ಡ್ ಆಗುಟ್ಟು, ಅಲ್ಲದೆ ನಮ್ಮ ಪತ್ರಿಕಾ ವರದಿಗಾರರು ನಿಂಗೆ ಗೊತ್ತಾಗದಂಗೇ ನಿನ್ನ ಕಳ್ದ 20 ವರುಷಗಳಲ್ಲಿ ಆಡಿದ ಕೃಷ್ಣಲೀಲೆಗಳ ವಿಚಾರನ ಕಲೆಹಾಕಿ ಸಾಕ್ಷ್ಯಾಧಾರಗಳ ಸಮೇತ ಪತ್ತೆಹಚ್ಚಿ ವಸೂಲು ಮಾಡೀ ಮಡಿಗ್ಯೊಳೊ.

ನಿಂಗೆ ಈ ಮೈಸೂರು ಸಿಟಿಲಿ ನಿನ್ನ ಖಾಸಗಿ ಮಾಲಿಕತ್ವದ ಎಷ್ಟೆಷ್ಟ್ ಲಾಡ್ಜ್‌ಗ ಉಟ್ಟು, ಎಷ್ಟು ಹೋಟೆಲ್‌ಗ ಉಟ್ಟು, ಅಲ್ಲೆಲ್ಲಾ ನಿನ್ನ ವ್ಯವರಗಳೇನ್? ನಿಂಗೆ ಸೇರ್ದ ಫೈನಾನ್ಸ್ ವ್ಯವರ ಎಲೆಲ್ಲಾ ಉಟ್ಟು ತ್ತೇಳುವ ಮಾಹಿತಿಗಳೆಲ್ಲಾ ಉಟ್ಟು. ಇದರ ಪ್ರಕಾರ ನೀನು ಸರ್ಕಾರಕ್ಕೆ ಒಟ್ಟು ಅಂದಾಜ್ ಎಷ್ಟು ಕೋಟಿ ವಂಚನೆ ಮಾಡ್ಯೊಳೊತ್ತೇಳುವ ಲೆಕ್ಕ ಕೂಡಾ ನನ್ನ ಹತ್ರ ಉಟ್ಟು.

ಅದೂ ಅಲ್ಲದೆ ನೀನ್ ಈ ಆಸ್ಪತ್ರೆನ ಯಾರ ಹೆಸರ್‌ಲಿ ಕಟ್ಟಿಸಿದ್, ಇದರಲ್ಲಿ ನೀನ್ ನಿನ್ನ ಸ್ವಾರ್ಥಕ್ಕೋಷ್ಕರ ಮಾಡ್ವ ಕಾರ್‌ಬಾರ್‌ಗಳೇನು? ನೀನ್ ಎಷ್ಟು ದೊಡ್ಡ ಕೋಟ್ಯಾಧಿಪತಿ ಸಮಾಜಲಿ ನಿನ್ನ ಘನತೆ ಏನ್? ನಿನ್ನ ಸಂಪಾದನೆ, ಹಂಗೇ ಕರ್ಚಾದರ ಬಗ್ಗೆ ಕೂಡಾ ನನ್ನ ಹತ್ರ ಲೆಕ್ಕ ಉಟ್ಟು, ಗೊತ್ತಾತ. ಆದ್ರೇ ಅದರಲ್ಲಿ ನೀನ್ ಪ್ರತೀ ದಿನ ಬರೀ ಹೊಸ ಹೊಸ ಗೂಡೆಗಳಿಗೋಸ್ಕರ ಅವರ ಶೀಲನ ಹಾಳ್ ಮಾಡಿಕ್ಕೋಸ್ಕರ ಎಷ್ಟ್ ಕರ್ಚ್ ಮಾಡ್ತಾ ಒಳಾ? ನೀನ್ ಈ ಅಮಾಯಕ ಗೂಡೆಗಳ ಬೇರೆ ನಿನ್ನ ಯಾವ್ಯಾವ ಚಮುಚಾಗಳಿಗೆ ಕಳ್ಸಿಕೊಡುತಾ ಒಳಾ ಹಿಂಗೇ ನಿನ್ನ ಕಚ್ಚೆಹರ್ಕ ಪುರಾಣದ ಪ್ರತೀ ಒಂದೊಂದು ಸೀನ್ಸ್‌ಗಳ ವಿವರಣೆಗ ನಮ್ಮ ಹತ್ರ ತುಂಬಾ ಉಟ್ಟು. ಈ ನಿನ್ನ ಚರಿತ್ರೆಗೆಲ್ಲಾ ಗಿನ್ನೀಸ್ ಬುಕ್ಕ್‌ಲಿ ದಾಖಲೆ ಆಕೆ ಮುಂದೆ ಸಣ್ಣ ವಯಸ್ಸಿನ ಬಡಜನರ ಮಕ್ಕಳಿಗೆಲ್ಲಾ ನಿನ್ನ ಭಯಂಕರ ರೋಗಗಳ ಅಂಟಿಸಿಕೆ ಮೊದ್ಲ್, ನಮ್ಮ ಜನ ನಿನ್ನ ಹಿಡ್ದ್ ಜೈಲಿಗೆ ಹಾಕಿಕೆ ಮೊದ್ಲ್, ನೀನ್ ನಿನ್ನ ಸಾವಿರ ಕೋಟಿ ರೂಪಾಯಿಗಳ ಆಸ್ತಿಗಳ ಬೇರೆ ಯಾರ್ಯಾರೋ ಮೂರನೆ ಜನ ಬಂದ್ ನುಂಗಿಕೆ ಮೊದ್ಲ್ ಈಗ ಕೊನೆಗೆ ನಿನ್ನ ಹತ್ರ ಬೇವರ್ಸಿಗಳಾಗಿ ಉಳಕಂಡಿದ್ದ ನಿನ್ನ ಮೂರು ಮೊಮ್ಮಕ್ಕಳಿಗೆ ಗತಿ ಇಲ್ಲದಂಗೆ ಆಕೆ ಮೊದ್ಲ್, ಅಲ್ಲದೆ ನಿನ್ನ ಘನತೆ ಗೌರವ ಘನಂದಾರಿ ಕೆಲ್ಸಗಳ ಕೊಂಡಾಡಿ ಪೋಟೋಸಮೇತ ನಮ್ಮ ಪತ್ರಿಕೆಲಿ ಅಚ್ಚಾಗಿ ಪ್ರತೀವಾರ ದಾರಾವಾಹಿಯಾಗಿ ಬಾಕೆ ಮೊದ್ಲ್. ನೀನ್ ನಿನ್ನ ಹೆಸ್ರ್‌ಲಿ ಸಂಪಾದಿಸಿದ ಹಲವು ಕೋಟಿ ರೂಪಾಯಿಗಳ ಹಣಲಿ ಈಗ ಅತೀ ಕಿಂಚತಾಗಿ ನಮ್ಮ ಸಮಾಜಲಿ ಇರುವ ಕೆಲವು ಅಸಾಯಕ ಜನರಿಗಾದ್ರೂ ಪ್ರಯೋಜನ ಆಗಲಿ ತ್ತೇಳುವ ಒಂದೇ ಒಂದು ಉದ್ದೇಶಕ್ಕೋಸ್ಕರ ನಾನ್ ಈಗ ನಿನ್ನನ ಕೊಲ್ಲುದಿಲ್ಲೆ. ಅಥವಾ ಪೋಲೀಸ್‌ಗೆ ಹ್ಯಾಂಡ್ ಓವರ್ ಮಾಡ್ದುಲ್ಲೆ. ಅದೂ ಅಲ್ಲದೆ ನಿನ್ನ ಹತ್ರ ಇರತಕ್ಕ ಇಷ್ಟೆಲ್ಲಾ ಸಂಪತ್ತಿಗೆ ನೀನ್ ಒಂದೇ ಒಂದ್ ಹನಿ ಬೆವರು ಸುರ್ಸಿತಿಲ್ಲೆ. ಎಲ್ಲಾ ನಿನ್ನ ಕೈಕೆಳಗಿರುವ ಕೆಲಸದಾಳುಗ ದುಡ್ದ್ ಸಂಪಾದನೆಮಾಡಿನಿಂಗೆ ಕೊಟ್ಟೊಳೊ. ಆದ್ರೇ ನಿಜವಾಗ್ಲೂ. ಆತ್ಮ ಸಾಕ್ಷಿಯಾಗಿ ದೇವರ ಸಾಕ್ಷಿಯಾಗಿ ಈ ಸಂಪತ್ತಿಗೆಲ್ಲಾ ನೀನೊಬ್ಬನೇ ಒಡೆಯನಲ್ಲ ಗೊತಾತಾ? ಆದ್ರೇ ಒಂದ್ ಮಾತ್ ಹೇಳಿನೆ ನಾನ್. ನೀನ್ ಅದರ ತಿಳ್ಕಂಡ್ ನಡೆಯೋಕು. "ಸಮಾಜಲಿ ಸರ್ವರಿಗೂ ಸಮಪಾಲು, ಸಮಬಾಳು ಎಂಬಂತಹ ತತ್ವ ನನ್ನದ್. ಇದರ ನೀನ್ ಈಗ ಕಡ್ಡಾಯ ಆಗಿ ಪಾಲಿಸಕು. ಇದ್ ಈಗ ನಾನ್ ನಿಂಗೆ ಮಾಡ್ವ ಆರ್ಡರ್ ಗೊತ್ತಾತಾ? ನಾನ್ ನಿಂಗೆ ಈಗ ಪ್ರಾಣ ಬಿಕ್ಷೆನ ಕೊಡುತಾ ಒಳೆ ಈಗ ನಾನ್ ಹೇಳ್ದಂಗೆ ಒಂದೇ ಒಂದ್ ಒಳ್ಳೆ ಕೆಲ್ಸನ ಮಾಡಿಕೆ ಒಪ್ಪಿಕಣಕು. ಅಲ್ಲದೆ ನನ್ನ ಕೆಲವು ಕಂಡಿಷನ್‌ಗಳಿಗೆ ಒಪ್ಪಿಕಣಕು. ಇಲ್ದೇ ಇದ್ರೆ ಈ ಬುಲ್ಲೆಟ್ ನಿನ್ನ ಮಿದುಳುನ ಹೊರಗೆ ಕಿತ್ ಹಾಕಿದೆ ಹೂಂ ಏನು? ಸಿಟ್ಟ್‌ಲಿ ಆವೇಶ ಬಂದವಂಗೆ ಮಿಸ್ಟರ್ ರಾಜು ಪಿಸ್ತೂಲ್‌ನ ಗುರಿಹಿಡ್ದ್‌ಕೇಳ್ತ್.

ಈ ಡಾ||ಧನರಾಜ್ ಹೆದ್‌ರಿ ನಡಿಗಿಕಂಡ್. ಆತ್ ನೀವು ಏನ್ ಹೇಳಿರೆ ಅದಕೆಲ್ಲಾ ನಾನ್ ಒಪ್ಪಿಕಂಡನೆ ಆದ್ರೆಮಾತ್ರ ನನ್ನ ಜೀವಸಹಿತ ಬುಡೋಕು. ಮತ್ತೆ ನನ್ನ ಚರಿತ್ರೆನ ಪೂರ್ತ ಬಯಲ್ ಮಾಡ್ದು ಬೇಡ ಪ್ಲೀಸ್ ಆತ್ ಅದೇನ್ ಹೇಳಿ ನಾನ್ ನೆರವೇರಿಸಿನೆ ತಾ ಒಪ್ಪಿಕಂಡತ್.

ಆಗ Mr. ರಾಜು ಟೇಪ್ ರಿಕಾರ್ಡರ್ ಆನ್ ಮಾಡಿ ಹಿಡ್‌ಕಂಡತ್. ಎಯ್ ಮುದಿಯ ನಿನ್ನ ಮುಖನ ನೋಡಿರೆ ಒಂದು ಅಚ್ಚೆನೂ ಕೂಡಾ ನಿನ್ನ ಇಷ್ಟಪಡ್ವಂಗಿಲ್ಲೆ ಇದೆಲ್ಲಾ ನಿನ್ನ ಹತ್ರ ಕೊಳೆಯುತ್ತಿರುವ ಹಣದ ಮದ, ನಿನ್ನ ಮಿದುಳಲ್ಲಿ ಇರುವ ವಿಚಿತ್ರ ಚಪಲ ಕೈಲಿ ಆಗದಿದ್ರೂ ಕೊಸರಾಡುವ ಚಪಲ ನನ್ನ ಹತ್ರ ಇರುವ ಕೆಲವು ಎವಿಡೆನ್ಸ್‌ಗಳನೆಲ್ಲಾ ನನ್ನ ಪತ್ರಿಕೆಲಿ ಪ್ರಚಾರ ಮಾಡಿರೆ ನಿನ್ನ ಕೋರ್ಟ್‌ಲಿ ನಿಲ್ಲಿಸಿರೆ ನೀನ್ ನೆಟ್ಟಂಗೆ ಕಂಬಿ

ಎಣಿಸಿಕೆ ಹೋದಿಯು. ಸದ್ಯ ಈಗಾದ್ರೂ ನಿನ್ನ ಮನ್ಸ್‌ನ ಒಳ್ಳೆ ಕೆಲ್ಸಗಳಿಗೆ ವಿನಿಯೋಗಿಸಿ ಒಳ್ಳೆ ಹೆಸ್ರ್‌ಗಳಿಸಿಕೆ ಪ್ರಯತ್ನನ ಮಾಡ್ ಅಂದ್ರೇ ಈಗ ಸದ್ಯಕ್ಕೆ ಒಂದ್ ಕೆಲ್ಸಮಾಡಿರೆ ನಾನ್ ನಿನ್ನ ಉಳ್ಸಿಕೆ ಪ್ರಯತ್ನ ಮಾಡಿವೆ. ಈಗ ನಾ ಹೇಳ್ವಕೆ ನೀನ್ ಒಪ್ಪಿಕಣ್ಡು.

ಆತ್ Mr. ರಾಜು ನಿಮ್ಮ ಮನ್ಸ್‌ಲಿ ಏನುಟ್ಟ್ ತಾ ಹೇಳಿ. ಈಗ ನೀವು ನಂಗೆ ಕವಿದಿದ್ದ ದುರ್ಬುದ್ಧಿಯಿಂದ ಕಣ್ಣ್‌ತೆರ್ಸಿಕೊರಿ. ಈಗ ನಂಗೂ, ನನ್ನ ಎಲೆ ಮೊಮ್ಮಕ್ಕಳಿಗೂ ಏನೂ ತೊಂದರೆ ಆಗದಂಗೆ ನೀವೇ ಒಂದು ಪರಿಹಾರ ಹೇಳಿ ಕೊಡುಕು ತಾ ಕೇಳಿಕಂಡತ್.

ನೋಡ್ Mr. ಧನರಾಜ್ ಈ ಓಂದೆ ನೀನ್ ಹತ್ತಾರು ಮಹಲುಗಳ ಮಾಲೀಕರಾಗೊಳೊರಿ, ಅಲ್ಲದೆ, ವ್ಯಾಪಾರಲಿ, ವ್ಯವಹಾರಲಿ, ಬ್ಯಾಂಕ್‌ಗಳಲೆಲ್ಲಾ ನಿರ್ದೇಶಕರಾಗಿದ್ದ್ ಒಳ್ಳೆ ಹೆಸರ್‌ಗಳ್ಸಿ ಒಬ್ಬ ಗಣ್ಯವ್ಯಕ್ತಿತ್ತೇಳಿ ಗುರ್ತಿಸಿಕಂಡಂತಹ ಒಬ್ಬ ಮಹಾನ್ ವ್ಯಕ್ತಿ ಬರೇ ಚರ್ಮದ ತೆವಲಿಲಿ ಬದ್ದ್ ಕೊಳೆಯುತಾ ಉಟ್ಟ್‌ತೇಳುವ ಸುದ್ದಿ ನಮ್ಮ ಪತ್ರಿಕೆಲಿ ಜನಗಳಿಗೆ ಜಗಜಾಹಿರಾಕೆ ಮೊದ್ಲ್ ನೀವು ನಿಮಿಗೆ ಸೇರಿದ ಒಂದೇ ಒಂದು ಬಿಲ್ಡಿಂಗ್‌ನ ಮಾರಿ ಅದರಂದ್ ಬರುವ ಹಣನ ಪೂರ್ತಾ ಅದ್ ಒಂದು ಕೋಟಿ ರೂಪಾಯಿ ಆದ್ರೂ ಸರಿ ಅದನ ಈಗ ಹಾಲಿ ಮೈಸೂರುಲಿ ಇರುವ ವೃದ್ಧರ ಸೇವಾಶ್ರಮಕ್ಕೆ ಫಿಕ್ಸೆಡ್ ಡಿಪಾಸಿಟ್ ಹಾಕೋಕು. ಅದರಂದ ಬರುವ ಬಡ್ಡಿ ಹಣಂದ ವೃದ್ಧ ಜನಕ್ಕೆ ಉಪಯೋಗ ಆಗುವಂಗೆ ನಿನ್ನ ಹೆಸ್ರುಲಿ ಒಂದ್ ಚಾರಿಟೇಬಲ್ ಫಂಡ್‌ನ ಧಾನ ಕೊಡೋಕು. ಇದ್ರಂದ ಅಲ್ಪಸ್ವಲ್ಪನಾದ್ರೂ ನಿನ್ನ ಪಾಪ ಕೃತ್ಯದ ದೋಷ ಪರಿಹಾರ ಆಗಲಿ. ನಿನ್ನ ಹೆಸ್ರ್‌ನ ಸಾವಿರಾರು ಜನಜನ ಕೊಂಡಾಡಿ ಕಂಡ್ ನಿನ್ನ ಹರ್‌ಸಲಿ ಆಗ ನಿನ್ನ ಹೆಸರು ಚಿರಾಯು ಆದೆ.

ಆ ಮೇಲೆ ಇನ್ನೊಂದು ಮುಖ್ಯವಾದ ಒಂದ್ ಸರತ್. ಈಗ ಈ ಕೊಡ್ವೆ ನಮ್ಮ ಪತ್ರಿಕಾಲಯ ಚೆನ್ನಾಗಿ ಬೆಳ್ದ್ ಓಂಗೇ ಮುಂದಕ್ಕೂ ಜನರ ಮತ್ತೆ ಸಮಾಜ ಸೇವೆಲಿ ಮುಂದುವರಿಯಲಿ ತಾ ನೀನ್ 25ಸಾವಿರ ರೂಪಾಯಿಯ ಜೀವಾವಧಿ ಸದಸ್ಯತನನ ತಕೊಂಬೊಕು.

ಆತ್ Mr. ರಾಜು ಖಂಡಿತ ವಾಗ್ಲೂ ನೀವು ಹೇಳ್ದಂಗೆ ಮಾಡ್ತಿನೆ. ನನ್ನ ಆಯುಷ್ಯನ ಕೊನೆ ಭಾಗದಲ್ಲಾದ್ರೂ ನಿಮ್ಮಂತವ್ರ ನನ್ನಮುಂದೆ ಬಂದ್ ನಂಗೆ ಒಪ್ಪಿರತಹ ಜಾಮಾಂದ ಭೂತನ ಬಿಡ್ಸಿ ನನ್ನ ವ್ಯಕ್ತಿತ್ವದ ಬಗ್ಗೆ ಚಿಂತನೆ ಮಾಡ್ವಂತಹ ಒಂದ್ ಸಂದರ್ಭನ ಒದಗಿಸಿ ಕೊಟ್ಟಂತಹ ನಿಮ್ಮಂತಹ ಕಿರಿಯವನ ಮುಂದೆ ನಾನೇ ತುಂಬಾ ಚಿಕ್ಕನಾಗಿ ಹೋಗೊಳೆ, ಒಪ್ಪಿಮಿಷ ಇರಿ. ನಾನ್ ಈಗ್ಲೆ ನಿಮ್ಮ ಪತ್ರಿಕೆಗೆ ಅಜೀವ ಪೋಷಕ ಸದಸ್ಯನಾಗಿ ನೀವು ಕೇಳ್ದ ಇಪ್ಪತ್ತೈದು ಸಾವಿರ ರೂಪಾಯಿನ ಕೊಟ್ಟನೆ. ಅದ್ರೇ ನೀವು ಹೇಳ್ದ ರೂಪಾಯಿನ ಕೊಡಿಕೆ ನಂಗೆ ಒಂದ್ ವಾರ ಕಾಲಾವಕಾಸ ಬೇಕ್. ಹಂಗೆ ನನ್ನ ಹತ್ರ ಕೆಲ್ಸ ಮಾಡಿಕಂಡಿದ್ದ ಆ ಎಲ್ಲಾ ನರ್ಸ್‌ಗೂಡೆ ಗಳಿಗೆಲ್ಲಾ ನನ್ನಿಂದ ಓಂಸೆಗೆ ಒಳಪಟ್ಟವಕೆಲ್ಲಾ 25 ಸಾವಿರದಾಂಗೆ ಪರಿಹಾರನ ಕೊಡಿಕೆ ಖಂಡಿತವಾಗಿಯೂ ಏರ್ಪಾಡ್‌ಮಾಡಿನೆ.

ನೀವು ದಯವಿಟ್ಟು, ನನ್ನ ಮಾನನ ಹರಾಜ್ ಹಾಕದೆ ಬಹಿರಂಗ ಪಡಿಸದೆ ಮುಂದಕ್ಕೆ ಸ್ವಲ್ಪನಾದ್ರೂ ಸಮಾಜಲಿ ಜನಕೆ ಸೇವೆ ಮಾಡುವಅವಕಾಸನ ಕೊಡಿ ತ ಕೇಳಿಕಂಡ್ ರಾಜುನ ಕೈನ ಹಿಡ್‌ಕಂಡತ್.

ಈ Mr. ಧನರಾಜ್ ಓಂಗೆ ಹೇಳುತಾ ಇರುವ ಮಾತ್‌ನ Mr. ರಾಜು ತನ್ನ ಟೇಪ್‌ರಿಕಾರ್ಡ್‌ಲಿ ರಿಕಾರ್ಡ್ ಮಾಡಿಕಂಡತ್. ಆಮೇಲೆ Mr. ಧನರಾಜ್ ನೀವು ಇಲ್ಲಿಗೇ ಆ 25 ಸಾವಿರ ಹಣನ ತಪ್ಪಿಕೊಡಕ್ಕು. ಈಗ ಸದ್ಯಕ್ಕೆ ನಿನ್ನನ ಹೊರಗೆ ಹೋಕೆ ಬಿಡ್‌ದೆ ಗೊತ್ತಾತಾ? ತ ಕೇಳ್ತ್. ಆಗ Mr.ಧನರಾಜ್ ಅಲ್ಲಿ ಕುದ್ದಲ್ಲಿಂದಲೇ ರಿಸೆಪ್ಶನ್ ಕೌಂಟರ್‌ಗೆ ಇಂಟರ್‌ಕಾಮ್‌ಲಿ ಮಾತಾಡ್ತ್ ರಿಸೆಪ್ಶನ್ ರಮಾ ಗೂಡೆಗೆ ಹೇಳ್ತ್ ಈ ಕೊಡ್ವೆ ಒಟ್ಟು ಕಲೆಕ್ಷನ್ ಹಣಂದ ಎಲ್ಲಾ ಒಟ್ಟಿಗೆ ಐವತ್ತು ಸಾವಿರ ರೂಪಾಯಿನ ಜೊತೆ ಸೇರ್ಸಿಕಂಡ್ ಐದ್ ನಿಮಿಷದ ಒಳಗೆ ತಕಂಡ್ ಬರೋಕುತಾ ಆರ್ಡರ್ ಮಾಡ್ತ್. ಇದಾದ ಮೇಲೆ ಆ ಚೆಂಬರ್‌ನ ಒಳಗೆ ಇಬ್ರು 5 ನಿಮಿಷ ತಲೆ ಬೊಗ್ಗಿಸಿಕಂಡ್ ಸುಮ್ಮನೆ ಕುದ್ದಿದ್ದೊ. ಯಾಕೆತ್ತೇಳಿರೆ Mr.ಧನರಾಜ್‌ಗೆ ಅವಮಾನ ಆಗಿ ಹೋಗಿ ಅವನ ಮುಖಲಿ ನೀರ್ ಇಳಿಯುತಿತ್. ಒಂದ್ ಸರ್ತಿ ಈ ಆಸಾಮಿಕ ಚೇಂಬರ್ ಒಳಗೆಂದ ಹೊರಗೆ ಹೋದ್ರೆ ಸಾಕಪ್ಪಾತ ತಡಪಡ್‌ತಿತ್. ಈ Mr. ರಾಜು ಈ ಚೆಂಬರ್ ಒಳಗೆಂದ ನನ್ನ ದೋಂಗಿ ವೇಷ ಗೊತ್ತಾಕೆ ಮೊದ್ಲ್ ಇವರ ಕೈಯಿಂದ ದುಡ್ಡ್‌ನ ಟೀಕಂಡ್ ಹೊರಗೆ ಹೊರಟವೆ ಸಾಕಲಪ್ಪಾತಾ ಕೈಕೈನ ಹೊಸ್ಕಂಡ್ ಕುದ್ದಿತ್. ಅಷ್ಟೊತ್ತಿಗೆ ಆ ರಿಸೆಪ್ಶನ್ ಗೂಡೆ ಚೇಂಬರ್‌ಂದ್ ಬಾಗ್ಲ್‌ನ ದೂಡಿಕಂಡ್ ಇಪ್ಪತ್ತೈದ್ ಸಾವಿರ ರೂಪಾಯಿ ಕಟ್ಟ್‌ನ ಹಿಡ್‌ಕಂಡ್ ಒಳಗೆ ಬಾತ್. ಈ ಬಾಸ್ ಆ ಹಣನ ಕೈಗೆ ತಕಣ್‌ತಾ ಎಲ್ಲಾ 25,000 ರೂಪಾಯಿ ಸರಿಯಾಗಿ ಉಟ್ಟಲ್ಲಾ? ತಾ ಕೇಳಿಕಂಡ್ ಇದರ ತಕಣ್ಣ್ ಮಿ. ರಾಜು ಇದ್ ನನ್ನ ಹೆಸ್ರ್‌ಲಿ ನಿಮ್ಮ ಪತ್ರಿಕೆಗೆ ಪೋಷಕ ಸದಸ್ಯತನಕ್ಕೆ ತಾ ಹೇಳಿಕಂಡ್ ಕೊಟ್ಟತ್. ನೀವು ಹೇಳ್ದಂಗೆ ಇನ್ ಒಂದೇ ವಾರಲಿ ನಾನ್ ವೃದ್ಧ ಸೇವಾಶ್ರಮಕ್ಕೆ ಒಂದ್ ಕೋಟಿರೂಪಾಯಿನ ಅವರ ಟ್ರಸ್ಟಿಗೆ ಧಾನ ಆಗಿ ಕೊಟ್ಟನೆ. ಆಗ ನೀವೇ ಬಂದ್ ಮುಂದೆ ನಿಂತ್ ಈ ವ್ಯವಹಾರನ ಮುಗ್ಸಿಕೊಡೋಕು. ಅಲ್ಲದೆ ನೀವು ಹೇಳ್ದಂಗೆ ಆ ನರ್ಸ್ ಗೂಡೆಗಳಿಗೂ ಪರಿಹಾರನ ನಿಮ್ಮ ಮುಖಾಂತರನೇ ಕೊಡ್ಸಿನೆ ನಿಮ್ಮ ಮುಖಾಂತರನೇ ಈ ಒಳ್ಳೆ ಕೆಲಸ ನಡ್ದ್ ಹೋಗಲಿತಾ ಹೇಳಿ ರಾಜುನ ಕೈ ಹಿಡ್ದ್ ಕುಲುಕಿತ್. Mr. ರಾಜು ಆಗ ಖುಷಿಲಿ ಆಯ್ತು Mr. ಧನರಾಜು ಈಗಲಾದ್ರೂ ನಿಮ್ಮ ಮನ್ಸ್‌ಗೆ ಒಳ್ಳೆ ಅಭಿಪ್ರಾಯ ಮೂಡಿ ಬಾತಲ್ಲಾ? ಇನ್ ಮುಂದಕೆ ನಿಮ್ಮಿಂದ ನಿಮ್ಮ ಹಣಂದ ಸಮಾಜಕ್ಕೆ ತುಂಬಾ ಪ್ರಯೋಜನ ಖಂಡಿತಾ ಆದೆ ತ್ತೇಳುವ ಭರವಸೆ ನಂಗೆ ಮೂಡುತಾ ಉಟ್ಟು. ಓಂಗೆ ಏನಾದ್ರೂ ನಿಮ್ಮಿಂದ ಪ್ರಯೋಜನ ಆದ್ರೆ ಆಗ ನಾನ್ ನಿಮ್ಮನ ಒಬ್ಬ ದೊಡ್ಡ ಸಮಾಜ ಸುಧಾರಕ ವ್ಯಕ್ತಿತ ಚಿತ್ರಣಮಾಡಿ ನಿಮ್ಮನ ಹೊಗ್‌ಳಿ ನಿಮ್ಮ ಅಪಕೀರ್ತಿನ ಅಳಿಸಿ ಹಾಕಿಕೆ ಪ್ರಯತ್ನಮಾಡಿನೆ ತಾ ಹೇಳ್‌ತಾ. ಆ ಇಪ್ಪತ್ತೈದ್ ಸಾವಿರ ಹಣನ ತನ್ನ ಬೇಗೊಳಗೆ ಸೇರಿಕಂಡ್ ಅಲ್ಲಿಂದ ಖುಷಿಲಿ ಹೊರಟ್ ಹೊರಗೆ ಬಾತ್.

---

ಗಂಡ ಪಟ್ಟೆ, ಸೀರೆ ತಂದದೆತ ಹೆಣ್ ಇರುವ ಸೀರೆ ಸುಟ್ಟತ್‌ಗಡ.

---

# ಅರೆಭಾಷೆಲಿ ಮಾದರಿ ಲಗ್ನ ಪತ್ರಿಕೆ

ಸನ್ ಎರಡು ಸಾವಿರದ .............. ಇಸವಿ, ತಾರೀಖ್ ......................ರಲಿ ....................ಜಿಲ್ಲಾ .....................ತಾಲೂಕು.........................ಗ್ರಾಮದ...............................ಮನೆ.......................................ನವ್ರ ಒಪ್ಪಿಗೆ ವ್ಯಾಲೆ...................ನವ್ರ ಮಗ್ಳು ಸೌಭಾಗ್ಯವತಿ...................................ತ್ತೇಳ್ವ್ ಗೂಡೆನ.......................ಜಿಲ್ಲೆ......................ತಾಲೂಕ್...................ನಾಡ್.................................. ..........................ಗ್ರಾಮದ ....................ನವ್ರ ಒಪ್ಪಿಗೆ ವ್ಯಾಲೆ................ನವ್ರ ಮಂಙ್ಳ ಚಿರಂಜೀವಿ ರಾರಾಜಿಸ್ವು..................ಎಂಬ ಹೈದಂಗೆ ಪಾಣಿಗ್ರಹಣ ಮಾಡಿ ಕೊಟ್ಟವೆಂತೇಳಿ ಗುರ್‌ಹಿರಿಯರಿದ್ದ್ ನಿಶ್ಚಯಿಸೋಳೊ. ಸದ್ರಿ ಮದ್ವೆ ಕಾರ್ಯನ ಇದೇ...................ತಿಂಗ್ಳ ......................ನೇ ತಾರೀಕ್......................ವಾರ ಹಗಲ್/ರಾತ್ರಿ ......................... ಸಮಯಕ್ಕೆ ಸೆರಿಯಾಗಿ ಸಲ್ಲುವ ಶುಭ..................ಲಗ್ನಲಿ ಧಾರೆ ಕಾರ್ಯನ ಗೂಡೆನ ಮನೇಲಿ / ದೇವಸ್ಥಾನಲಿ/.......ಕಲ್ಯಾಣ ಮಂಟಪಲಿ ನಡ್ಸುವಂಗೆ ಗೌಡ ಸಮಾಜ ಪದ್ಧತಿ ಪ್ರಕಾರ ಮದ್ವೆ ಕಾರ್ಯನ ಉಭಯಸ್ತರು ಕೂಡಿ ಸಾಂಗಾಗಿ ನೆರವೇರ್ಸಿ ಕೊಳ್ಳುವಂಗೆ ಈ ಕೆಳ್ಗೆ ಸಹಿ ಹಾಕಿದವುಗಳ ರೂಬ್ ರೂಬ್ ಒಪ್ಪಿ ಬರ್ದ ಲಗ್ನ ಪತ್ರಿಕೆಗೆ ಸುಭಮಸ್ತು.

(ವೀಳ್ಯಸಾಸ್ತ್ರಕ್ಕೆ ಬಂದವು)

ಗೃಹಸ್ಥರ ರುಜು

1)

2)

3)

(ಗೂಡೆನ ಕಡೆವು)

ಕುಟುಂಬಸ್ತರ ರುಜು

1)

2)

3)

ಲಗ್ನ ಪತ್ರ ಬರೆದವ್ರ ಸಹಿ

---

## ಮನ್‌ಸ್ಸ್ - 6

ಮನ್‌ಸ ಒಳ್ಳೆವ ಆಕೆ, ಕೆಟ್ಟವನಾಕೆ ಅವನ ಮನಸೇ ಕಾರಣತ್ತೆಳಕ್. ದೇವರ ಕಲ್ಪನೆ ಬಾದು ಮನಸಿನಿಂದ ಮಾತ್ರ. ಹಂಗಾಗಿ ಮನ್‌ಸೇ ಮಹಾದೇವತ್ತೇಳ್ಳೆ. ಮನ್‌ಸ್ ಪವಿತ್ರ ಆದರೂ ಸಹ ಹುಳಾದ ವಸ್ತುಂದ ಪ್ರಯೋಜನ ಏನು? ತಿಂಬಕಾದುಲೆ ಗೊಬ್ಬರಕಾದೆ. ಹಂಗೇನೆ ಮನ್‌ಸ್‌ಗೆ ಹುಳ ಬಿದ್ದರೆ ಕೆಟ್ಟ ಬುದ್ಧಿ ಬಾದಲ್ಲದೆ ಒಳ್ಳೆ ಬುದ್ಧಿ ಬಾದುಟ್ಟ. ನೆಮ್ಮದಿ ತಪ್ಪುದುಟ್ಟಾ? ಮನ್‌ಸ ಕೆಳಗಿಂದ ಮೇಲಕ್ಕೆ ಏರ್ದೆ. ಅಡಿಗೂ ಬಿದ್ದದೆ. ಒಳ್ಳ ಪವಿತ್ರ ಮನ್‌ಸ ಇರವು ಎಂದೂ ಕೆಳಮಟ್ಟಕ್ಕೆ ಇಳಿಯದುಲೆ. ಮನ್‌ಸನ ಪಾವಿತ್ರತೆ, ಸ್ವಚ್ಛತೆಯೇ ಸ್ವರ್ಗಕ್ಕೆ ದಾರಿ ಯಾಗೊಳು ಒಳ್ಳೆದ್ ಗ್ಯಾನ ಮಾಡಕು. ಒಳ್ಳೆದ್ ಹೇಳಕು, ಒಳ್ಳ ಕೆಲ್ಸ ಮಾಡಕು ಅದೇ ನಮ್ಮ ಒಳ್ಳೆ ತಿಳುವಳಿಕೆ. ಒಳ್ಳ ಮನಸ್ಸೇ ಉತ್ತಮ ಜ್ಞಾನ

— ಕೊಡವ ಭಾಷೆಲಿ : ಚೆಂದ್ರಿಮಾಡ ಮುತ್ತಪ್ಪ

— ಅರೆಭಾಷೆಲಿ : ಪಟ್ಟಡ ಪ್ರಭಾಕರ

## ನೀ ನನ್ನ ಮರೆಯುವ ಮುನ್ನ

ನೀ ನನ್ನನ್ನು ಮರೆಯುವ ಮುನ್ನ
ಮುದುಡಿದ ಕನಸುಗಳಿಗೆ
ತಿಳಿ ಹೇಳಿ ಹೋಗು

ನನ್ನದೆಯ ಹೃದಯ ಎಂಬ ಗುಡಿಯಲ್ಲಿ
ನೀ ತುಂಬಿ ಬೆಳಕು ಅಳಿಸಿ ಹೋಗು
ನಿನಗೂ ಒಲವಿದೆ

ಹೃದಯವಿದೆ ಎಂದೆಲ್ಲಾ
ನೀ ಹೇಳಿದ ಸುಳ್ಳು
ನಂಬಿಕೆಗಳಿಗೆ ಬೆಂಕಿಹಚ್ಚಿ ಹೋಗು

ನಿನ್ನ ನಗುವಿಗೆ ಕಾದಿರುವ
ಈ ಹೃದಯದ ಪ್ರೀತಿಯ ಬಡಿತಗಳನ್ನು
ನಿಲ್ಲಿಸಿಹೋಗು

— ಕಿರಣ್, ಮೇಕೇರಿ.

---

# ಪತ್ರ ವಿಭಾಗ

Mysore
570012

ಮಾನ್ಯರೆ,

ಫೆಬ್ರವರಿ ತಿಂಗಳ 'ಕೊಡಗು ಸಂಗಾತಿಯಲ್ಲಿ "ಅಮರ ಸುಳ್ಯದ ದಂಗೆ:ಗೌಡರುಗಳ ಪಾತ್ರ" ಎಂಬ ಲೇಖನ ಓದಿದೆ. ಗುರುಗಳಾದ ಡಾ||ಬಿ. ಎ. ವಿವೇಕ ರೈಯವರಿಗೆ ಕೃತಜ್ಞತೆ ಹೇಳಿರುವುದು ಹಾಗೂ ಆಧಾರ ಗ್ರಂಥಗಳಲ್ಲಿ ನನ್ನ 'ಅಮರ ಸುಳ್ಯದ ಸ್ವಾತಂತ್ರ್ಯ ಸಮರ' ಸೇರದೆ ಇರುವುದರಿಂದ ಅವರು ಬಹಳ ವರ್ಷಗಳ ಹಿಂದೆ ಬರೆದ ಲೇಖನ ಇದಾಗಿರಬಹುದೆಂದು ಯೋಚಿಸಿದೆ.

ದಂಗೆಯಲ್ಲಿ ಪ್ರಮುಖ ಪಾತ್ರವಹಿಸಿದ 1) ಕುಡೆಕಲ್ಲು ಪುಟ್ಟ 2) ಕುಂಚಡ್ಕ ತಿಮ್ಮ 3) ದೇರಾಜೆ ಬಚ್ಚ4)ಗುಡ್ನದ ಸುಬ್ಬಪ್ಪ 5)ಮನಿಯನ ಸುಬ್ರಾಯ (ರಂಗಪ್ಪ, ತಿಮ್ಮ) ಇವರ ಹೆಸರುಗಳು ಬಿಟ್ಟುಹೋಗಿವೆ. ಚಿರಂಜಿ ಸುಬ್ಬಯ್ಯ-ಕುರುಂಜಿ ಎನ್ನುವುದಕ್ಕೆ ಆಧಾರ ಇದೆಯೇ? ಮನಿಯನ, ಮಾನದ, ಮಡ್ಡಿಯಾಲ ಮತ್ತು ಮಣಿಯದ ಎಂಬುದಾಗಿ ಬೇರೆ ಬೇರೆ ಹೇಳಲ್ಪಟ್ಟಿದೆ.

ನಾನು ಗುರುತಿಸಿದಂತೆ ಸುಮಾರು 12 ವ್ಯತ್ಯಾಸಗಳು ಕಂಡು ಬರುತ್ತವೆ.

1) ಐಗೂರು- ಕೊಡಗಿಗೆ ಸೇರಿಸಲ್ಪಟ್ಟದ್ದು (1802ರಲ್ಲಿ ವೆಂಕಟಾದ್ರಿನಾಯಕನನ್ನು ಗಲ್ಲಿಗೇರಿಸಿದ ನಂತರ)- 1804ರಲ್ಲಿ

2) ಅಟ್ಲೂರು ರಾಮಪ್ಪಯ್ಯನನ್ನು ಯಕ್ಷಗಾನದಲ್ಲಿ ತೋರಿಸಿದಂತೆ ಕೊಲ್ಲಲಿಲ್ಲ. ಬೆಳ್ಳಾರೆಯಲ್ಲಿ ವಿಚಾರಣೆ ಮಾಡಿ ಕಲ್ಯಾಣಸ್ವಾಮಿ ಕೊಟ್ಟ ಮರಣದಂಡನೆಯ ಆಜ್ಞೆ ಪ್ರಕಾರ ತಲೆಕಡಿಯಲಾಯಿತು. (ಕೆ. ಆರ್. ವಿದ್ಯಾಧರರ ಲೇಖನಕ್ಕೆ ಆಧಾರಗಳಿವೆ.)

3.) ಸುಳ್ಯದ ಖಜಾನೆ ವಶ ಪಡಿಸಿಕೊಂಡ ಮಾಹಿತಿಗೆ ಆಧಾರ ಸಿಕ್ಕಿಲ್ಲ.

4) 1837 ಮಾರ್ಚ್31ರಲ್ಲಿ ತೋಡಿಕಾನ ಮಾರ್ಗದಲ್ಲಿ ಹೋರಾಟ ನಡೆದುದಕ್ಕೆ ಆಧಾರ ಸಿಕ್ಕಿಲ್ಲ.

5) ಕಾಟನ್ ವರದಿಯ ಪ್ರತಿ ಪುಟದ ಪ್ರಾರಂಭದಲ್ಲಿ "ಫೋರ್ಟ್ ಸೈಂಟ್ ಜಾರ್ಜ್ 4 ಜನವರಿ 1839" ಎಂದಾಗಿ ಬರೆದಿದೆ. ಕಾಟನ್ 1837 ಎಂದು ಬರೆಯುವುದು ಸರಿಯಲ್ಲ.

6) ಕುಂಬಳೆ ಸುಬ್ರಾಯ ಹೆಗ್ಗಡೆ ಪಾಣೆಮಂಗಳೂರಿಗೆ ಬಂದು ಸೇರುವುದಿಲ್ಲ.

7) ಮೇ 15ರಂದು ರಾಮಗೌಡ ಸೆರೆಸಿಕ್ಕಿ ಗಲ್ಲಿಗೇರಿಸಲ್ಪಟ್ಟಿಲ್ಲ.

8) ಕೂಜುಗೋಡು ಮಲ್ಲಪ್ಪ ಗಲ್ಲಿಗೇರಿಸಲ್ಪಟ್ಟಿದ್ದಕ್ಕೆ ಆಧಾರ ಸಿಕ್ಕಿಲ್ಲ.

9) 1934ರಲ್ಲಿ ಸುಳ್ಯದಲ್ಲಿ ಗುಡ್ಡೆಮನೆ ಅಪ್ಪಯ್ಯ ಸುಭೇದಾರರಾಗಿದ್ದಕ್ಕೆ ಆಧಾರ ಸಿಕ್ಕಿಲ್ಲ.

10) ಅಟ್ಲೂರು ರಾಮಪ್ಪಯ್ಯನ ಮರಣದಂಡನೆಯಲ್ಲಿ ಸುಬ್ರಾಯ ಪಾತ್ರ ಇಲ್ಲ.

11) ಹುಲಿಕಡಿದ ನಂಜಯ್ಯ ಸೆರೆಸಿಕ್ಕಿದ್ದಕ್ಕೆ ಯಾವುದೇ ಆಧಾರ ಸಿಗುವುದಿಲ್ಲ.

12) ಕೋಲ್ಚಾರು ಕೂಸಣ್ಣಗೌಡ, ಚೆಂಬು ಅಣ್ಣೆಗೌಡ ಇವರು ಯಕ್ಷಗಾನದಲ್ಲಿಯ ಪಾತ್ರಗಳಿಬಹುದು. ಚೆಟ್ಟಿ, ಕುರ್ತು, ಕುಡಿಯ ಸಹೋದರರು ಕೂಡಾ ಚರಿತ್ರೆಯಲ್ಲಿ ಕಂಡುಬರುವುದಿಲ್ಲ.

— ಎಸ್. ಎಸ್. ದೇವಿಪ್ರಸಾದ್. ಸಂಪಾಜೆ.

---

ಮಾನ್ಯರೆ,

ಕೊಡಗು ಸಂಗಾತಿಯಲ್ಲಿ ಹಲವು ಒಳ್ಳೆಯ ವಿಚಾರಗಳು ಬರುತ್ತಿದೆ. ಸರ್ಪಗಂಧ, ಸಂಗಾತಿ ಭವಿಷ್ಯ, ಮಿಸ್ಟರ್ ರಾಜುನ ಕತೆ, ಇದೆಲ್ಲಾ ತುಂಬಾ ಇಷ್ಟವಾಗಿದೆ. ಮತ್ತು ಬಾರಿಯಂಡ ಜೋಯಪ್ಪರವರು ಬರೆದ "ಕುಕ್ಕಾ" ತುಂಬಾ ಹಿಡಿಸಿತ್ತು. ಗೌಡ ಜನಾಂಗದಲ್ಲಿ ಇನ್ನು ಹೆಚ್ಚು ಹೆಚ್ಚು ಪ್ರತಿಭೆಗಳು ಮೇಲೆ ಬರಲಿ. ಈ ಸಂಗಾತಿ ಸೂರ್ಯ ಚಂದ್ರರಂತೆ ಚಿರಾಯುವಾಗಲಿ ಎಂದು ಆಶಿಸುವ,

— ಮುದಿಯಾರ್ ಆರ್. ಯಶು

೨ನೇ ಮೊಣ್ಣಂಗೇರಿ.

---

## ನಗೆ ಹನಿ

ಪಿಳ್ಳಿ: ಚಾಂಪ, ಚಾಂಪ ಈಶ್ವರ, ಶಂಕರ, ನೀಲಕಂಠ, ಇವೆಲ್ಲ ಒಂದೇ ದೇವರುಗ ಗಡ ಹೌದಾ?

ಚಾಂಪ : ನಿಂಗೆ ಯಾರು ಹೇಳ್ದ ?

ಪಿಳ್ಳಿ: ಮಾಷ್ಟ್ರು ಹೇಳ್ದ

ಚಾಂಪ : ಆ ಮಾಷ್ಟ್ರಿಗೆ ಎಂತ ಗೊತ್ತುಟುನೆ ನಾನು ಹೇಳ್ನೆ ಕೇಳ್ ಈಶ್ವರ ಕುಟ್ಟನ ಮಾಚಯ್ಯಜ್ಜನ ಮಂಜ್ಞ, ಶಂಕರ ಕುಟ್ಟನ ಸುಬ್ಬಯಜ್ಜನ ಮಂಜ, ನೀಲಕಂಠ ಕುಟ್ಟನ ಚಿಣ್ಣಪ್ಪಜ್ಜ ನ ಮಂಜ ಸರಿತಾನೆ ?

ಪಿಳ್ಳಿ: ನೀನೆ ನಮ್ಮ ಮಾಷ್ಟ್ರು ಆಕಾಯ್ತು ಚಾಂಪ.


— ತೊತ್ತಿಯನ ಮಿಥುನ್, ಚೇರಂಬಾಣೆ.

---

ಕಂಡದ್ ಹೇಳಿರೆ ಕಂಡಂತ ಕೋಪ!

## ಸಂಗಾತಿ ಪದ ಬಂಧ — ೩ರ ಉತ್ತರ

ಗೌಡರ ಮನೆ ಹೆಸರನ್ನು ಗುರ್ತಿಸಿ — ಸಿಂಚನ



— ಅಚ್ಚಲ್ಯಾಡಿ ಕವಿತ ಬೋಜಪ್ಪ, ಕಾಟಕೇರಿ.

## ನಿಧನ



ತಮ್ಮಣ್ಣನವರು

ಮಡಿಕೇರಿ ತಾಲೂಕು ಅವಂದೂರು ಗ್ರಾಮದ ಪಟ್ಟಡ ತಮ್ಮಣ್ಣನವರು ದಿನಾಂಕ 13-3-2001ರಂದು ಅಕಾಲ ಮರಣವನ್ನಪ್ಪಿದರು. ಇವರಿಗೆ 55 ವರ್ಷ ಪ್ರಾಯವಾಗಿತ್ತು. ಶ್ರೀಯುತರು ಪತ್ನಿ, ಇಬ್ಬರು ಗಂಡು ಮಕ್ಕಳು ಹಾಗೂ ಒಬ್ಬಳು ಹೆಣ್ಣು ಮಗಳನ್ನು ಅಲ್ಲದೆ ಅಪಾರ ಬಂಧುವರ್ಗವನ್ನು ಅಗಲಿದ್ದಾರೆ. ದಿವಂಗತರ ತಿಥಿ ಕರ್ಮಾಂತರವನ್ನು ಇದೇ ತಿಂಗಳ ತಾರೀಖು 29-03-2001ರ ಗುರುವಾರದಂದು ಮೃತರ ಸ್ವಗೃಹದಲ್ಲಿ ನಡೆಯಲಿದೆ ಎಂದು ತಿಳಿದು ಬಂದಿದೆ.

ವರದಿ : ರೀನಾ ಉಲ್ಲಾಸ್,

**ನಗೆಹನಿ :** ಟೀಚರ್ : ಬಸ್ ಯಾಕೆ ಬಸ್ ಸ್ಟ್ಯಾಂಡಿನಲ್ಲಿ ನಿಲ್ತದೆ.
ಗುಂಡ: ಅದಿಕ್ಕೆ ಕಾಲಿಲ್ಲ ಅದಿಕ್ಕೆ ನಿಲ್ತದೆ

— ತೊತ್ತಿಯನ ಮಿಥುನ್, ಚೇರಂಬಾಣೆ.

## ನಗೆಹನಿಗಳು

### ಗೂಬೆ - ಹಗಲು

ಬಸ್ಸ್‌ಗೆ ನಿತ್ತಿದ್ದ ಅವಳ್ಳ ಕೇಳಿಕೆ ಹೋಚ್‌ತಿತ್,
ಅವ : ಹುಣ್ಣಿಮೆ ಚಂದ್ರ ಹಗಲ್‌ಲೆ ಬಂದುಟ್ಟುಲ ಇದಕ್ಕೆ ಕಾರಣ ಎಂತದ್.
ಅವ್ಳ : ಗೂಬೆಗ ಹಗಲ್ ಹೊತ್ತ್ ಮಾತಾಡಿಕೆ ಸುರು ಮಾಡ್‌ದ್ದಂದ ತ ಹೇಳಿ ಆಕನ, ಅವನ ಕವಿತ್ವ ಎಲ್ಲಾ ಹಾರಿ ಹೋತು

* * *

ಮಂತ್ರಿ ವೈದ್ಯಕೀಯ ಚಿಕಿತ್ಸೆ ಮಾಡ್ಸಿಯಾದ ಮ್ಯಾಲೆ ರಿಪೋರ್ಟ್‌ನ ಪಿ.ಎ.ಗೆ ಕೊಟ್ಟ್‌ಕಂಡ್ ಹೇಳ್ದೆ ಇದರ ಅರ್ಥ ಎಂತತ ಸ್ವಲ್ಪ ಬಿಡ್‌ಸಿ ಹೇಳ್‌ತ.

ಆಗ ಪಿ.ಎ. ಹೇಳ್ದೆ ಈ ರಿಪೋರ್ಟ್‌ ಪ್ರಕಾರ ನಿಮ್ಮ ಬ್ಲಡ್ ಪ್ರೆಷರ್ ಲಂಚದ ಹಗರಣಗಳ ತರ ಏರ್‌ತಾ ಉಟ್ಟು, ಶ್ವಾಸಕೋಶಗ ಹುಸಿ ಹುಸಿ ಆಶ್ವಾಸನೆ ಕೊಡ್ತಾ ಒಳೊ, ಹೃದಯ ರಾಜಿನಾಮೆ ಕೊಡಿಕೆ ತಯಾರಾಗಲೊತ ಹೇಳ್ದೆ.

— ಊರೋಳನ ಬೀನ, ಅವಂದೂರು.

ನೆಂಟರ ಮೇಲೆ ಪ್ರೀತಿ ಅಕ್ಕಿ ಮೇಲಿ ಆಶೆ.

# ಸುಂಠಿಕೊಪ್ಪ ನಾಡಿನ ಅತ್ತೂರು ನೆಲ್ಲೂರು ಕ್ಷೇತ್ರದ ತಾಲ್ಲೂಕು ಪಂಚಾಯಿತಿ ಸದಸ್ಯರಾಗಿ ಆಯ್ಕೆ ಆದ ಶ್ರೀ ಕುಂಜಿಲನ ಸೋಮಣ್ಣ ಮಂಜುನಾಥ



ಬೆಳೆಯ ಗುಣ ಮೊಳಕೆಯಲ್ಲಿ ಎಂಬ ಕನ್ನಡ ನಾಣ್ನುಡಿ ಯಂತೆ ಶ್ರೀ ಕುಂಜಿಲನ ಸೋಮಪ್ಪ ಮಂಜುನಾಥನವರು ಚಿಕ್ಕ ಪ್ರಾಯದಿಂದಲೇ ನಾಯಕತ್ವವನ್ನು ಮೈಗೂಡಿಸಿ ಕೊಂಡವರು ಎಂಬುದಕ್ಕೆ ಸಾಕ್ಷಿಯಾಗಿ ಅಪಾರ ಶ್ರಮ ವಹಿಸಿ, ನಿಷ್ಠೆ ಪ್ರಾಮಾಣಿಕತೆ ಯಿಂದಲೂ ಕಾಂಗ್ರೆಸ್ಸಿನಲ್ಲಿದ್ದುಕೊಂಡೆ ಸುಂಠಿಕೊಪ್ಪ ನಾಡಿನ ತಾಲ್ಲೂಕು ಪಂಚಾಯಿತಿ ಸದಸ್ಯರಾಗಿ ಜಯಿಸಿದ್ದು ಸಾಮಾನ್ಯವೇನಲ್ಲ. ಕೆಲವೊಮ್ಮೆ ಕೇಳಲು ಚೆಂದಾ. ನೋಡಲು ಅಂದವಾಗಿರುತ್ತದೆ. ಆದರೆ ಯಾವುದೇ ವಿಚಾರವನ್ನು ಜಯಿಸಿ ತನ್ನದಾಗಿರಿಸಿಕೊಳ್ಳುವುದು ಸುಲಭ ಸಾಧ್ಯವೇನಲ್ಲ, ಇಂತ ಸಾಧನೆಯನ್ನು ಮಾಡಿ ತೋರಿಸಿದ್ದಾರೆ ಶ್ರೀ ಕುಂಜಿಲನ ಎಸ್. ಮಂಜುನಾಥನವರು.

ಅತ್ತೂರುನೆಲ್ಲೂರು ಗ್ರಾಮದ ಕುಂಜಿಲನ ಸೋಮಪ್ಪ ಮತ್ತು ಬೊಳ್ಳಮ್ಮ ದಂಪತಿಗಳ ಮಗನಾಗಿ ಮಂಜುನಾಥನವರು ದಿನಾಂಕ 3-12-1958ರಲ್ಲಿ ಜನಿಸಿದರು. ಇವರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಕೊಡಗರ ಹಳ್ಳಿಯಲ್ಲಿಯೂ, ನಂತರ ಹೈಸ್ಕೂಲ್ ವಿದ್ಯೆಯನ್ನು ಸುಂಠಿಕೊಪ್ಪದಲ್ಲಿಯೂ ತದನಂತರ ಪದವಿಯನ್ನು ಮಡಿಕೇರಿ ಸರ್ಕಾರಿ ಕಾಲೇಜಿನಲ್ಲಿಯೂ ಮಾಡಿದರು. ತನ್ನ ಕಾಲೇಜು ದಿನಗಳಲ್ಲಿ ಕಾಲೇಜು ನಾಯಕನಾಗಿ ಮಾರ್ಪಟ್ಟವರು ಶ್ರೀ ಮಂಜುನಾಥನವರು.


ಕಂಬಿಬಾಣೆ ಗ್ರಾಮ ಪಂಚಾಯಿತಿ ಸೊಸೈಟಿಯ ಲೈಫ್ ಪ್ರೆಸಿಡೆಂಟ್‌ರಾಗಿಯೂ, ಅತ್ತೂರು ನೆಲ್ಲೂರು ಗ್ರಾಮ ಪಂಚಾಯಿತಿ ಸದಸ್ಯರಾಗಿಯೂ, ಸುಂಠಿಕೊಪ್ಪನಾಡಿನ ಹೈಸ್ಕೂಲು ಅಭಿವೃದ್ಧಿಮಂಡಳಿಯ ನಿರ್ದೇಶಕರಾಗಿಯೂ ಹಾಗೂ ತಾಲ್ಲೂಕು ಪಂಚಾಯಿತಿ ಸದಸ್ಯರಾಗಿಯೂ ಸೇವೆ ಸಲ್ಲಿಸುತ್ತಿರುವ ಇವರ ಕಾರ್ಯವ್ಯಾಪ್ತಿ ಅಪಾರವಾದದ್ದು. ಈಹಿಂದೆ ಮಡಿಕೇರಿಯ ಕೊಡಗು ಗೌಡ ವಿದ್ಯಾ ಸಂಘದ ನಿರ್ದೇಶಕರಾಗಿ 1985ರಿಂದ 1990ರ ತನಕ ದುಡಿದ ಕೀರ್ತಿ ಶ್ರೀಯುತರದು.

ಹಾಗೇಯೇ 1980ರಿಂದ 1999ರವರೆಗೆ ಅತ್ತೂರು ನೆಲ್ಲೂರು ಮಂಡಲ ಪಂಚಾಯಿತಿ ಸದಸ್ಯರಾಗಿದ್ದು, 2000-2006ರ ಅವಧಿಗೆ ಕೊಡಗರ ಹಳ್ಳಿ ನೇತಾಜಿಯವರ ಸಂಘದ ಕಾರ್ಯದರ್ಶಿಯಾಗಿಯೂ ದುಡಿಯುತ್ತಿದ್ದಾರೆ. ಹಾಲಿ ತಾಲ್ಲೂಕು ಪಂಚಾಯಿತಿ ಸದಸ್ಯರಾಗಿ, ಉತ್ತಮ ಸೇವೆ ಬಡಜನರಿಗೆ ನೀಡುತ್ತಾ ಜನಾನುರಾಗಿರುವರು. ರೈತಾಪಿಯಾಗಿದ್ದು ಜೀವನೋಪಾಯಕ್ಕಾಗಿ ಕಾಫಿ ವ್ಯಾಪಾರವನ್ನು ಸಹ ಮಾಡುತ್ತಿರುವರು.

ಜನಾಂಗದ ಬಗ್ಗೆ ತಮ್ಮ ಅಭಿಪ್ರಾಯವೇನು ಎಂದು ಸಂಗಾತಿ ಕೇಳಿದ ಪ್ರಶ್ನೆಗೆ ಸದ್ಯಕ್ಕೆ ನಮ್ಮಲ್ಲಿಒಗ್ಗಟ್ಟಿನ ಕೊರತೆಯಿಂದೆ. ಯುವಜನತೆ ಸಂಘಟಿತರಾಗಿ ತಮ್ಮನ್ನು ತಾವೇ ಅರಿತುಕೊಳ್ಳಬೇಕು. ಜನಾಂಗಕ್ಕಾಗಿ ಹೆಚ್ಚಿನ ಕೆಲಸವನ್ನು ಮಾಡಬೇಕಾದಾಗ ಈ ಯುವಕರು ಅರ್ಥೈಸಿ ಮಾಡಬೇಕು. ಸಂಗಾತಿ ಪತ್ರಿಕೆ ಹುಟ್ಟಿದಂದಿನಿಂದಲೂ ಜನಾಂಗಕ್ಕಾಗಿ ಸಾಕಷ್ಟು ಪ್ರಚಾರ ಕಾರ್ಯ ತಂದಿದೆ. ಆದರೆ ಸಂಘ ಸಂಸ್ಥೆಗಳ ಕೈವಾಡವೇನು ಸಾಲದು ಎಂದು ನೊಂದು ಹೇಳುತ್ತಿದ್ದಾರೆ. ಕೊಡಗು ಸಂಗಾತಿ ಇನ್ನೂ ಹೆಚ್ಚಿನ ಪ್ರಗತಿಯನ್ನು ಸಾಧಿಸಲಿ, ಅಲ್ಲದೆ ಸಮಾಜದ ಬಂಧುಗಳಿಗೆ ಇರುವ ಏಕೈಕ ಪತ್ರಿಕೆಗೆ ಸಹಕಾರ ನೀಡಬೇಕಲ್ಲದೆ ತಾತ್ಸಾರದಿಂದ ಕಾಣುವುದು ಸರಿಯಲ್ಲವೆಂದು ಅಭಿಪ್ರಾಯ ವ್ಯಕ್ತಪಡಿಸಿದಲ್ಲದೆ, ನಿಮ್ಮ ಮುಂದಿನಗುರಿಯೇನು ಎಂದು ಕೇಳಿದ್ದಕ್ಕೆ ಉತ್ತಮ ರೀತಿಯಲ್ಲಿ ಈಗಿರುವ ಪದವಿಯಲ್ಲಿಯೇ ಸೇವೆ ಸಲ್ಲಿಸುವುದಲ್ಲದೆ ನಾಲ್ಕು ಜನಕ್ಕೆ ತನ್ನಿಂದ ಒಳ್ಳೆಯದಾದರೆ ಅದೇ ನನಗೆ ತೃಪ್ತಿಯೆಂದರು.

ಕುಂಜಿಲನ ಮಂಜುನಾಥನವರು ಮಡಿಕೇರಿ ತಾಲ್ಲೂಕು ಭಾಗಮಂಡಲನಾಡಿನ ಕಾನೆಹಿತ್ಲು ಸಣಯ್ಯ ಮತ್ತು ಯಂಕಮ್ಮ ದಂಪತಿಗಳ ಪುತ್ರಿ ಪುಷ್ಪಲತಳನ್ನು ಮದ್ವೆ ಆಗಿ ಇಬ್ಬರು ಮಕ್ಕಳ ತಂದೆಯಾಗಿರುವರು. ಪುಷ್ಪಲತರವರು ಪದವಿಧರರು ಅಲ್ಲದೆ ಉತ್ತಮಗೌಡ ಗೃಹಿಣಿಯಾಗಿದ್ದಾರೆ. 10 ವರ್ಷದ ಮಗಳು ಜೀವಿತ ಮತ್ತು 8 ವರ್ಷದ ಮಗ ಚೇತನ್ ಹಾಗೂ ಸಹಧರ್ಮಿಣಿ ಪುಷ್ಪಲತಾರ ಸಂಸಾರದೊಂದಿಗೆ ಸುಖಸಂಸಾರ ನಡೆಸುತ್ತಿರುವ ಶ್ರೀ ಮಂಜುನಾಥರ ರಾಜಕೀಯ ಜೀವನಕ್ಕೆ ಶ್ರೀ ಕುಲಗುರು ವೆಂಕಟರಮಣ ಮತ್ತು ತಾಯಿ ಶೃಂಗೇರಿಯ ಕೃಪಾ ಕಟಾಕ್ಷೆ ಸದಾ ಇರಲೆಂಬುದಾಗಿ ಕೊಡಗು ಸಂಗಾತಿ ಜನಾಂಗದ ಪರವಾಗಿ ಶುಭವನ್ನು ಹಾರೈಸುತ್ತದೆ.

ಬರಹ : ಪಟ್ಟಡ ಪ್ರಭಾಕರ



ತೆಕ್ಕೆಡೆ ಬಿ. ಉಮೇಶ್

## ಚಿರಸ್ಮರಣೆ

ನೀನ್ ನಿನ್ನ ಬದುಕ್‌ನ ಸಾರ್ಥಕಗಳಿಸದೆ ವೈಕುಂಠವಾಸಿಯಾದೆ. ನೀನ್ ಪಡ್ತಿದ್ದ ಶ್ರಮ, ಶ್ರೇಯಸ್ಸ್, ಒಳಿತ್‌ಗಳೆಲ್ಲಾ ನಮ್ಮ ಮುಂದ್ವೆ ಹಚ್ಚ ಹಸಿರಾಗಿಟ್ಟು. ನಿನ್ನ ಆತ್ಮಕ್ಕೆ ಯಾವತ್ತ್ ಚಿರಶಾಂತಿನ ಬೇಡ್ತೇವು.

ದುಃಖತಪ್ತ : ನಿನ್ನ ಅಪ್ಪ, ಅವ್ವ, ಅಣ್ಣಂದಿರ್,
ಅತ್ತಿಗೆಂದಿರ್, ಅಕ್ಕಂದರ್, ತಂಗೆ,
ಭಾವಂದಿರ್ ಮತ್ತೆ ಮಕ್ಕ

ಜನನ : 16-7-1962 ಮರಣ : 17-12-2000

Reg. No. KA/SK/MYS-88 Registered : 10-01-96 TCI Kar. 09592

## STATEMENT ABOUT OWNERSHIP AND OTHER PARTICULARS ABOUT NEWS PAPER - KODAGU SANGATHI, FORTNIGHT MAGAZINE. FORM IV (SEE RULE- 8)

| | | | |
|---|---|---|---|
| 1. | Place of Publication | : | Msyore, Karnataka State |
| 2. | Periodicity of its publication | : | Fort Night |
| 3. | Printers Name | : | **Smt. Pattada P. Sheelamani** |
| | Weather citizen of India | : | Yes/Indian |
| | (If foreigners state the country of Origin) | : | NIA |
| | Address | : | 35, Savitha Nilaya, Ist Cross, 4th Block, Jayalaximipuram, Mysore - 12 |
| 4. | Publishers Name | : | **Smt. Pattada P. Sheelamani** |
| | Weather citizen of India | : | Yes/Indian |
| | (If foreigners state the country of Origin) | : | NIA |
| | Address | : | 35, Savitha Nilaya, Ist Cross, 4th Block, Jayalaximipuram, Mysore - 12 |
| 5. | Editors Name | : | **Smt. Pattada P. Sheelamani** |
| | Weather citizen of India | : | Yes/Indian |
| | (If foreigners state the country of Origin) | : | NIA |
| | Address | : | 35, Savitha Nilaya, Ist Cross, 4th Block, Jayalaximipuram, Mysore - 12 |
| 6. | Name and address of individuals who own the News Paper & Partners or Share Holders holding more than one percent of the Total Capital | : | **Smt. Pattada P. Sheelamani** Sole Proprietor, 35, Savitha Nilaya, Ist Cross, 4th Block, Jayalaximipuram, Mysore - 12 |

I, Smt. Pattada **P. Sheelmani** hereby declare that the particulars are given above are to the best of my knowledge.

Sd/-
**Pattada Sheelamani**
Publisher

Place : Mysre
Date : 16-3-2001



## ಜೀವಾವಧಿ ಸದಸ್ಯತನ ಕೊಟ್ಟ್ಯೊಳೊ

ಸುಂಟಿಕೊಪ್ಪ ನಗರದ ಶ್ರೀ ಪಟ್ಟೆಮನೆ ಶೇಷಪ್ಪ ಮತ್ತು ಡೀಸಮ್ಮ ದಂಪತಿಗ ಮತ್ತೆ ಮಕ್ಕಳಾದ ಜೆನ್ನು, ರಿಸ್ನು ಮತ್ತೆ ವೈನಿ ಇವು ಪತ್ರಿಕೆಯ ಅಭಿವೃದ್ಧಿ ಬಯಸಿ ಜೀವಾವಧಿಸದಸ್ಯತನ ಕೊಟ್ಟ್ಯೊಳೊ.

ಈಸಂಸಾರಕ್ಕೆ ಶ್ರೀಕುಲದೇವ್ರು ವೆಂಕಟರಮಣ ಮತ್ತೆ ಶೃಂಗೇರಿ ಶಾರದಾಂಬೆಯ ಅನುಗ್ರಹ ಸದಾ ಇರಲಿತ್ತೇಳಿ ಸಂಗಾತಿ ಈ ಸಂದರ್ಭಲಿ ಶುಭ ಹಾರೈಸಿದೆ.

ಸಂಪಾದಕಿ

**Kodagu Sangathi** Kannada Fortnightly Edited, Published, Printed & Owned by Pattada P. Sheelamani, No. 35, Savitha Nilaya, I Cross, 4th Block, **Jayalaxmipuram, Mysore - 12.** And **SANGATHI** Office ✆ **: 0821/516771.** And Printed at Sri Guru Raghavendra Printers, 489, Devamba Agrahara, K. R. Mohalla, Mysore - 24. ✆ : 0821/431792.